ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಐಕ್ಯರಂಗ

ಸಂಪುಟ 17 ಸಂಚಿಕೆ 42 ರೂ. 2.00 15 ಅಕ್ಟೋಬರ್ 1995

ಗಣಪನಿಗೆ ಹಾಲು ಕುಡಿಸಿದ ಹಿಂದುತ್ವವಾದಿಗಳು ಬಡವರ ನಾಲಿಗೆಯಿಂದ ನೀರು ಸುರಿಸುವ ದೇವೇಗೌಡರು

ಮುಂದಿನ ವರ್ಷ ಮಾರ್ಚ್-ಏಪ್ರಿಲ್ ತಿಂಗಳಲ್ಲಿ ನಡೆಯಬಹುದಾದ ಲೋಕಸಭೆ ಚುನಾವಣೆ ಹಲವಾರು ರಾಜಕೀಯ ಪಕ್ಷಗಳಿಂದ ದೊಂಬರಾಟ ನಡೆಸುತ್ತಿದೆ. ಮತಗಳಿಕೆಯ ಸುಲಭ ಸಾಧನೆ ಯಾವುದು ಎಂಬುದನ್ನೇ ಮುಖ್ಯ ಗುರಿಯಾಗಿಟ್ಟುಕೊಂಡು ಜನರಲ್ಲಿ ಭ್ರಮೆ ಉಂಟುಮಾಡುವ ದೊಂಬರಾಟಗಳು ಪ್ರಾರಂಭವಾಗಿದೆ. ಆರ್.ಎಸ್.ಎಸ್. ವಿಶ್ವಹಿಂದೂ ಪರಿಷತ್, ಬಿಜೆಪಿಗಳಂಥ ಹಿಂದುತ್ವವಾದಿಗಳು ಗಣಪನಿಗೆ ಹಾಲುಣಿಸುವ ಮೂಲಕ ವಿಶ್ವಾದ್ಯಂತ ಖ್ಯಾತಿ ಪಡೆದರು. ಭಾರತ ದೇಶದ ಜನರಲ್ಲಿ ಹುದುಗಿಕೊಂಡಿರುವ ಮೂಢ ನಂಬಿಕೆಯನ್ನು ಬಡಿದೆಬ್ಬಿಸಿ, ಗಣಪತಿ ಹಾಲುಕುಡಿಯಲು ಸಾಧ್ಯವೇ ಎಂಬ ವಿಷಯದ ಕುರಿತು ತುಸು ಚಿಂತನೆಗೆ ಅವಕಾಶ ಒದಗಿಸಿಕೊಡದೆ ಹಿಂದುತ್ವವಾದಿಗಳ "ಗೋಬೆಲ್ಸ್ ಪ್ರಚಾರ" ಯಾವ ರೀತಿ ಎಷ್ಟು ಗಾಂಭೀರ್ಯ ಪಡೆದು ಅತ್ಯಂತ ತ್ವರಿತ ಗತಿಯಲ್ಲಿ ಮೇಲ್ಮಟ್ಟಕ್ಕೆ ಹರಡಿತ್ತೋ ಅಷ್ಟೇ ತ್ವರಿತಗತಿಯಲ್ಲಿ ಅದು ಸುಳ್ಳು ಎಂದು ಸಾಬೀತುಗೊಳಿಸಿ ಅದನ್ನು ಪಾತಾಳಕ್ಕಿಳಿಸಿತು. ಇದು ದೇವಮಾನವ ಚಂದ್ರಸ್ವಾಮಿ ತಂತ್ರವೊ, ಹಿಂದುತ್ವವಾದಿಗಳ ಜೊತೆ ಸೇರಿ ನಡೆಸಿದ ಕುತಂತ್ರವೊ ಎಂಬ ವಿಷಯದ ಕುರಿತು ಗಂಭೀರ ಚಿಂತನೆ ನಡೆದಿದೆ. ಆದರೆ ಗಣಪತಿ ಹಾಲು ಕುಡಿದ ಪ್ರಚಾರ ಹಿಂದುತ್ವದ ಮಹಿಮೆ ಕುರಿತು ಜನರಲ್ಲಿ ಮೂಢ ನಂಬಿಕೆ ಹುಟ್ಟಿಸಿ ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಮತಗಿಟ್ಟಿಸಿ ದಿಲ್ಲಿಯಲ್ಲಿ ದರ್ಬಾರ ನಡೆಸಬೇಕೆಂಬ ಹಿಂದುತ್ವವಾದಿಗಳ ಹಗಲು ಕನಸಿನ ಪ್ರತೀಕವೆಂದು ಈಗಾಗಲೇ ಜನರಿಗೆ ತಿಳಿದು ಹಾಲು ಕುಡಿದ ಗಣಪ ಗುಜರಾತಿನಲ್ಲಿ ಬಿಜೆಪಿ ಶಾಸಕರಲ್ಲಿ ಜಗಳಹಚ್ಚಿ ಬಿಜೆಪಿಯ ಕೇಶೂಭಾಯಿ ಪಟೇಲರ ಸರ್ಕಾರವನ್ನು ಅಧಿಕಾರದಿಂದ ಕೆಳಗಿಳಿಸುವ ಸುಗ್ರೀವಾಜ್ಞೆ ಹೊರಡಿಸಿ ದೇಶಾದ್ಯಂತ ಬಿಜೆಪಿ ಪ್ರಭಾವಕ್ಕೆ ಕೊಡಲಿಯೇಟು ಕೊಟ್ಟಿರುವುದು ಬಿಜೆಪಿ ಬಣದಲ್ಲಿ ನಡುಕ ಉಂಟುಮಾಡಿದೆ. ತಮಗಾಗುತ್ತಿರುವ ಈ ಭಾರೀ ಸೋಲನ್ನು ಮುಚ್ಚಿಕೊಳ್ಳಲು ಬಿಜೆಪಿಯವರು ಹಿಂದುತ್ವವಾದಿಗಳ ಜೊತೆಸೇರಿ ಏಕಾತ್ಮತಾಯಾತ್ರೆ ಕೈಗೊಂಡಿದ್ದಾರೆ.

ಅತ್ತ ಹಿಂದುತ್ವವಾದಿಗಳು ಗಣಪ ಹಾಲು ಕುಡಿಯುವ ಪ್ರಚಾರದ ಮೂಲಕ ಹಿಂದುತ್ವವನ್ನು ಕೆದಕಿ ಕೆದಕಿ ಮೇಲಕ್ಕೆತ್ತುತ್ತಿರುವಾಗ, ಇತ್ತ ದೇವೇಗೌಡರು 50 ಸಾವಿರ ಹುದ್ದೆಗೆ ನೇಮಕ, ಕೊಳಚೆ ಪ್ರದೇಶದ ನಿವಾಸಿಗಳಿಗೆ ಗುಂಪು ವಿಮೆ, ನಗರವಾಸಿಗಳಿಗೂ ಅಗ್ಗದರದ ಆಹಾರ ಧಾನ್ಯ ಪೂರೈಕೆ, 25 ಸಾವಿರ ಶಿಕ್ಷಕರ ನೇಮಕ, ಮಾಸಾಶನದಲ್ಲಿ ಹೆಚ್ಚಳ, ಅನಧಿಕೃತ ಮನೆಕಟ್ಟಿಸಿಕೊಂಡವರಿಗೆ ಪಟ್ಟಾವಿತರಣೆ ಮುಂತಾದ ಜನಪರ ಯೋಜನೆಗಳನ್ನು ಘೋಷಿಸಿ ಬಡ ಮಧ್ಯಮ ಜನರ ನಾಲಿಗೆಯಲ್ಲಿ ಒಂದೇ ಸಮನೆ ನೀರು ಸುರಿಯುವಂತೆ ಮಾಡಿದ್ದಾರೆ.

ಎಡಪಕ್ಷಗಳ ಜೊತೆ ಹೊಂದಾಣಿಕೆಯಲ್ಲಿರುವ ರಾಷ್ಟ್ರೀಯ ರಂಗದ ಒಂದು ಭಾಗವಾಗಿರುವ ಜನತಾದಳ ತನ್ನ ಅನುಭವಗಳಿಂದ ಕಿಂಚಿತ್ತೂ ಬುದ್ಧಿಕಲಿತಿಲ್ಲ. ಬುದ್ಧಿಕಲಿಯಬೇಕೆಂಬ ಹವ್ಯಾಸವನ್ನೂ ಹೊಂದಿಲ್ಲ ಎಂಬ ವಿಷಯ ದೇವೇಗೌಡರು ವಿಧಾನ ಸಭೆಯಲ್ಲೂ ಹಾಗೆಯೇ ಎಸ್.ಆರ್.ಬೊಮ್ಮಾಯಿ ಅವರು ವಿದೇಶಕ್ಕೆ ಹೊರಡುವ ಸನ್ಮಾನ ಸಮಾರಂಭದಲ್ಲೂ ರಾಜ್ಯದ ಜನತೆಯ ಮುಂದಿಟ್ಟ ಹಲವಾರು ಆಶಾದಾಯಕ ಆಶ್ವಾಸನೆಗಳೇ ಸಾಕ್ಷಿ. ಇಂದಿರಾ ಗಾಂಧಿಯವರ ಗರೀಬಿ ಹಟಾವೋ ಕಾರ್ಯಕ್ರಮ ಜನರನ್ನು ಹೆಚ್ಚು ದಿವಸ ಮರುಳುಗೊಳಿಸಲಿಲ್ಲ. ಜನತಾಪಕ್ಷದ ಮೊರಾರ್ಜಿ ದೇಸಾಯಿಯವರ ಒಂದು ಕೆ.ಜಿ ಸಕ್ಕರೆಗೆ ಒಂದು ರೂ ಬೆಲೆ ಆ ಸರ್ಕಾರವನ್ನು ಉಳಿಸಲಿಲ್ಲ, ವಿ.ಪಿ.ಸಿಂಗ್ ಅವರ "ಮಂಡಲ" ವರದಿಯಾಗಲೀ, ರೈತರ ಸಾಲಮನ್ನಾ ಆಗಲೀ ಆ ಸರಕಾರ 5 ವರ್ಷ ಆಡಳಿತ ನಡೆಸುವ ಅವಕಾಶ ಪಡೆಯಲಿಲ್ಲ, ನಮ್ಮ ರಾಜ್ಯದ ಹೆಗಡೆ ಸರಕಾರ, ಬೊಮ್ಮಾಯಿ ಸರಕಾರ, ಬಂಗಾರಪ್ಪ, ಮೊಯಿಲಿ ಸರ್ಕಾರಗಳೆಲ್ಲ ಅಗ್ಗದರದ ಜನತಾ ಧೋತಿ-ಸೀರೆ, ಬಡವರ ಲಗ್ನದಲ್ಲಿ ಬಂಗಾರದ ಮಾಂಗಲ್ಯ, ಮಕ್ಕಳಿಗೆ ಪುಕ್ಕಟೆ ಸಮವಸ್ತ್ರ, ಹಾಲು, ತತ್ತಿ, ಒಂದುರೂಪಾಯಿ-ಇವು ಯಾವುದೂ ಆ ಸರಕಾರಗಳನ್ನು ಉಳಿಸಲಿಲ್ಲ. ದೇವೇಗೌಡರು ಈ ಅನುಭವಗಳನ್ನೆಲ್ಲ ನೆನಪಿಸಿಕೊಳ್ಳದೆ, ಅವುಗಳನ್ನೆಲ್ಲಾ ಗ್ರಾನೈಟ್ ಬಂಡೆಗಳಲ್ಲಿ ಮುಚ್ಚಿಟ್ಟು, ಮತ್ತೆ ಮುಂಬರುವ ಲೋಕಸಭೆ ಚುನಾವಣೆಯನ್ನು ಕಣ್ಣಮುಂದಿಟ್ಟುಕೊಂಡು ಮೇಲೆ ಹೇಳಿದ ಹಲವಾರು ಜನಪ್ರಿಯ ಯೋಜನೆಗಳನ್ನು ಘೋಷಿಸಿ ಲೋಕಸಭೆ ಚುನಾವಣೆಯಲ್ಲಿ ಎಲ್ಲಾ 28 ಸ್ಥಾನಗಳನ್ನು ಗೆಲ್ಲುವ ಕನಸುಕಾಣುತ್ತಿದ್ದಾರೆ. ಎಂಥ ವಿಪರ್ಯಾಸ ನೋಡಿ.

ಇಂಥ ಜನಪ್ರಿಯವೆಂದು ಹೇಳಿಕೊಳ್ಳುವ ಈ ಯೋಜನೆಗಳೆಲ್ಲ ಜನರ ಮಧ್ಯೆ ಪ್ರಿಯವಾಗುತ್ತಿಲ್ಲವೆಂಬ ವಿಷಯ ಸತ್ಯ ಯಾಕೆಂದರೆ ಸರಕಾರ ಘೋಷಿಸುತ್ತಿರುವ ಯೋಜನೆಗಳು ಬೆಳಕು ಕಾಣುತ್ತಿಲ್ಲ. ಕಾರ್ಯರೂಪದಲ್ಲಿ ಬರುತ್ತಿಲ್ಲ. ಯಾಕೆ? ಸರ್ಕಾರದ ಖಜಾನೆಯಲ್ಲಿ ಹಣ ಇಲ್ಲ ಅಲ್ಪಸ್ವಲ್ಪ ಬಿಡುಗಡೆ ಮಾಡಿದ ಹಣ ಆಳುವ ಪಕ್ಷಗಳ ಮುಖಂಡರ-ಕಂಟ್ರಾಕ್ಟರರ ಕಿಸೆ ಸೇರಿ ಬಿಡುತ್ತದೆ. ಹಾಗಾಗಿ ಬಡ ಜನರ ನಾಲಿಗೆಯಲ್ಲಿ ನೀರುಮಾತ್ರ ಸುರಿಯುತ್ತಿರುತ್ತದೆ. ಸುರಿಯುವ ನೀರನ್ನು ನಿಲ್ಲಿಸುವ ಸಲುವಾಗಿ ಮಕ್ಕಳಿಗಾಗಿ ರೂಪಗೊಂಡ ಕಾರ್ಯಕ್ರಮಗಳು ಇಲ್ಲವಾಗಿವೆ, ಇರಲು ಮನೆ, ದುಡಿಯಲು ನೌಕರಿ, ಅಗ್ಗದದರ ಆಹಾರ ಧಾನ್ಯ, ಲಭ್ಯವಾಗುವ ರೇಶನ್ ಕಾರ್ಡ್ ಯಾವುದೂ ಇಲ್ಲವೇ ಇಲ್ಲ. ಬರೇ ಒಣ ಆಶ್ವಾಸನೆಗಳನ್ನೆ ಕಳೆದ 9 ತಿಂಗಳಿಂದಲೂ ದೇವೇಗೌಡರು ಅವರ ಮಂತ್ರಿಗಳೂ ಉಸಿರುಗಟ್ಟಿ ಹೇಳುತ್ತಲೇ ಇದ್ದಾರೆ.

ರಾಜ್ಯದ ಅಭಿವೃದ್ಧಿ ಆಗಬೇಕಾದರೆ, ರಾಜ್ಯದ ಅರ್ಧಭಾಗ ಎದುರಿಸುತ್ತಿರುವ ಬರಗಾಲ ನಿವಾರಣೆಯಾಗಬೇಕಾದರೆ, ಕುಡಿಯುವ ನೀರಿನ ಸಮಸ್ಯೆ ಬಗೆಹರಿಯಬೇಕಾದರೆ, ನೀರಾವರಿ ಯೋಜನೆಗಳಿಗೆ ಪ್ರಾಶಸ್ತ್ಯ ನೀಡಲೇಬೇಕು. ಆದರೆ 9 ತಿಂಗಳ ಆಡಳಿತೆಯಲ್ಲಿ ನೀರಾವರಿ ಯೋಜನೆಗಳ ಕೆಲಸ ಸ್ಥಗಿತಗೊಂಡಿವೆ, ಕುಂಠಿತವಾಗಿವೆ. ಯಾಕೆ? ಸರ್ಕಾರದ ಹತ್ತಿರ ಹಣ ಇಲ್ಲ. ಕಾರ್ಖಾನೆಗಳಲ್ಲಿ ಮೆಷಿನು ಓಡುವುದಿಲ್ಲ, ಇದ್ದ ಕೈಗಾರಿಕೆಗಳು ಮುಚ್ಚಲ್ಪಡುವ, ಗೃಹಿಣಿಯರು ಅಡುಗೆ ಮನೆಯಲ್ಲಿ ಅಡಿಗೆ ಮಾಡಲು ತೊಂದರೆ ಪಡುವ, ವಿದ್ಯಾರ್ಥಿಗಳು ಅಭ್ಯಾಸ ಮಾಡಲು ಸಾಧ್ಯವಿಲ್ಲದಾಗಿರುವ ಪರಿಸ್ಥಿತಿ ಉಂಟಾಗಿದೆ. ಸಮರ್ಪಕವಾದ ವಿದ್ಯುತ್ ಪೂರೈಕೆಯಿಲ್ಲ. ಯಾಕೆ? ರಾಜ್ಯಕ್ಕೆ ಬೇಕಾದಷ್ಟು ವಿದ್ಯುತ್ ಉತ್ಪಾದನೆ ಆಗುತ್ತಿಲ್ಲ, ನಮಗೆ ಸಾಕಾಗುವಷ್ಟು ವಿದ್ಯುತ್ ಉತ್ಪಾದಿಸುವ ಸಾಧ್ಯತೆಗಳಿದ್ದರೂ ಅದರತ್ತ ಸರ್ಕಾರ ಗಮನ ಹರಿಸುತ್ತಿಲ್ಲ.

ಕೃಷಿ ಕ್ಷೇತ್ರದಲ್ಲಿ ವರ್ಷಕ್ಕೆ ಸಾವಿರಕೋಟಿ ರೂ. ಬಂಡವಾಳ ಹೂಡಿಕೆ, ಹತ್ತು ಸಾವಿರ ಕೋಟಿ ರೂ.ಗಳಿಗೂ ಹೆಚ್ಚು ಬಂಡವಾಳ ಹೂಡಿಕೆಯ 12 ಹೊಸ ಬೃಹತ್ ಉದ್ದಿಮೆಗಳ ಸ್ಥಾಪನೆ, 7 ಮಿನಿ ವಿದ್ಯುತ್ ಉತ್ಪಾದನಾ ಕೇಂದ್ರಗಳ ಸ್ಥಾಪನೆ, ಇವೆಲ್ಲ ದೇವೇಗೌಡರ ಮಂತ್ರಿಮಂಡಲದಲ್ಲಿರುವ ವಿವಿಧ ಮಂತ್ರಿಗಳ ಹೇಳಿಕೆಗಳಿವು. ಈ ಹೇಳಿಕೆಗಳಲ್ಲಿ ಏನಾದರೂ ನಿಶ್ಚಿತತೆ ಇದೆಯೇ. ಒಂದನ್ನಾದರೂ ಕೈಯಲ್ಲಿ ತೆಗೆದುಕೊಂಡು ಸಾಧಿಸಿಯೇ ತೀರಬೇಕೆಂಬ ಹಠವಾದರೂ ಕಾಣುತ್ತಿದೆಯೇ, ಏನೂ ಇಲ್ಲ.

ನರಸಿಂಹರಾಯರು ಆಗಸ್ಟ್ 15 ರಂದು ಕೆಂಪು ಕೋಟೆಯಲ್ಲಿ ಮಾಡಿದ ಭಾಷಣದಲ್ಲಿ ಪ್ರಕಟಿಸಿ ಹಲವಾರು ಯೋಜನೆಗಳಿಗೂ ದೇವೇಗೌಡರು ಘೋಷಿಸುತ್ತಿರುವ ಘೋಷಣೆಗಳಿಗೂ ತಾತ್ವಿಕವಾಗಿ ಏನೂ ವ್ಯತ್ಯಾಸವಿಲ್ಲ. ಇಬ್ಬರ ಘೋಷಣೆಯೂ ಮತಗಳಿಕೆಗಾಗಿಯೇ ರೂಪಿಸಿದವುಗಳಾಗವೆ. ನರಸಿಂಹರಾಯರ ಹತ್ತಿರ ಸಾಕಷ್ಟು ಹಣ ಇದೆ. ದೇವೇಗೌಡರ ಹತ್ತಿರ ಅದರ ಅಭಾವವಿದೆ. ಹಾಗಿರುವಾಗ ದೇವೇಗೌಡರು ಬುದ್ಧಿವಂತರಾಗಿದ್ದರೆ, ಕೃಷ್ಣ ಮೇಲ್ದಂಡೆ ಕಾವೇರಿ ಮೊದಲಾದ ನೀರಾವರಿ ಯೋಜನೆಗಳಿಗೆ ಕೂಡಲೇ ಹಣ ಪೂರೈಸಿ ಅಲ್ಲಿ ಕೆಲಸ ನಡೆಯುತ್ತಿರುವುದನ್ನು ಜನ ಕಾಣುವಂತೆ ಮಾಡಬೇಕಾಗಿತ್ತು. ಒಂದೆರಡಾದರೂ ವಿದ್ಯುತ್ ಉತ್ಪಾದನಾ ಕೇಂದ್ರಗಳ ಕೆಲಸ, ಶುರುವಾಗಬೇಕಾಗಿತ್ತು. ಒಂದೆರಡು ವರ್ಷಗಳಲ್ಲಿ ಅವುಗಳಿಂದ ಜನರಿಗೆ ನೀರು, ವಿದ್ಯುತ್ ಲಭ್ಯವಾಗುತ್ತದೆಂಬ ಖಾತರಿ ಜನರಿಗಾದರೆ ಮಾತ್ರ ಮುಂಬರುವ ಲೋಕಸಭೆಯ ಚುನಾವಣೆಯಲ್ಲಿ ಜನತಾದಳಕ್ಕೆ ಎಡಪಕ್ಷಗಳಿಗೆ ರಾಷ್ಟ್ರೀಯ ರಂಗಕ್ಕೆ ಜನಮತ ಹಾಕಬಹುದು, ಕಾಂಗ್ರೆ ಮತ್ತು ಬಿಜೆಪಿಗಳನ್ನು ಸೋಲಿಸಬಹುದು.

ಈ ಸತ್ಯಾಂಶವನ್ನು ದೇವೇಗೌಡರೂ ಜನ

ಪುಟ 6 ನೋಡಿ

ಕೇರಳದ ಪಂಚಾಯತ್ ಮತ್ತು ಸ್ಥಳೀಯ ಸಂಸ್ಥೆಗಳ ಚುನಾವಣೆ

ಪೊಲಿಟ್‌ಬ್ಯೂರೋ ಅಭಿನಂದನೆ

ಕೇರಳದಲ್ಲಿ ನಡೆದ ಮೂರು ಹಂತಗಳ ಪಂಚಾಯತ್ ಮತ್ತು ಮುನಿಸಿಪಲ್ ಸಂಸ್ಥೆಗಳ ಚುನಾವಣೆಯಲ್ಲಿ ಎಡರಂಗಕ್ಕೆ ಅಭೂತಪೂರ್ವ ವಿಜಯ ತಂದು ಕೊಟ್ಟ ಕೇರಳದ ಜನತೆಯನ್ನು ಸಿಪಿಐ(ಎಂ)ನ ಪೊಲಿಟ್ ಬ್ಯೂರೋ ಹಾರ್ದಿಕವಾಗಿ ಅಭಿನಂದಿಸಿತು. ನಗರ ಪ್ರದೇಶಗಳ ಮುನಿಸಿಪಾಲಿಟಿಗಳಲ್ಲಿ 53ರಲ್ಲಿ 39ನ್ನು ಎಡರಂಗ ಗೆದ್ದಿದೆ. ಮೂರು ಮಹಾನಗರಪಾಲಿಕೆಗಳಲ್ಲಿ ಮೂರನ್ನೂ ಎಡರಂಗ ಗೆದ್ದಿದೆ. ಹದಿನಾಲ್ಕು ಜಿಲ್ಲಾ ಪಂಚಾಯತ್‌ಗಳಲ್ಲಿ ಹತ್ತು ಜಿಲ್ಲೆಗಳನ್ನು ಎಡರಂಗ ಗೆದ್ದಿದೆ.

ಈ ವಿಜಯ ಕಾಂಗ್ರೆ ನೇತೃತ್ವದ ಮತೀಯ ಆಳುವ ಯುಡಿಎಫ್‌ಗೆ ಜನತೆ ತೋರಿದ ತಿರಸ್ಕಾರ ಎಂಬುದು ಸ್ಪಷ್ಟ. ಅದರಲ್ಲೂ ಮುಸ್ಲಿಂ ಲೀಗಿನೊಂದಿಗಿನ ಅದರ ಅಪವಿತ್ರ ಮೈತ್ರಿಯ ವಿರುದ್ಧ ಮತ. ಮತೀಯ ಶಕ್ತಿಗಳು ಮತ್ತು ಮೀಸಲಾತಿಯಲ್ಲಿ ಕೆನೆ ಪದರ ಪರಿಕಲ್ಪನೆಯನ್ನು ವಿರೋಧಿಸುವ ಕಾಂಗ್ರೆಸ್ ತಂತ್ರಗಾರಿಕೆಗೆ ಈ ಅಪಜಯವಾಗಿದೆ.

ಎಡರಂಗದ ವಿಜಯ ದೇಶದಲ್ಲಿನ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಬಲಪಡಿಸುವಲ್ಲಿ ಇದೊಂದು ಮೈಲಿಗಲ್ಲೆಂದು ಪೊಲಿಟ್ ಬ್ಯೂರೋ ಪರಿಗಣಿಸುತ್ತದೆ. ಈ ವಿಜಯವನ್ನು ಸಾಧ್ಯಗೊಳಿಸಿದ ಎಲ್ಲಾ ಕಾರ್ಯಕರ್ತರನ್ನು ಪೊಲಿಟ್ ಬ್ಯೂರೋ ಅಭಿನಂದಿಸುತ್ತದೆ.

ವಿವರಗಳಿಗೆ ಪುಟ 8 ನೋಡಿ

ವಾರದ ವ್ಯಂಗಚಿತ್ರ — ಡೆಕ್ಕನ್ ಹೆರಾಲ್ಡ್ ನಲ್ಲಿ ಮಾಯಾ ಕಾಮತ್



ಒಳಪುಟಗಳಲ್ಲಿ

ಮಹಿಳೆ ವರ್ತಮಾನ

ಏಕ ರೂಪ ನಾಗರಿಕ ಸಂಹಿತೆ

- ವಿಚಾರ ಸಂಕಿರಣ

'ಏಕ ರೂಪದ ಕಾನೂನಲ್ಲ, ನಮಗೆ ಬೇಕಾಗಿರುವುದು ಸಮಾನತೆಯ ಕಾನೂನು' - ಇದು ಬೆಂಗಳೂರಿನ ಜನವಾದಿ ಮಹಿಳಾ ಸಂಘಟನೆ ಏರ್ಪಡಿಸಿದ್ದ 'ಏಕರೂಪ ನಾಗರಿಕ ಸಂಹಿತೆ' ವಿಚಾರ ಸಂಕಿರಣದಲ್ಲಿ ಹೊಮ್ಮಿ ಬಂದ ಕಿಡಿ.

ಈ ವಿಚಾರ ಸಂಕಿರಣ ಬಬ್ಬೂರು ಗಿಡ್ಡಣ್ಣ ಮಂದಿರದಲ್ಲಿ ಸೆ. 30ರಂದು ಏರ್ಪಾಟಾಗಿತ್ತು. ಜನವಾದಿ ಮಹಿಳಾ ಸಂಘಟನೆ ಕರ್ನಾಟಕ ರಾಜ್ಯ ಘಟಕದ ಅಧ್ಯಕ್ಷೆ ನೀಲಾ ಕೆ. ಅವರ ಅಧ್ಯಕ್ಷತೆಯಲ್ಲಿ ನಡೆದ ಈ ವಿಚಾರ ಸಂಕಿರಣದಲ್ಲಿ 'ಏಕ ರೂಪ ನಾಗರಿಕ ಸಂಹಿತೆ'ಯ ಬಗ್ಗೆ ನಗರದ ಖ್ಯಾತ ವಕೀಲರಾದ ವಿ. ಗೋಪಾಲಗೌಡರು ಕಾನೂನು ದೃಷ್ಟಿಯಿಂದಲೂ, ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಕೇಂದ್ರ ಸಮಿತಿಯ ಕಾರ್ಯದರ್ಶಿಯಾದ ಬೃಂದಾ ಕಾರಟ್ ಅವರು ಮಹಿಳಾ ಚಳುವಳಿಯ ದೃಷ್ಟಿಯಲ್ಲಿ ಮಾತನಾಡಿದರು.

ಗೋಪಾಲಗೌಡರು ಮಾತನಾಡುತ್ತಾ ವೈಯಕ್ತಿಕ ಕಾನೂನು ಬಿಟ್ಟು, ಇಂಡಿಯನ್ ಪೀನಲ್ ಕೋಡ್ ಹಾಗೆ ಕ್ರಿಮಿನಲ್ ಪ್ರೋಸೀಜರ್ ಕೋಡ್ ಯಾವುದೇ ಮತ ಧರ್ಮವನ್ನು ಕಡೆಗಣಿಸದೇ ಎಲ್ಲರಿಗೂ ಅನ್ವಯಿಸುವಂತದ್ದಾಗಿದೆ. ಆದರೂ ಶಾಬಾನು ಪ್ರಕರಣದಲ್ಲಿ ಜೀವನಾಂಶವನ್ನು(ಮುಸ್ಲಿಂ ವೈಯಕ್ತಿಕ ಕಾನೂನಿನ ನೆಪವೊಡ್ಡಿ) ನಿರಾಕರಿಸಲಾಯಿತು ಎಂದೆನ್ನುತ್ತಾ ಎಲ್ಲಾ ಮತ ಧರ್ಮಗಳ ವೈಯಕ್ತಿಕ ಕಾನೂನುಗಳಲ್ಲಿ ಆಮೂಲಾಗ್ರ ಬದಲಾವಣೆ ಆಗಬೇಕಾಗಿದೆ. ಏಕ ಮದುವೆ, ಅನುವಂಶೀಯ ಆಸ್ತಿಯಲ್ಲಿ ಮಹಿಳೆಯ ಹಕ್ಕು ಹಾಗೂ ದತ್ತು ಸ್ವೀಕಾರದ ಹಕ್ಕು ಇವುಗಳನ್ನು ಕಾನೂನಿನಲ್ಲಿ ಅಳವಡಿಸಬೇಕಾಗಿದೆ ಎಂದರು.

ನಂತರದಲ್ಲಿ ಮಾತನಾಡಿದ ಬೃಂದಾ ಕಾರಟ್ ಅವರು 'ಏಕರೂಪ ನಾಗರಿಕ ಸಂಹಿತೆ' ಏನು, ಏಕೆ, ಹೇಗೆ ಎಂಬುದನ್ನು ಕೇಳುಗರಿಗೆ ಅರ್ಥವಾಗುವಂತೆ ಸ್ಪಷ್ಟಪಡಿಸಿದರು.

'ಏಕರೂಪ ನಾಗರಿಕ ಸಂಹಿತೆ' ಈಗ ದೇಶದ ಎಲ್ಲೆಡೆಯಲ್ಲಿ ಚರ್ಚೆಯ ವಿಷಯವಾಗಿದೆ. ಈ ಸಂಹಿತೆ ಮಹಿಳೆಗೆ ನೇರವಾಗಿ ಸಂಬಂಧಿಸಿದ್ದು. ಹೀಗೆ ಮಹಿಳೆಗೆ ಸಂಬಂಧಿಸಿದ ವಿಷಯವೊಂದು ರಾಷ್ಟ್ರೀಯ ವಿಷಯವಾಗಿರುವುದು ಇದು ಮೊದಲನೆಯ ಸಲ. ಅದಕ್ಕಾಗಿ ಸಂತೋಷಪಡುತ್ತಲೇ ಎಲ್ಲೆಡೆ ನಡೆಯುತ್ತಿರುವ ಚರ್ಚೆ ಪ್ರತಿಪಾದಿಸುತ್ತಿರುವ ವಿಷಯಕ್ಕೂ ಮಹಿಳಾ ಚಳುವಳಿ ಹೊಂದಿರುವ ನಿಲುವಿಗೂ ಅಜಗಜಾಂತರ ವ್ಯತ್ಯಾಸವಿದೆ ಎಂದು ಗಮನಿಸಬೇಕು. ಈ 'ಏಕರೂಪ ನಾಗರಿಕ ಸಂಹಿತೆ'ಯ ವಿಷಯದಲ್ಲಿ ಎರಡು ಅಂಶಗಳಿವೆ.

1. ಬೇರೆ ಬೇರೆ ಕೋಮುಗಳ ನಡುವಿನಲ್ಲಿ ಏಕರೂಪತೆ

2. ನಿರ್ದಿಷ್ಟ ಕೋಮಿನ ಒಳಗಡೆ ಏಕರೂಪತೆ

'ಏಕರೂಪ ನಾಗರಿಕ ಸಂಹಿತೆ'ಯ ಪರವಾಗಿ ವಾದಿಸುತ್ತಿರುವ ಬಹುಸಂಖ್ಯಾತ ಕೋಮು ಹಿಂದೂ ಮೂಲಭೂತವಾದಿಗಳು ಹಾಗೂ ವಿರೋಧಿಸುತ್ತಿರುವ ಅಲ್ಪಸಂಖ್ಯಾತ ಕೋಮು ಮುಸ್ಲಿಂ ಮೂಲಭೂತವಾದಿಗಳು ಪ್ರತಿಪಾದಿಸುತ್ತಿರುವುದು ಮೊದಲನೆಯ ಅಂಶವನ್ನು. ಅವರ ಅಭಿಪ್ರಾಯದಂತೆ 'ಏಕರೂಪ ನಾಗರಿಕ ಸಂಹಿತೆಯೆಂದರೆ ಬಹುಸಂಖ್ಯಾತ ಕೋಮುಗಳಿಗೆ ಅನ್ವಯಿಸುವ ಕಾನೂನು ಅಲ್ಪ ಸಂಖ್ಯಾತರಿಗೂ ಅನ್ವಯಿಸುವಂತಾಗಬೇಕು. ಅಥವಾ ಎಲ್ಲಾ ವೈಯಕ್ತಿಕ ಕಾನೂನುಗಳಲ್ಲಿನ ಅಂಶಗಳನ್ನು ಒಂದು ಮಾಡಿ ಏಕರೂಪದ ಕಾನೂನನ್ನು ತರಬೇಕು ಎಂಬುದು. ಹೀಗೆ ಏನಾದರೂ ಸಂಭವಿಸಿದ ಪಕ್ಷದಲ್ಲಿ ಆ ಕಾನೂನು ಮಹಿಳೆಯರ ಪಾಲಿಗೆ ನರಕ ಸದೃಶವಾಗುತ್ತದೆ. ಏಕೆಂದರೆ ಪ್ರತಿಯೊಂದು ಕೋಮುಗಳ ವೈಯಕ್ತಿಕ ಕಾನೂನಿನಲ್ಲಿ ಪುರುಷ ಪ್ರಾಧಾನ್ಯತೆ ಒಂದು ಪ್ರಮುಖ ಅಂಶವಾಗಿದೆ. ಹಾಗಾಗಿ ಇಂತಹ ಏಕರೂಪ ಕಾನೂನಿನಿಂದ ಪಿತೃಪ್ರಧಾನ ಸಮಾಜದ ವ್ಯವಸ್ಥೆ ಖಾಯಂ ಆಗುವುದೇ ವಿನಃ ಮಹಿಳೆಯರಿಗಾಗಿ ಯಾವುದೇ ಹಕ್ಕುಗಳು ಆ ಕಾನೂನಿನಲ್ಲಿ ಇರಲು ಸಾಧ್ಯವಿಲ್ಲ.

ಇಂತಹ 'ಏಕರೂಪ' ಕಾನೂನಿನ ಜಾರಿಗೆ ಪಣತೊಟ್ಟ ಮಹಾರಾಷ್ಟ್ರ(ಬಿಜೆಪಿ ಮತ್ತು ಶಿವಸೇನೆ) ಸರಕಾರ, ಬಹುಪತ್ನಿತ್ವದ ಕಷ್ಟವನ್ನು ಅನುಭವಿಸುತ್ತಿರುವಂತಹ ಮುಸ್ಲಿಂ ಹೆಣ್ಣು ಮಕ್ಕಳಿಗಾಗಿ ಕರುಣೆ ತೋರುತ್ತಿದೆ. ಇದೇನೋ ಸಂತೋಷದ ವಿಷಯವಾದರೂ, ಇದೇ ಕರುಣೆ, ಇದೇ ರೀತಿಯ ಕಷ್ಟದಲ್ಲಿರುವ ಹಿಂದೂ ಹೆಣ್ಣುಮಕ್ಕಳ ಬಗ್ಗೆ ಏಕೆ ಇಲ್ಲ?

ಭಾರತ ಸರಕಾರದ ಅಂಕಿ ಅಂಶಗಳ ಪ್ರಕಾರ ಬಹುಪತ್ನಿತ್ವದ ವಿವರಗಳು ಬೇರೆ ಬೇರೆ ಧರ್ಮದ ಪಂಗಡಗಳಲ್ಲಿ ಈ ರೀತಿಯಾಗಿವೆ.

ಬುಡಕಟ್ಟು ಜನಾಂಗ	40%
ಜೈನ	10%
ಬೌದ್ಧ	9%
ಮೇಲ್ಜಾತಿಯ ಹಿಂದು	5.9%
ಮುಸ್ಲಿಂ	5%

ಇದೆಂತಹ ವಿಪರ್ಯಾಸ. ಇಷ್ಟೇ ಅಲ್ಲ, ಮಹಾರಾಷ್ಟ್ರದಲ್ಲಿ ನಡೆಸಿದ ವಿಶೇಷ ಸರ್ವೆಯ ಪ್ರಕಾರ ಮೇಲ್ಜಾತಿಯ ಹಿಂದೂ ಕುಟುಂಬಗಳಲ್ಲಿ ಬಹು ಪತ್ನಿತ್ವದ ಪ್ರಮಾಣ ಅತಿ ಹೆಚ್ಚು ಎಂದು ತಿಳಿದುಬಂದಿದೆ.

ಮುಸ್ಲಿಂ ಮೂಲಭೂತವಾದಿಗಳ ಈಗಿನ ನಿಲುವನ್ನು ಹೀಗಳೆಯುತ್ತಿರುವ ಹಿಂದೂ ಮೂಲಭೂತವಾದಿಗಳು 1956ರಲ್ಲಿ ಮಾಡಿದ್ದೇನು?

1956ರಲ್ಲಿ ಭಾರತ ಸರಕಾರ ಹಿಂದೂ ವೈಯಕ್ತಿಕ ಕಾನೂನಿನಲ್ಲಿರುವ ಲೋಪದೋಷಗಳನ್ನು ಸರಿಪಡಿಸಿ ಕೆಲವು ಹೊಸ ಅಂಶಗಳನ್ನು ಸೇರಿಸಲು ಹೊರಟಿತು. ಆಗ ಇದೇ ಹಿಂದೂ ಮೂಲಭೂತವಾದಿಗಳು(ಹಿಂದೂ ಮಹಾ ಸಭಾ) ಧರ್ಮಕ್ಕೆ ಅಪಚಾರವಾಗುತ್ತಿದೆ(ಈಗಿನ ಮುಸ್ಲಿಂ ಮೂಲಭೂತವಾದಿಗಳಂತೆಯೇ) ಎಂದು ಹುಯಿಲೆಬ್ಬಿಸಿದ್ದರು. ಆ ಕಾರಣದಿಂದಾಗಿಯೇ ಸರಕಾರದಲ್ಲಿ ಕೆಲವು ಪ್ರಗತಿಪರ ಧೋರಣೆಯನ್ನು ಹೊಂದಿರುವ ವ್ಯಕ್ತಿಗಳಿದ್ದಾಗ್ಯೂ ಹಿಂದೂ ವೈಯಕ್ತಿಕ ಕಾನೂನನ್ನು ಯೋಜಿಸಿದ ರೀತಿಯಲ್ಲಿ ಸುಧಾರಣೆ ಮಾಡಲು ಸಾಧ್ಯವಾಗಲಿಲ್ಲ. ಕೆಲವು ಹೊಂದಾಣಿಕೆಗಳೊಂದಿಗೆ ಸುಧಾರಣೆ ಹೊಂದಿದ ಹಿಂದೂ ವೈಯಕ್ತಿಕ ಕಾನೂನು ಹಲವಾರು ಲೋಪದೋಷಗಳನ್ನು ಹೊಂದಿದ್ದು ಮಹಿಳಾ ವಿರೋಧಿಯಾಗಿದೆ.

ಉದಾಹರಣೆಗೆ ಹಿಂದೂ ಸಮಾಜದಲ್ಲಿ ಮಹಿಳಾ ಪ್ರಧಾನ(ಮುಖ್ಯ ಆದಾಯ ಮಹಿಳೆಯದಾಗಿರುವಂತಹ) ಕುಟುಂಬಗಳು 35% ರಷ್ಟು ಇದ್ದರೂ ಹಿಂದೂ ಮಹಿಳೆ ಸಹಜವಾಗಿ ತನ್ನ ಮಕ್ಕಳ ಪೋಷಕಳೆಂದು ಕರೆಯಲ್ಪಡುವುದಿಲ್ಲ. ಅನುವಂಶಿಕ ಆಸ್ತಿಯಲ್ಲಿ ಹೆಣ್ಣು ಮಕ್ಕಳಿಗೆ ಆಸ್ತಿ ಹಕ್ಕು ಇಲ್ಲ. ಒಂದು ಕಡೆ ಹೆಣ್ಣು ಮದುವೆಯಾಗಲೇಬೇಕೆಂಬ ಸಾಮಾಜಿಕ ಒತ್ತಡ, ಇನ್ನೊಂದೆಡೆ ಮದುವೆಯಾಗದಿದ್ದರೆ ಮಾತ್ರ ಹೆಣ್ಣಿಗೆ ಆಸ್ತಿ ಹಕ್ಕು. ಇದರರ್ಥ ಹೆಣ್ಣಿಗೆ ಆಸ್ತಿ ಹಕ್ಕಿನ ನಿರಾಕರಣೆಯಲ್ಲದೇ ಮತ್ತೇನು?

ಇಲ್ಲಿ ನಾವು ನೋಡುತ್ತಿರುವ ಇನ್ನೊಂದು ವಿಪರ್ಯಾಸವೆಂದರೆ ನಿರ್ದಿಷ್ಟ ಕೋಮುಗಳ ವಕ್ತಾರರದ್ದು. ನಿರ್ದಿಷ್ಟ ಕೋಮಿನ ಮೂಲಭೂತವಾದಿಗಳು, ಆ ಕೋಮಿನ ವಕ್ತಾರರೆಂದು ಪರಿಗಣಿಸಲ್ಪಡುತ್ತಾರೆಯೇ ಹೊರತು, ಆ ಕೋಮಿನ ನಾಗರಿಕರಲ್ಲ. ಇದಕ್ಕೆ ಒಂದು ಉದಾಹರಣೆ ಕೇರಳದ ಕ್ರೈಸ್ತರದ್ದು. ಕೇರಳದ ಕ್ರೈಸ್ತ ಕೋಮಿಗೆ ಸೇರಿದ ಕೆಲವು ಪ್ರಗತಿಪರ ಮಹಿಳೆಯರು ಕೆಲವು ಪ್ರಗತಿಪರ ಕ್ರೈಸ್ತ ಪಾದ್ರಿಗಳ ಮುಖಂಡತ್ವದಲ್ಲಿ ಕ್ರೈಸ್ತರ ವೈಯಕ್ತಿಕ ಕಾನೂನಿನಲ್ಲಿ ಕೆಲವು ಬದಲಾವಣೆಯನ್ನು ಕೇಳಲಾಗಿ ಅದನ್ನು ಆಗಿನ ಸರಕಾರ(ಕಾಂಗ್ರೆ) ಮಾನ್ಯ ಮಾಡಲಿಲ್ಲ. ಸರಕಾರಕ್ಕೆ ಕ್ರೈಸ್ತ ಮೂಲಭೂತವಾದಿಗಳ ಓಟ್ ಬ್ಯಾಂಕ್‌ನ ಮೇಲೆ ಕಣ್ಣಿತ್ತು. ಆದ್ದರಿಂದ ಇಂದಿಗೂ ನರಸಿಂಹರಾಯರ ಸರಕಾರ ಆ ಬದಲಾವಣೆಗೆ ಒಪ್ಪಿಗೆ ಕೊಟ್ಟಿಲ್ಲ. ಆದರೂ ಆ ಓಟ್ ಬ್ಯಾಂಕ್ ರಾಜಕೀಯ ಕೇರಳದಲ್ಲಿ ಫಲಿಸಲಿಲ್ಲ ಅದು ಬೇರೆ ಮಾತು.

ಪರಿಸ್ಥಿತಿ ಹೀಗಿರುವಾಗ ಇದಕ್ಕೆ ಪರಿಹಾರವೇನು? ಪರಿಹಾರವಿದೆ. ಎಲ್ಲಾ ಕೋಮಿನ ಮಹಿಳೆಯರು ತಮ್ಮ ಕೋಮಿನ ಮೂಲಭೂತವಾದಿಗಳ ಹಿಡಿತದಿಂದ ಹೊರಬಂದು ಸಂಘಟಿತರಾಗಬೇಕು, ಹುಟ್ಟು ಸಾವುಗಳ ನೊಂದಣಿಯಂತೆ ಮದುವೆಯೂ ನೊಂದಾಯಿಸಲ್ಪಡಬೇಕು, ಎಲ್ಲಾ ಧರ್ಮಗಳ ವೈಯಕ್ತಿಕ ಕಾನೂನುಗಳಲ್ಲಿ ಸುಧಾರಣೆಯಾಗಬೇಕು, ಆ ಮೂಲಕ ಸಮಾನತೆಗೆ ಹೆಚ್ಚಿನ ಅವಕಾಶ ಸಿಗಬೇಕು.

ನಂತರದಲ್ಲಿ ಅಧ್ಯಕ್ಷೆ ನೀಲಾ ಕೆ. ಅವರು ಸಮಾನತೆಯ ಕಾನೂನು ಜಾರಿಯಾಗುವ ನಿಟ್ಟಿನಲ್ಲಿ ಮಹಿಳಾ ಚಳುವಳಿಯು ಹಾಗೇ ಇತರ ಪ್ರಗತಿಪರ ಚಳುವಳಿಗಳು ಮುಂದುವರಿಯಬೇಕಾಗಿದೆ ಎಂದರು. ಕೊನೆಗೆ ಕೆ.ಎಸ್. ಶಾರದರವರ ಧನ್ಯವಾದದೊಂದಿಗೆ ವಿಚಾರ ಸಂಕಿರಣ ಮುಕ್ತಾಯವಾಯಿತು.

ವಿಧಾನಸಭೆಯಲ್ಲಿ ಕಾಂ. ಶ್ರೀರಾಮರೆಡ್ಡಿ

ಇತ್ತೀಚೆಗೆ ಮುಗಿದ ವಿಧಾನಸಭಾ ಅಧಿವೇಶನದಲ್ಲಿ ಬಿಜೆಪಿ-ಕಾಂಗ್ರೆಸ್(ಐ)ಗಳ ರಾಜಕೀಯ ಬೊಬ್ಬಾಟದಿಂದಾಗಿ ಜನಗಳ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಯಲಿಲ್ಲ. ಜನರ ಸಮಸ್ಯೆಗಳನ್ನು ಈ ಅಧಿವೇಶನದಲ್ಲಿ ಯಾರಾದರೂ ಎತ್ತಿದ್ದರೆ ಅದು ಸಿಪಿಐ(ಎಂ)ನ ಕಾಂ. ಜಿ.ವಿ.ಶ್ರೀರಾಮರೆಡ್ಡಿಯವರು ಮಾತ್ರ. ರಾಜ್ಯದಲ್ಲಿ, ದೇಶದಲ್ಲಿ ಶಿಕ್ಷಣದ ಈಗಿನ ದುಸ್ಥಿತಿಯನ್ನು ಸದನದಲ್ಲಿ ಎತ್ತಿ ಮಾತನಾಡಿದಾಗ ಮುಂದಿಟ್ಟ ಕೆಲವು ಅಂಶಗಳನ್ನಿಲ್ಲಿ ಕೊಡುತ್ತಿದ್ದೇವೆ.

ಒಂದು ಆಹಾರ ಪೊಟ್ಟಣವನ್ನು ಸದನದ ಮುಂದೆ ಪ್ರದರ್ಶಿಸುತ್ತಾ ಇದು 'ಮಿಡ್ ಡೇ ಮೀಲ್' (ಮಧ್ಯಾಹ್ನದ ಊಟ) ಯೋಜನೆಯಲ್ಲಿ ಪ್ರಾಥಮಿಕ ಶಾಲೆಯ ಮಕ್ಕಳಿಗೆ ಒದಗಿಸುವ ಆಹಾರ ಪೊಟ್ಟಣ. ಸೀಲ್ ಮಾಡಿದ ಈ ಪೊಟ್ಟಣದ ಮೇಲೆ ನೆಟ್ 5 ಕೆ.ಜಿ. ಎಂದು ಬರೆದಿದೆ. ಆದರೆ ಇರುವುದು ಒಂದೇ ಕೆ.ಜಿ. ಎಂದರು. ಸರಕಾರದ ವರದಿಯ ಪ್ರಕಾರ ಯೋಜನೆಗೆ 3.50 ಕೋಟಿ ರೂ. ಒದಗಿಸಲಾಗಿದೆ. 'ಬಡ ಕುಟುಂಬಗಳಿಂದ ಬರುವ ಮಕ್ಕಳ ಪೌಷ್ಟಿಕತೆಯನ್ನು ಹೆಚ್ಚಿಸಿ ತನ್ಮೂಲಕ ಅವರು ತಮ್ಮ ಶೈಕ್ಷಣಿಕ ಚಟುವಟಿಕೆಗಳ ಕಡೆಗೆ ಹೆಚ್ಚು ಗಮನ ನೀಡುವಂತೆ ಪ್ರೋತ್ಸಾಹಿಸಲು' 1 ರಿಂದ 4ನೇ ತರಗತಿಯವರೆಗೆ ನೀಡುವ ಆಹಾರ ಪೊಟ್ಟಣ ಅದು ಎಂದು ನೆನಪಿಸಿದರು. ಅದೇ ರೀತಿ ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವ ಬೆಳೆಯಬೇಕೆಂದು ವಿಜ್ಞಾನ ಸಲಕರಣೆಗಳನ್ನು ಒದಗಿಸಲು 17 ಕೋಟಿ ರೂ.ಗಳನ್ನು ನೀಡಲಾಗಿದೆ ಎನ್ನುತ್ತದೆ ಸರಕಾರ. ಆದರೆ ಅವರು ಒದಗಿಸಿರುವ ಸಲಕರಣೆಗಳು ಹೇಗಿರುತ್ತವೆ ಎಂಬುದರ ಉದಾಹರಣೆಗೆ ಒಂದು Maximum -Minimum Therma Meter with a magnet ಎಂದು ಹೇಳುವ ಬಗ್ಗಿ ಹೋದ ಒಂದು ಉಪಕರಣವನ್ನು ಪ್ರದರ್ಶಿಸುತ್ತಾ ಇಲ್ಲಿ ಎಷ್ಟು ಭ್ರಷ್ಟತೆ ಇದೆಯೆಂದು ಅವರು ತೋರಿಸಿದರು. ಇದು ಈ ದೇಶದ ಪ್ರಾಥಮಿಕ ಶಿಕ್ಷಣದ ಪರಿಸ್ಥಿತಿ. ಶಾಲೆಯಿದ್ದರೆ ಕಟ್ಟಡಗಳಿಲ್ಲ, ಕಟ್ಟಡವಿದ್ದರೆ ಮೇಷ್ಟರಿಲ್ಲ, ಇಂತಹ ಪರಿಸ್ಥಿತಿಯಲ್ಲಿ ಶೇ. 50 ರಷ್ಟು ಮಕ್ಕಳು ಮಧ್ಯದಲ್ಲೇ ಶಾಲೆ ಬಿಡುತ್ತಾರೆ ಎಂಬ ಸರ್ಕಾರದ ಅಂಕೆ-ಸಂಖ್ಯೆಯನ್ನೇ ಕಾಂ. ಶ್ರೀರಾಮರೆಡ್ಡಿ ನೆನಪಿಸಿದರು.

ಆರಂಭದಲ್ಲಿ ವಿದ್ಯೆ ಈ ಸಮಾಜದ ಮೆದುಳು. ಆ ಮೆದುಳು ಕೆಲಸ ಮಾಡುವುದನ್ನು ನಿಲ್ಲಿಸಿದೆ ಎಂದು ಹೇಳಿದ ಕಾಂ. ಶ್ರೀರಾಮರೆಡ್ಡಿಯವರು ಒಂದೊಂದಾಗಿ ಪ್ರಾಥಮಿಕ ಶಿಕ್ಷಣ, ಉಚ್ಚ ಶಿಕ್ಷಣ, ಪುಸ್ತಕಾಲಯ ಇತ್ಯಾದಿ ವಲಗಳಲ್ಲಿನ ಸಮಸ್ಯೆಗಳನ್ನು, ಭಷ್ಟಾಚಾರಗಳನ್ನು ಬಿಚ್ಚಿಟ್ಟರು.

ಈಗ ನಮ್ಮ ಶಿಕ್ಷಣದ ಚಿತ್ರವೆಂದರೆ "ಬದ್ಧರಲ್ಲದ ಅಧ್ಯಾಪಕರು ಮನಸ್ಸಿಲ್ಲದ ವಿದ್ಯಾರ್ಥಿ ಸಮೂಹವನ್ನು ನಿರ್ವಹಿಸುತ್ತಾರೆ" ಎಂದು ವರ್ಣಿಸುತ್ತಾ ಅಧ್ಯಾಪಕರು ಬದ್ಧರಾಗದೇ ಇರಲು, ವಿದ್ಯಾರ್ಥಿಗಳಿಗೆ ಮನಸ್ಸಿಲ್ಲದೆ ಇರಲು ಕಾರಣಗಳನ್ನು ಗುರುತಿಸಿದರು. ಶಿಕ್ಷಣದ ಉದ್ದೇಶ ಕೇವಲ ಲಾಭಗಳಿಕೆಯಾಗಿದೆಯೆಂದರು. ನರ್ಸರಿ, ಎಲ್.ಕೆ.ಜಿ., ಯು.ಕೆ.ಜಿ. ಎಂದು ಏನೂ ವ್ಯವಸ್ಥೆ ಇಲ್ಲದೆ ಇರತಕ್ಕಂಥ ಸಂದರ್ಭಗಳಲ್ಲಿ ಪುಟ್ಟ ಮಕ್ಕಳ ಮೆದುಳಿಗೆ ಹೊರೆ ಹಾಕುತಕ್ಕಂತಹ ಪಾಪದ ಕೆಲಸ ನಿಲ್ಲಿಸಿ ಎಂದರು.

ಟಿ.ಸಿ.ಹೆಚ್. ತರಬೇತಿ ಪಡೆದ ಒಂದು ಲಕ್ಷ ಜನ ರಾಜ್ಯದಲ್ಲಿ ನಿರುದ್ಯೋಗಿಗಳಿದ್ದಾರೆ. ಇತ್ತ ರಾಜ್ಯದ ಶೇ. 50 ಶಾಲೆಗಳಲ್ಲಿ ಉಪಾಧ್ಯಾಯರ ಕೊರತೆ! ದೊಡ್ಡ ದೊಡ್ಡ ಅಧಿಕಾರಿಗಳಿಗೆ 10-20 ಸಾವಿರ ರೂ. ಸಂಬಳ ನೀಡುತ್ತಿದ್ದರೂ ಅಂತಹ ಅಧಿಕಾರಿಗಳನ್ನು ಸೃಷ್ಟಿಸುವ ಅಧ್ಯಾಪಕರಿಗೆ ಶೋಚನೀಯ ವೇತನ.

ನಮ್ಮ ಹಳ್ಳಿಗಳ ಆಸ್ಪತ್ರೆಗಳಿಗೆ ನರ್ಸ್, ಡಾಕ್ಟರುಗಳು ಬೇಕಾಗಿದ್ದಾರೆ. ಆದರೆ ಅವರನ್ನು ಸಾವಿರ-ಸಾವಿರ ಸಂಖ್ಯೆಯಲ್ಲಿ ತಯಾರಿಸುತ್ತಿದ್ದರೂ ಕೊರತೆ, ಅದೇ ಇಂಜನಿಯರುಗಳು ನಿರುದ್ಯೋಗಿಗಳಾಗಿದ್ದಾರೆ. ಇನ್ನೊಂದೆಡೆ ಇಂಜನಿಯರ್ ಕೆಲಸಗಳಿಗೆ ಸಿಬ್ಬಂದಿಯಿಲ್ಲ ಎಂದು ಉಚ್ಚ ಶಿಕ್ಷಣದ ದುಸ್ಥಿತಿಯನ್ನು ಕಾಂ. ಶ್ರೀರಾಮರೆಡ್ಡಿ ವಿವರಿಸಿದರು.

ಒಟ್ಟಿನಲ್ಲಿ ಸರಕಾರದ ಬಳಿ ಶಿಕ್ಷಣದ ಬಗ್ಗೆ ಒಂದು ಸಮಗ್ರದೃಷ್ಟಿಯ ಯೋಜನೆಯಿಲ್ಲ ಎಂದು ಕಾಂ. ಶ್ರೀರಾಮರೆಡ್ಡಿ ಬೇಸರ ವ್ಯಕ್ತಪಡಿಸಿದರು.

".......ಈ ದೇಶಕ್ಕೆ ಏನು ಬೇಕಾಗಿದೆ. ನಮಗೆ ವಿದ್ಯಾಭ್ಯಾಸ ಬೇಡ, ಪಬ್‌ಗಳನ್ನು ಓಪನ್ ಮಾಡಿ, ಬಾರ್‌ಗಳನ್ನು ಓಪನ್ ಮಾಡಿ. ಕ್ಯಾಬರೆ ಡಾನ್ಸ್‌ಗಳನ್ನು ಓಪನ್ ಮಾಡಿ ವಿದ್ಯಾಭ್ಯಾಸ ಬೇಕಿಲ್ಲ. ಅವುಗಳಿಗಾದರೆ ಅತ್ಯುತ್ತಮ ಸಲಕರಣೆ ಇರತಕ್ಕಂತ ಕೋಣೆಗಳನ್ನು ಆಡಿಟೋರಿಯಂಗಳನ್ನು ನಿರ್ಮಾಣ ಮಾಡುತ್ತೀರಿ. ಅವರಿಗೆ ಬೇಕಾಗಿರತಕ್ಕ ಸೌಂಡ್ ಆಫ್ ಮ್ಯೂಸಿಕ್‌ಗೆ ಯುರೋಪಿನಿಂದ ತರಿಸಿಕೊಳ್ಳುತ್ತೀರಿ. ಆದರೆ ಕತ್ತಿಹಳ್ಳಿ ಎಂಬ ಶಾಲೆಗೆ ಒಬ್ಬ ಶಿಕ್ಷಕರನ್ನು ಕೊಡುವುದಕ್ಕಾಗುವುದಿಲ್ಲ. ಆದಕ್ಕೆ ಬಾಗಿಲು ಇಲ್ಲ, ಅದರಲ್ಲಿ ಜವಾನ ಇಲ್ಲ. ಕಸಗುಡಿಸುವವರು ಇಲ್ಲ, ಮಕ್ಕಳು ಹೋದರೆ ಸಗಣಿಯಲ್ಲಿ ಕುಳಿತುಕೊಳ್ಳಬೇಕು. ಧೂಳಿನಲ್ಲಿ ಕುಳಿತುಕೊಳ್ಳಬೇಕು. ಅವರು ಹೇಗೆ ಇವನ್ನೆಲ್ಲ ಇಷ್ಟಪಡುತ್ತಾರೆ. ನಾನು ನೋವಿನಿಂದ ಖಂಡಿತ ಹೇಳುತ್ತಿಲ್ಲ. ಸಿಟ್ಟಿನಿಂದ ಹೇಳುತ್ತಿದ್ದೇನೆ. ಅವರ ಉಪ್ಪನ್ನು ನಾವು ತಿನ್ನುತ್ತಿರತಕ್ಕಂತಾದ್ದು.....ಅವರು ಕನಿಷ್ಠ ಶಿಕ್ಷಣ ಹೇಳುತ್ತಿದ್ದಾರೆ. ಅದನ್ನು ನಿಮಗೆ ಕೊಡಲಾಗುವುದಿಲ್ಲ" ಎಂದರು ಕಾಂ. ಶ್ರೀರಾಮರೆಡ್ಡಿ.

ಇನ್ನೊಂದೆಡೆ ಎಲ್ಲೆಡೆಯ ಭ್ರಷ್ಟತೆಯ ಮಾದರಿ. ಸುಳ್ಳು ಹುಟ್ಟು ದಿನಾಂಕ ನೀಡಿದವರು ಉಪಕುಲಪತಿಗಳಾಗುತ್ತಾರೆ. ಹಲವಾರು ವರ್ಷಗಳಿಂದ ಒಂದೇ ಕಡೆ ಝಂಡಾ ಹೂಡಿರುವ ಒಬ್ಬ ಲೈಬ್ರೇರಿಯನ್ ಮಕ್ಕಳಿಗೆ ಕಾಮಿಕ್ಸ್ ಎಂದು ಯುರೋಪಿನಿಂದ ತರಿಸಿಕೊಂಡು ಅವುಗಳ ಮಾರಾಟದಿಂದ ನೂರಾರು ಕೋಟಿ ರೂ.ಗಳ ಸಂಪಾದನೆ ಮಾಡಿದ ಉದಾಹರಣೆಯನ್ನು ಅವರು ಮುಂದಿಟ್ಟರು.

-ಎರಡು ಪತ್ರಗಳು-

'ಐಕ್ಯರಂಗ'ಕ್ಕೆ ಇತ್ತೀಚಿನ ಎರಡು ಘಟನೆ/ ಹೇಳಿಕೆಗಳ ಬಗ್ಗೆ ಪ್ರತಿಕ್ರಿಯೆ ವ್ಯಕ್ತಪಡಿಸುವ ಎರಡು ಪತ್ರಗಳು ಬಂದಿವೆ- ಒಂದು ವಿ.ಹೆಚ್.ಪಿ., ಮುಖಂಡರೊಬ್ಬರ ಹೇಳಿಕೆಯ ಬಗ್ಗೆ ವಿಜಾಪುರದಿಂದ ನೀಲಗುಂದ ಸ್ವಾಮಿಗಳ ಪತ್ರ. ಎರಡನೆಯುದು ತಮಿಳುನಾಡು ಮುಖ್ಯಮಂತ್ರಿಗಳ 'ದತ್ತು ಮಗನ' ಮದುವೆಯ ಆಡಂಬರದ ಬಗ್ಗೆ ಹೊನ್ನಾವರದಿಂದ ಡಾ. ಆರ್.ವಿ. ಭಂಡಾರಿಯವರ ಪತ್ರ. ನಮ್ಮ ಓದುಗರ ಅಭಿಪ್ರಾಯಕ್ಕಾಗಿ ಇವನ್ನು ಪ್ರಕಟಿಸುತ್ತಿದ್ದೇವೆ.

ಶ್ರೀ ಕೃಷ್ಣ ಮುಸ್ಲಿಮನೆ?

ಹಿಂದೂ ಧರ್ಮದಲ್ಲಿ ಚಾತುವರ್ಣದ ವ್ಯವಸ್ಥೆಯನ್ನು ರೂಪಿಸಿದ್ದು ಮುಸ್ಲಿಂ ಆಳರಸರು. ಮೂಲದ ಹಿಂದೂ ಧರ್ಮದಲ್ಲಿ 'ಚಾಂಡಾಲ'ರ ಹೊರತು ಬೇರಾವ ಕೆಳಜಾತಿಯೂ ಇರಲಿಲ್ಲ' ಎಂದು ವಿಶ್ವ ಹಿಂದೂ ಪರಿಷತ್ತಿನ ಪ್ರಧಾನ ಕಾರ್ಯದರ್ಶಿಯಾದ ಅಶೋಕ್ ಸಿಂಘಾಲ್ ಅವರು ಹೇಳಿದ್ದಾರೆ.('ನಾಲ್ಕೂ ನಿಟ್ಟಿನಿಂದ' ಪ್ರಜಾವಾಣಿ 11-9-1995).

ಅವರ ಈ ಅಭಿಪ್ರಾಯವನ್ನು ಓದಿದ ತಕ್ಷಣ ನಮಗೆ ಶ್ರೀಕೃಷ್ಣನೇ ಈ ಮುಸ್ಲಿಂ ಆಳರಸನಾಗಿದ್ದನೇ ಎಂದು ವಿಪರೀತ ಗಲಿಬಿಲಿಯುಂಟಾಯಿತು. ಏಕೆಂದರೆ 'ಚಾತುರ್ವರ್ಣ್ಯಂ ಮಯಾ ಸೃಷ್ಟಾ ಗುಣ ಕರ್ಮ ವಿಭಾಗಶಃ' ಎಂದು ಭಗವದ್ಗೀತೆಯಲ್ಲಿ (ಗುಣಕರ್ಮಗಳ ವಿಭಾಗಕ್ಕನುಸರಿಸಿ ಚಾತುರ್ವರ್ಣಗಳನ್ನು ನಾನೇ ಸೃಷ್ಟಿಸಿದೆ -ಎಂದು) ಶ್ರೀಕೃಷ್ಣನೇ ಹೇಳುತ್ತಾನೆ.

ಸಿಂಘಾಲ್ ಅವರ ಅಭಿಪ್ರಾಯವನ್ನು ಅನುಮೋದಿಸುವುದೇ ಆದರೆ ವೇದಗಳನ್ನು ಮುಸ್ಲಿಂ ಆಳರಸರೇ ಬರೆದಿರಬೇಕು - ಎಂದೂ ಒಪ್ಪಿಕೊಳ್ಳಬೇಕಾಗುತ್ತದೆ. ಏಕೆಂದರೆ ವೇದೋಕ್ತವಾದ ಶ್ರೀ ರುದ್ರಾಭಿಷೇಕದಲ್ಲಿ ನಮಕಾಧ್ಯಾಯ, ಚಮಕಾಧ್ಯಾಯಗಳ ನಂತರ ಹೇಳುವ 'ಪುರುಷ ಸೂಕ್ತ'ದಲ್ಲಿಯೇ, 'ಬ್ರಾಹ್ಮಣೋ ಮುಖಮಾಸೀತ್/ ಬಾಹೂರಾಜನ್ಯ ಕೃತಃ/ ಊರು ತದಸ್ಯ ಯದ್ವೇಶ್ಯಃ/ ಶೂದ್ರೋಽಪದ್ಭ್ಯಾಂ ಅಜಾಯತ// ಎಂಬ ವರ್ಣ ವಿಂಗಡನೆಯ ವಿವರಣೆ ಕಂಡು ಬರುತ್ತಿದ್ದು. ಇದು ವೇದಮಂತ್ರವೇ ಆಗಿದೆ.

ಮೂಲದ ಹಿಂದೂ ಧರ್ಮದಲ್ಲಿ ವರ್ಣವ್ಯವಸ್ಥೆ ಇದ್ದಿರಲಿಲ್ಲವೆಂಬ ಅಚ್ಚ ಕೇಸರಿವರ್ಣದ ಸುಳ್ಳನ್ನು ಹೇಳುವ ಸಿಂಘಾಲರು ಚಾಂಡಾಲರ ಬಗ್ಗೆ ಹೇಳಿರುವುದು ಬಾಲಿಶವಾಗಿದೆ. 'ಚಾಂಡಾಲ'ರ ಸ್ವರೂಪ-ಲಕ್ಷಣಗಳಾಗಲೀ, ಶೂದ್ರ-ಚಾಂಡಾಲರ ನಡುವಣ ಅಂತರದ ಕಲ್ಪನೆಯಾಗಲೀ ಗೊತ್ತಿಲ್ಲವೆಂದು ಕಾಣುತ್ತದೆ.

ಅಸ್ಪೃಶ್ಯವಾದ ಚಾಂಡಾಲರನ್ನು ಸೃಷ್ಟಿಸಿದ ಮೂಲದ ಹಿಂದೂ ಧರ್ಮೀಯರಿಗಿಂತ ಸ್ಪರ್ಶರಾದ ಶೂದ್ರರನ್ನು ವ್ಯವಸ್ಥೆ ಮಾಡಿದ ಮುಸ್ಲಿಂ ಆಳರಸರೇ ಹೆಚ್ಚು ಮಾನವತಾವಾದಿಗಳೆಂದು ಜನ ಭಾವಿಸಿಕೊಂಡಾರು - ಎಂಬ ಸಾಮಾನ್ಯ ತಿಳುವಳಿಕೆಯೂ ಇದ್ದಂತಿಲ್ಲ.

ಹಿಂದೂ ಧರ್ಮದ ಅಧಿಕೃತ ಏಕೈಕ ವಕ್ತಾರನೆಂಬಂತೆ ಪೋಜು ಕೊಡುವ ವಿಹಿಪದ ಪ್ರಧಾನ ಕಾರ್ಯದರ್ಶಿಯ ಪಾಂಡಿತ್ಯವೇ ಇಷ್ಟಿದ್ದರೆ, ಅದರ ಸಾಮಾನ್ಯ ಕಾರ್ಯಕರ್ತರ ತಿಳುವಳಿಕೆ ಯಾವ ಮಟ್ಟದಲ್ಲಿ ಇರಬೇಕೆಂಬುದನ್ನು ಜನತೆಯೇ ಆಲೋಚಿರಸಬೇಕು. 'ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮೀ ಯುಗೇ ಯುಗೇ' ಎಂದು ಭರವಸೆ ಕೊಟ್ಟಿದ್ದ ಶ್ರೀ ಕೃಷ್ಣ ಅಶೋಕ್ ಸಿಂಘಾಲ್ ಅವರಿಂದ ಹಿಂದೂ ಧರ್ಮ ರಕ್ಷಿಸಲು ತಕ್ಷಣ ಅವತರಿಸಬೇಕಾಗಿದೆ.

ವಿಜಾಪುರ

-ನೀಲಗುಂದ ಶ್ರೀಗಳು

ಮರ್ಯಾದಿಗೇಡು ಮದುವೆ

ಜಯಲಲಿತರ ದತ್ತುಮಗನ ಮದುವೆಯನ್ನು ಈ ಶತಮಾನದ ಅತಿವೈಭವದ ಮದುವೆ ಎಂದು ವರ್ಣಿಸಲಾಗುತ್ತದೆ. ಅಲ್ಲಿಯ ಅದ್ದೂರಿ ವ್ಯವಸ್ಥೆ, ಖರ್ಚಿನ ಹಣವನ್ನು ನೋಡಿದರೆ ಎದೆಡವಗುಟ್ಟುತ್ತಿದೆ! ಇಷ್ಟೊಂದು ಹಣ ಒಬ್ಬ ವ್ಯಕ್ತಿಯಲ್ಲಿ ಹೇಗೆ ಬಂತು? ಸರಕಾರಕ್ಕೆ ತಕ್ಕ ಕರ ತುಂಬಿ ಉಳಿದ ಹಣವೇ ಇದು? ಇಷ್ಟೊಂದು ಸಂಪತ್ತು ಒಬ್ಬ ರಾಜಕಾರಣಿಯಲ್ಲಿ ಕೂಡಿಬಿದ್ದಿರುವುದು ಯಾವ ಮೂಲದಿಂದ? ಇಂಥಾದ್ದನ್ನು ಕೇಳುವ ಯಾವ ಕಾನೂನು ಈ ದೇಶದಲ್ಲಿ ಇಲ್ಲವೇ?

ದೇಶ ಎಂಥ ಸಂಕಟದಲ್ಲಿದೆ! ಅನಕ್ಷರತೆ, ಬಡತನ, ಅನಾರೋಗ್ಯ, ನಿರುದ್ಯೋಗ ತಾಂಡವವಾಡುತ್ತಿದೆ. ಜನರಲ್ಲಿ, ಹಣದ ದಾಹವನ್ನು ಹೆಚ್ಚಿಸಿ ಇಡೀ ದೇಶವನ್ನು ನುಂಗಲು ವಿದೇಶೀ ಕಂಪನಿಗಳು ಕಾದುಕುಳಿತಿವೆ. ಇಂಥ ಸಂದರ್ಭದಲ್ಲಿ ಜನರನ್ನು ಮುನ್ನಡೆಸುವವರಿಗೆ ಸರಳತೆ, ಸಜ್ಜನತೆ, ಸಂಯಮ ನೀತಿಯಾಗಬೇಕು. ಅದೇ ರಾಜಕೀಯ ಶಕ್ತಿಯಾಗಬೇಕು. ಅದೇ ಎಲ್ಲರ ಬದುಕಿನ ಫ್ಯಾಶನ್ ಆಗಬೇಕು. ಮಹಾತ್ಮಗಾಂಧಿ ದೇಶವನ್ನು ಮೇಲೆ ಎತ್ತಿದ್ದು ಹಾಗೆ. ಇಂಥ ಸಂದರ್ಭದಲ್ಲಿ ಮುಖ್ಯಮಂತ್ರಿ ಜಯಲಲಿತ ನಮ್ಮ ಸಂಪತ್ತಿನ ಪ್ರದರ್ಶನ ಮಾಡಿ ರಾಜಕೀಯ ನಡೆಸಹತ್ತಿದ್ದಾರೆ. ಆ ಮುಖಾಂತರ ಜನರ ನೈತಿಕ ಧೈರ್ಯವನ್ನೇ ನಾಶಮಾಡುತ್ತಿದ್ದಾರೆ. ಅಂಥ ಮದುವೆಗೆ ಬಹಿಷ್ಕಾರ ಹಾಕಿ ಸರಳತೆಯನ್ನು ಎತ್ತಿಹಿಡಿದು, ಜನರಲ್ಲಿ ನೈತಿಕ ಧೈರ್ಯವನ್ನು, ಕನಸನ್ನು ತುಂಬಬೇಕಾದ ಧುರೀಣರು ನೆಳುವು ಎಂಜಲಿಗೆ ಮುತ್ತುವಂತೆ ಅಲ್ಲಿ ಹೋಗಿ ಧನ್ಯತೆಯನ್ನು ಅನುಭೋಗಿಸುತ್ತಿದ್ದಾರೆ. ದೇವೇಗೌಡ, ರಾಮಕೃಷ್ಣ ಹೆಗಡೆ, ಪವಾರ್, ಪ್ರಧಾನಿ ನರಸಿಂಹರಾಯರ ಪ್ರತಿನಿಧಿಗಳಾಗಿ ಕೇಂದ್ರದ ಮಂತ್ರಿಗಳು ಕೇವಲ ರಾಜಕೀಯ ದುಷ್ಟ ಹೇತುವಿನಿಂದ ತಮ್ಮ ಮಾನಗೇಡಿ ಮುಖ ಹೊತ್ತು ಅಲ್ಲಿ ನಡೆದಿದ್ದಾರೆ. ಇವರ ರಾಜಕೀಯ ಎಷ್ಟು ನೀಚ ಮಟ್ಟಕ್ಕಿಳಿದಿದೆಯೆಂದರೆ ನಾಡಿನ ಸಜ್ಜನರು ಉಗುಳಬಹುದು ಎಂಬ ಒಂದು ಕನಿಷ್ಠ ಬಯವೂ ಇಲ್ಲವಾಗಿದೆ. ಇದು ನಮ್ಮ ರಾಜಕೀಯ ಧುರೀಣರ ನೈತಿಕ ದಿವಾಳಿತನಕ್ಕೆ ಜೀವಂತ ಸಾಕ್ಷಿಯಾಗಿದೆ. ಒಂದು ಕಡೆ ದೇಶದ ಗಡಿಯಲ್ಲಿ ಮೈಕೊರೆಯುವ ಚಳಿಯಲ್ಲಿ, ತಮಗೆ ಅರ್ಧ ಆಯುಷ್ಯವೇ ಗತಿ ಎಂದು ಗೊತ್ತಾದರೂ ದೇಶ ರಕ್ಷಣೆಗಾಗಿ ದೇಹ ಸವೆಸುತ್ತಿದ್ದಾರೆ, ಮದನ್ ಗೋಪಾಲರಂಥ ಅಧಿಕಾರಿ ತಮ್ಮನ್ನೇ ಅಪಾಯಕ್ಕೆ ಒಡ್ಡಿಕೊಂಡು ರಾಜ್ಯದ ಸಂಪತ್ತಿನ ರಕ್ಷಣೆ ಮಾಡುತ್ತಿದ್ದಾರೆ. ಆದರೆ ಈ ರಾಜಕಾರಣಿಗಳು, ಕಂಟ್ರಾಕ್ಟರು, ಇಂಜನಿಯರ್, ರೌಡಿಗಳು, ನೀಚ ಅಧಿಕಾರಿಗಳು, ಮಠಮಾನ್ಯಗಳಿಗೆ ಆಶ್ರಯಕೊಡುತ್ತ ಸಂಪತ್ತಿನ ಲೂಟಿ ನಡೆಸುತ್ತಿದ್ದಾರೆ. ಇಡೀ ದೇಶವನ್ನು ನೈತಿಕ ಅಧಃಪತನದ ಕಾಳಕೂಪದಲ್ಲಿ ಅದ್ದುತ್ತಿದ್ದಾರೆ. ಇದರಿಂದ ನಾಗರಿಕರು ದಿಗಿಲು ಬೀಳುವಂತಾಗಿದೆ. ಇಂಥವರನ್ನೆಲ್ಲಾ ಸಾರ್ವಜನಿಕವಾಗಿ ಸಾಲಾಗಿ ನಿಲ್ಲಿಸಿ ನೇಣುಗಂಬಕ್ಕೇರಿಸುವ ಜನತಾ ನ್ಯಾಯಾಲಯವೊಂದು ಬರಲಾರದೇ ಎಂದು ಹಂಬಲಿಸುವುದು ಆಟೋಪಿಯಾ ಅನಿಸಿತು. ಆದರೆ ಜನ ಮನಸ್ಸು ಮಾಡಿದರೆ ಇಂಥವರನ್ನು ಮೂಲೆಗೆ ಒಗೆಯುವ ತಾಕತ್ತು ಹೊಂದಿದ್ದಾರೆ ಎಂಬುದು ಖಂಡಿತ. ಬರಲಿರುವ ದಿನಗಳು ವ್ಯರ್ಥವಾಗಲಾರದು ಎಂದುಕೊಳ್ಳುತ್ತೇವೆ.

- ಡಾ. ಆರ್.ವಿ. ಭಂಡಾರಿ

ಕರ್ನಾಟಕ ಪ್ರಾಂತ ರೈತ ಸಂಘದ 11ನೇ ರಾಜ್ಯ ಸಮ್ಮೇಳನ

ಕರ್ನಾಟಕ ಪ್ರಾಂತ ರೈತ ಸಂಘದ 12ನೇ ರಾಜ್ಯ ಸಮ್ಮೇಳನ ಬಿಜಾಪುರ ನಗರದಲ್ಲಿ ದಿ. 6,7, 8 ನವಂಬರ್ 95ರಂದು ನಡೆಯಲಿದೆ. ಈ ವರ್ಷ ಸಕಾಲಿಕ ಮಳೆಯಿಲ್ಲದೆ ರೈತರು ಸಂಕಷ್ಟಕ್ಕೀಡಾಗಿದ್ದರೂ ಕೂಡಾ ರೈತ ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸುವ ತೀರ್ಮಾನ ಕೈಗೊಳ್ಳಲಾಗಿದೆ. ಅದಕ್ಕೆ ಮುಖ್ಯ ಕಾರಣವೆಂದರೆ ಬಿಜಾಪುರ ಜಿಲ್ಲೆಯಲ್ಲಿ 5 ನದಿಗಳು ಹರಿಯುತ್ತಿದ್ದರೂ ಕೂಡಾ ಅದರ ಲಾಭ ಜಿಲ್ಲೆಯ ರೈತರಿಗೆ ಸಿಗಲಾರದಂತಿದೆ. ಕೃಷ್ಣಾ ಮೇಲ್ದಂಡೆ ಯೋಜನೆ ಜಾರಿಗಾಗಿ ಹೋರಾಟ ನಡೆಸಿ 1964ರಲ್ಲಿಯೇ ಅಡಿಗಲ್ಲು ಹಾಕಿಸಿ ಕೆಲಸ ಮಾಡುವಂತೆ ಮಾಡಲು ಸಾಧ್ಯವಾಗಿದ್ದರೂ ಕೂಡಾ ಕಾಂಗ್ರೆ. ಜನತಾದಳದ ಸರಕಾರಗಳ ಅಸಮರ್ಪಕ ಆಡಳಿತೆ, ದೂರದೃಷ್ಟಿಯ ಅಭಾವ, ಅಭಿವೃದ್ಧಿ ಯೋಜನೆಗಳೆಲ್ಲಾ ಸಂಪೂರ್ಣ ಕುಂಠಿತವಾಗಿವೆ. ಈಗ 2000 ಇಸ್ವಿಯೊಳಗೆ ಈ ಯೋಜನೆಯನ್ನು ಪೂರ್ಣಗೊಳಿಸದಿದ್ದರೆ ಕರ್ನಾಟಕದ ಪಾಲಿನ ನೀರಿನ ಹಕ್ಕನ್ನು ಕೈಬಿಡುವ ಸಂಭವವಿರುವುದರಿಂದ ಸರಕಾರದ ಮೇಲೆ ಹೆಚ್ಚಿನ ಒತ್ತಡ ತರುವುದರ ಸಲುವಾಗಿ ದೊಡ್ಡ ಹೋರಾಟ ನಡೆಸುವ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ಈ ರೈತ ಸಮ್ಮೇಳನಕ್ಕೆ ಮಹತ್ವವಿದೆ. ಕೃಷ್ಣಾ ಬಿಜಾಪುರ ಜಿಲ್ಲೆಯ ಆಲಮಟ್ಟಿಯಲ್ಲಿರುವುದರಿಂದ ಬಿಜಾಪುರದಲ್ಲೇ ಈ ಸಮ್ಮೇಳನ ನಡೆಸಿ ಮುಂದಿನ ಹೋರಾಟದ ರೂಪುರೇಶೆ ನಿರ್ದರಿಸಬೇಕಾಗಿದೆ.

27.9.95ರಂದು ನಡೆದ ರೈತ ಸಂಘದ ಸಭೆಯಲ್ಲಿ 40 ಸದಸ್ಯರುಳ್ಳ ಸ್ವಾಗತ ಸಮಿತಿಯನ್ನು ರಚಿಸಲಾಗಿದೆ. ಹಿರಿಯ ಸ್ವಾತಂತ್ರ್ಯ ಯೋಧ ಬಿಜಾಪುರ ಜಿಲ್ಲೆಯಲ್ಲಿ ರೈತ ಸಂಘ ಕಟ್ಟಿ ಹಲವಾರು ಹೋರಾಟಗಳನ್ನು ನಡೆಸಿದ್ದ ಎನ್.ಕೆ.ಉಪಾಧ್ಯಾಯರನ್ನು ಅದರ ಅಧ್ಯಕ್ಷರನ್ನಾಗಿ ರೈತ ಸಂಘದ ಅಧ್ಯಕ್ಷರಾದ ಭೀಮಸಿ ಕಲಾದಗಿಯವರನ್ನು ಕಾರ್ಯಾಧ್ಯಕ್ಷರನ್ನಾಗಿ, ಮನ್ನೂಸಾಬ ಕಲಾದಗಿ, ಅಣ್ಣಾರಾಯ ಇಳಿಗೇರ ಮತ್ತು ಶ್ರೀಧರ ಕುಲಕರ್ಣಿ ವಕೀಲರು ಇವರನ್ನು ಕಾರ್ಯದರ್ಶಿಗಳನ್ನಾಗಿ, ರಿಯಾಜ್ ಫರೂಕಿ, ಜಯಲಕ್ಷ್ಮಿ ಯರನಾಳ, ಎಸ್.ಎಚ್. ಯಡ್ರಾಮಿ, ವಕೀಲರು, ಎಂ.ಎಂ. ಹುದ್ದಾರ, ವಕೀಲರು, ಎನ್.ಎಂ. ಕಂದಗಲ್, ಪತ್ರಕರ್ತರು, ಮಳಸಿದ್ದ ನಾಯಕೋಡಿ, ಸೋಮಣ್ಣ ಮೇತ್ರಿ, ಮಹಿಬೂಬ ಅವಟಿ, ಸುರೇಖಾ ರಜಪೂತ, ಸೋಮುಲು ರಾಠೋಡ, ಸಿದ್ದಣ್ಣ ಐರೋಡಗಿ, ವಿ.ಎಂ. ಸೊನ್ನದ ಮೊದಲಾದವರನ್ನೊಳಗೊಂಡ ಸ್ವಾಗತ ಸಮಿತಿಯನ್ನು ಹಾಗೆಯೇ ಪ್ರಚಾರ-ಪ್ರಕ್ಷೋಭೆ ಸಮಿತಿ, ಸ್ವಯಂ ಸೇವಕ ಸಮಿತಿ, ಹಣಕಾಸು ಸಮಿತಿಗಳನ್ನು ನೇಮಿಸಲಾಯಿತು.

ನವಂಬರ್ 6ರಂದು ಬೃಹತ್ ಮೆರವಣಿಗೆ ಮತ್ತು ಸಾರ್ವಜನಿಕ ಸಭೆ ನಡೆಸಲಾಗುವುದು. ರಾಜ್ಯದ ವಿವಿಧ ಜಿಲ್ಲೆಗಳಿಂದ ಮುಖ್ಯವಾಗಿ ಬೆಳಗಾವಿ ಧಾರವಾಡ, ಬಳ್ಳಾರಿ, ರಾಯಚೂರು, ಗುಲ್ಬರ್ಗ, ಬೀದರ್ ಜಿಲ್ಲೆಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ರೈತರು ಪಾಲ್ಗೊಳ್ಳುವಂತೆ ಕರೆ ಕೊಡಲಾಗಿದೆ.

ಕೃಷಿ ಕೂಲಿಕಾರರ ಮೇಲೆ ಹಲ್ಲೆ

ಗಂಗಾವತಿ ತಾಲೂಕಿನ ಗಾಳಮ್ಮನ ಗುಡಿ ಕ್ಯಾಂಪ್ ನ ದಲಿತ ಕೃಷಿ ಕೂಲಿಕಾರರ ಮೇಲೆ ಹಲ್ಲೆ ಮಾಡಿದ ಚಿಲ್ಲಾರೆಡ್ಡಿ, ವೆಂಕಟನಾರಾಯಣ ಮತ್ತು ಇತರರನ್ನು ಕೂಡಲೇ ಬಂಧಿಸಬೇಕು, ಗಂಗಾವತಿ ಡಿವೈಎಸ್‌ಪಿ, ಸಿಪಿಐ ಮತ್ತು ಗ್ರಾಮೀಣ ಸಬ್ ಇನ್ಸ್‌ಪೆಕ್ಟರ್ ಇವರುಗಳನ್ನು ಅಮಾನತು ಮಾಡಿ ಚಂದ್ರಶೇಖರ ರೆಡ್ಡಿ ಕುಟುಂಬಕ್ಕೆ ಪರಿಹಾರ ನೀಡಬೇಕೆಂಬ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ಸಿಪಿಐ(ಎಂ) ತಾಲೂಕು ಸಮಿತಿಯು ಐದು ಕೇಂದ್ರಗಳಲ್ಲಿ ರಸ್ತಾರೋಕೋ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿತು. ರಸ್ತಾ ರೋಕೋ ಕಾರ್ಯಕ್ರಮವು ಎಲ್ಲಾ ಕಂದ್ರಗಳಲ್ಲಿಯೂ ಯಶಸ್ವಿಯಾಗಿ ನಡೆಯಿತು. ಪ್ರವಾಸಿ ಮಂದಿರದ ಮುಂದೆ ನಡೆದ ರಸ್ತಾ ರೋಕೋ ಕಾರ್ಯಕ್ರಮದಲ್ಲಿ ಸಿಪಿಐ(ಎಂ) ತಾಲೂಕು ಸಮಿತಿ ಸದಸ್ಯ ಕಾಂ. ನರಸೀಯಪ್ಪ ಮಹಬೂಬಿಯ ಕಾಲನಿ ಕಾರ್ಯದರ್ಶಿ ಕಾಂ.ರಮೇಶ್ ಮತ್ತು ದೇವೇಂದ್ರ ಗೌಡ ಭಾಗವಹಿಸಿದ್ದರು. ನಂತರ ನಡೆದ ಬಹಿರಂಗ ಸಭೆಯಲ್ಲಿ ಸಿಪಿಐ(ಎಂ) ಮುಖಂಡರಾದ ಕಾಂ. ಶೇಕಪ್ಪಾ ಖಾದ್ರಿ, ಕಾಂ. ವಿಶ್ವನಾಥ ಮಾತನಾಡಿದರು. ದಡೇಸ್ಗೂರು, ತುರ್ವಿಹಾಳ, ಮಲದ ಗುಡ್ಡದಲ್ಲಿ ನಡೆದ ರಸ್ತಾರೋಕೋದ ನೇತೃತ್ವವನ್ನು ಕಾಂ.ಸುಬಾನ್ ಟೇಲರ್, ಕಾಂ. ಅಪ್ಪಣ್ಣ, ಕಾಂ. ಹೆಚ್.ವಿ. ಗುಡಿ, ಕಾಂ.ಎಲ್ಲಪ್ಪ ಸಂಗಪ್ಪ, ಕಾಂ. ದುರುಗಪ್ಪ, ಕಾಂ.ಶಾಮಣ್ಣ ವಹಿಸಿದ್ದರು.

ಧರಣಿ ಸತ್ಯಾಗ್ರಹ

ಚಿಂಚೋಳಿ: ಚೌಕಿ ತಾಂಡಾದ ಘಟನೆಯನ್ನು ವಿರೋಧಿಸಿ ಚಿಂಚೋಳಿ ತಾಲೂಕಿನ ಕರ್ನಾಟಕ ಪ್ರಾಂತ ರೈತ ಸಂಘ, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ, ದಲಿತ ಸಂಘರ್ಷ ಸೇನಾ, ರಿಪಬ್ಲಿಕನ್ ಪಕ್ಷ, ಬಂಜಾರ ಸೇವಾ ಸಂಘ ಮತ್ತು ಜನವಾದಿ ಮಹಿಳಾ ಸಂಘಟನೆ ಸಂಯುಕ್ತವಾಗಿ 18.9.95 ರಂದು ಚಿಂಚೋಳಿಯಲ್ಲಿ ಬೃಹತ್ ಮೆರವಣಿಗೆ ನಡೆಸಿ ತಹಸೀಲ್ದಾರರಿಗೆ ಮನವಿ ಅರ್ಪಿಸಲಾಯಿತು.

ಚೌಕಿ ತಾಂಡಾದಲ್ಲಿ ಬಡ ಜನತೆಯ ಮೇಲೆ, ಮಹಿಳೆಯರ ಮೇಲೆ ದೌರ್ಜನ್ಯವೆಸಗಿದ ಅರಣ್ಯಾಧಿಕಾರಿಗಳನ್ನು ಅಟ್ರಾಸಿಟಿ, ಗೂಂಡಾಗಿರಿ ಕಾಯ್ದೆಯನ್ವಯ ಬಂಧಿಸಬೇಕು ಹಾಗೂ ತಕ್ಷಣವೇ ಅವರನ್ನು ಅಮಾನತ್ತಿನಲ್ಲಿಡಬೇಕೆಂಬ ಬೇಡಿಕೆಗಳಿಗೆ ಒತ್ತಾಯಿಸಿ ಧರಣಿ ಸತ್ಯಾಗ್ರಹವನ್ನು ಪ್ರಾರಂಭಿಸಲಾಗಿದೆ.

ನಂತರ ನಡೆದ ಬಹಿರಂಗ ಸಭೆಯಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಕಾಂ.ಮಾರುತಿ ಮಾನ್ಪಡೆ ಮತ್ತು ಇತರ ಸಂಘಟನೆಗಳ ನಾಯಕರು ಮಾತನಾಡಿ ತಕ್ಷಣ ಅರಣ್ಯಾಧಿಕಾರಿಗಳನ್ನು ಅಮಾನತ್ತಿನಲ್ಲಿಡಬೇಕೆಂದು ಸರಕಾರವನ್ನು ಒತ್ತಾಯಿಸಿದರು.

ರೈತರ ಸರದಿ ಉಪವಾಸ ಸತ್ಯಾಗ್ರಹ

ಭೀಮರಾಯನಗುಡಿ: 18.9.95ರಂದು ಭೀಮರಾಯನಗುಡಿಯಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಸರಕಾರದ ರೈತ ವಿರೋಧಿ ಕೃಷಿ ನೀತಿಯನ್ನು ವಿರೋಧಿಸಿ ಹಾಗೂ ಇತರ ಬೇಡಿಕೆಗಳನ್ನು ಒತ್ತಾಯಿಸಿ ಸರದಿ ಉಪವಾಸ ಸತ್ಯಾಗ್ರಹ ಪ್ರಾರಂಭಿಸಲಾಗಿದೆ.

ಸರದಿ ಉಪವಾಸ ಸತ್ಯಾಗ್ರಹವನ್ನು ಉದ್ಘಾಟಿಸಿದ ಪ್ರಾಂತ ರೈತ ಸಂಘದ ಮುಖಂಡರಾದ ಚೆನ್ನಪ್ಪ ಆನೆಗುಂದಿ ಇವರು 2000 ಇಸ್ವಿ ಯೊಳಗಡೆ ಕೃಷ್ಣಾ ವಲಯದ ನೀರಾವರಿ ಯೋಜನೆಗಳನ್ನುಪೂರ್ಣಗೊಳಿಸಲು ಒತ್ತಾಯಿಸಿದರು.

ಜಿಲ್ಲೆಯ ನೀರಾವರಿ ಯೋಜನೆಗಳಿಗೆ ಅವಶ್ಯಕ ಹಣ ಒದಗಿಸಿ ಪೂರ್ತಿಗೊಳಿಸಬೇಕೆಂಬ ಬೇಡಿಕೆಗೆ ಈಡೇರಿಸ ಲು ಒತ್ತಾಯಿಸಿ ಸರದಿ ಉಪವಾಸ ಸತ್ಯಾಗ್ರಹ ಪ್ರಾರಂಭಿಸಲಾಗಿದೆಎಂದು ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಮಾರುತಿ ಮಾನ್ಪಡೆ ತಿಳಿಸಿದ್ದಾರೆ.

ಕರ್ನಾಟಕ ಸುದ್ದಿ ಸಮಾಚಾರ

ಡಿವೈಎಫ್ಐನ ರಾಜ್ಯ ಸಮ್ಮೇಳನ ಪ್ರತಿನಿಧಿಗಳಿಗೆ ಸೂಚನೆ

ಡಿವೈಎಫ್ ಐನ 5ನೇ ರಾಜ್ಯ ಸಮ್ಮೇಳನವು ಇದೇ ಅಕ್ಟೋಬರ್ 14ರಿಂದ 16ರವರೆಗೆ ಮಂಗಳೂರು ಮಹಾನಗರದಲ್ಲಿ ಜರುಗಲಿದೆ. 14ರಂದು ಬೆಳಿಗ್ಗೆ 10 ಗಂಟೆಗೆ ಧ್ವಜಾರೋಹಣ ಜಾಥಾಗಳ ಸ್ವಾಗತ, ಪ್ರತಿಜ್ಞಾಸ್ವೀಕಾರ, ಹುತಾತ್ಮರಿಗೆ ಶ್ರದ್ಧಾಂಜಲಿ ಬಳಿಕ 11 ಗಂಟೆಗೆ ಖ್ಯಾತ ನಿರ್ದೇಶಕ ಎಂ.ಎಸ್. ಸತ್ಯುರವರು ಉದ್ಘಾಟಿಸಲಿದ್ದಾರೆ. ಅಖಿಲ ಭಾರತ ಅಧ್ಯಕ್ಷರೂ, ಸಂಸತ್ ಸದಸ್ಯರೂ ಆದ ಕಾಂ. ಎಂ.ಎ. ಬೇಬಿಯವರು ಮುಖ್ಯ ಅತಿಥಿಯಾಗಿ ಭಾಗವಹಿಸುವರು. ಅಂದು ಸಂಜೆ ವಿಚಾರ ಸಂಕಿರಣ, ಸಾಂಸ್ಕೃತಿಕ ಕಾರ್ಯಕ್ರಮಗಳು ಮುಂತಾಗಿ ಜರುಗಲಿವೆ.

16ರಂದು ಸಂಜೆ 3 ಗಂಟೆಗೆ ಬೃಹತ್ ಯುವಜನರ ರ್‍ಯಾಲಿಯು ನಡೆಯಲಿದ್ದು ಪ.ಬಂಗಾಳದ ಸಚಿವರಾದ ಸುಭಾಷ್ ಚಕ್ರವರ್ತಿ ಮತ್ತು ಶಾಸಕರಾದ ಜಿ.ವಿ. ಶ್ರೀರಾಮರೆಡ್ಡಿ ಮುಂತಾದವರು ಮಾತನಾಡಲಿದ್ದಾರೆ.

ಸಮ್ಮೇಳನವು ಕುಲ್ಶಾಲು ಭವನ, ಮಂಗಳದೇವಿ ದೇವಸ್ಥಾನದ ಬಳಿ ಜರುಗಲಿದೆ. ಪ್ರತಿನಿಧಿಗಳೆಲ್ಲಾ 13ರಂದು ರಾತ್ರಿಯೊಳಗೆ ಮಂಗಳೂರನ್ನು ತಲುಪಬೇಕು.

ಅಖಿಲ ಭಾರತ ಶಿಕ್ಷಣ ಸಮಾವೇಶ

ಎಸ್.ಎಫ್.ಐನ ಕೇಂದ್ರ ಸಮಿತಿಯು ತನ್ನ ಬೆಳ್ಳಿ ವರ್ಷಾಚರಣೆಯ ಭಾಗವಾಗಿ ರಾಷ್ಟ್ರಾದ್ಯಂತ ಹಲವಾರು ಆಚರಣಾ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಇದರ ಭಾಗವಾಗಿ ಶಿಕ್ಷಣದ ಖಾಸಗೀಕರಣ ಮತ್ತು ವಾಣಿಜ್ಯಕರಣದ ವಿರುದ್ಧದ ಅಖಿಲ ಭಾರತ ಶಿಕ್ಷಣ ಸಮಾವೇಶವನ್ನು ಇದೇ ನವಂಬರ್ 2 ರಂದು ಬೆಂಗಳೂರಿನ ಟೌನ್‌ಹಾಲ್‌ನಲ್ಲಿ ನಡೆಸಲಿದೆ. ಇತರೆ ರಾಷ್ಟ್ರ ಸಮಾವೇಶಗಳೆಂದರೆ **ಸಾಮ್ರಾಜ್ಯ ಶಾಹಿ ವರೋಧಿ ಸಮಾವೇಶ-ಕಲ್ಕತ್ತಾ ನವೆಂಬರ್ 17, ಭಯೋತ್ಪದನೆ ವಿರುದ್ಧ ರಾಷ್ಟ್ರೀಯ ಸೌಹಾರ್ದತಾ ವಿದ್ಯಾರ್ಥಿಗಳ ಸಮಾವೇಶ-ಅಮೃತಸರ**-ನವೆಂಬರ್ ಕೊನೆಯವಾರದಲ್ಲಿ, **ಕೋಮುನಾದದ ವಿರುದ್ಧ ರಾಷ್ಟ್ರೀಯ ಸಮಾವೇಶ**-ಮುಂಬೈ-ಡಿಸಂಬರ್‌ನಲ್ಲಿ, ಬೆಳ್ಳಿವರ್ಷಾಚರಣೆಯ ಕಾರ್ಯಕ್ರಮಗಳ ಅಂತಿಮ ಭಾಗವಾಗಿ ಡಿಸಂಬರ್ 6 ರಂದು ಕೇರಳದಲ್ಲಿ ಒಂದು ಲಕ್ಷ ವಿದ್ಯಾರ್ಥಿಗಳ ರ್‍ಯಾಲಿಯು ನಡೆಯಲಿದೆ.

ಅಖಿಲ ಭಾರತ ಶಿಕ್ಷಣ ಸಮಾವೇಶದಲ್ಲಿ ರಾಷ್ಟ್ರದ ಎಲ್ಲಾ ರಾಜ್ಯಗಳಿಂದಲೂ ಒಂದು ಸಾವಿರ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಇದರ ಉದ್ಘಾಟನೆಯನ್ನು ಖ್ಯಾತ ಶಿಕ್ಷಣ ತಜ್ಞ, ಅರ್ಥಿಕತಜ್ಞ ಹಾಗೂ ಸಂಸತ್ ಸದಸ್ಯರಾದ ಕಾಂ. ಅಶೋಕ ಮಿತ್ರರವರು ನೆರವೇರಿಸಲಿದ್ದಾರೆ.

ಇಂದು ಶಿಕ್ಷಣ ರಂಗವು ಅನುಭವಿಸುತ್ತಿರುವ ಸಮಸ್ಯೆಗಳಿಗೆ ಸರಿಯಾದ ಪರ್ಯಾಯವನ್ನು ರೂಪಿಸಲು ಆಳವಾದ ವಿಶ್ಲೇಷಣೆಯನ್ನು ನಡೆಸಲಿದೆ ಹಾಗೂ ಕೇಂದ್ರ ಸರ್ಕಾರದ ಶಿಕ್ಷಣ ನೀತಿಯ ವಿರುದ್ಧ ರಾಷ್ಟ್ರ ಮಟ್ಟದಲ್ಲಿ ಹೋರಾಟ ಕಾರ್ಯಕ್ರಮಗಳನ್ನು ಸಹ ಘೋಷಿಸಲಿದೆ.

ಸ್ವಾಗತ ಸಮಿತಿ

ಸಮಾವೇಶವನ್ನು ಯಶಸ್ವಿ ಮಾಡಲು ಬೆಂಗಳೂರಿನಲ್ಲಿ ಸ್ವಾಗತ ಸಮಿತಿಯನ್ನು ರಚಿಸಲಾಗಿದೆ. ವಿಧಾನಸಭೆಯ ಅಧ್ಯಕ್ಷರಾದ ಮಾನ್ಯಶ್ರೀ ರಮೇಶ ಕುಮಾರ್‌ರವರು ಗೌರವಾಧ್ಯಕ್ಷರಾಗಿದ್ದಾರೆ. ವಕೀಲರಾದ ವಿ.ಗೋಪಾಲ ಗೌಡರು ಕಾರ್ಯಧ್ಯಕ್ಷರಾಗಿ, ಪ್ರಕಾಶ್ ಕೆ.(ಎಸ್.ಎಫ್.ಐ ರಾಜ್ಯ ಕಾರ್ಯದರ್ಶಿ) ಪ್ರಧಾನ ಕಾರ್ಯದರ್ಶಿಯಾಗಿ, ಶಾಂತರಾಮ್ ನಾಯಕ್(ಎಸ್.ಎಫ್.ಐ ರಾಜ್ಯ ಅಧ್ಯಕ್ಷರು) ಖಜಾಂಚಿಯಾಗಿ ಆಯ್ಕೆಯಾಗಿದ್ದಾರೆ.

ಮಾನ್ಯಶ್ರೀ ರೋಷನ್ ಬೇಗ್ ಸಚಿವರು ಬೆಂಗಳೂರು ನಗರಾಭಿವೃದ್ಧಿ, ಡಾ:ಎನ್.ಆರ್.ಶೆಟ್ಟಿ, ಉಪ-ಕುಲಪತಿಗಳು ಬೆಂಗಳೂರು ವಿ.ವಿ., ಶ್ರೀ ಜಿ.ವಿ.ಶ್ರೀರಾಮರೆಡ್ಡಿ ಶಾಸಕರು, ಶ್ರೀ ಬರಗೂರು ರಾಮಚಂದ್ರಪ್ಪ, ಶ್ರೀ ವಿ.ಆರ್.ಸುದರ್ಶನ್ ಎಂ.ಎಲ್.ಸಿ, ಶ್ರೀಬಸವರಾಜ್ ಹೊರಟ್ಟಿ ಎಂ.ಎಲ್.ಸಿ, ಪ್ರೊ:ಎಸ್.ಚಂದ್ರಶೇಖರ್, ಡಾ:ಜಿ.ರಾಮಕೃಷ್ಣ, ಡಾ:ಹೆಚ್.ಎಸ್.ಶಿವಪ್ರಕಾಶ್, ಶ್ರೀಮಾನು ಚಿತ್ರನಟರು, ಟಿ.ವೆಂಕಟೇಶ ಮೂರ್ತಿ, ಅಕಾಡೆಮಿಕ್ ಕೌನ್ಸಿಲ್ ಸದಸ್ಯರು ಬೆಂ.ವಿ.ವಿ., ಪಿ. ರಾಮಚಂದ್ರರಾವ್ ಮುಂತಾದವರು ಈ ಸ್ವಾಗತ ಸಮಿತಿಯಲ್ಲಿದ್ದಾರೆ ಎಂದು ಎಸ್ಎಫ್ಐನ ಕೇಂದ್ರ ಸಮಿತಿ ಸಹ ಕಾರ್ಯದರ್ಶಿ ಕೃಷ್ಣಪ್ರಸಾದ್ ದಿ.5.10.95ರಂದು ಬೆಂಗಳೂರಿನಲ್ಲಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಸ್ವಾಗತ ಸಮಿತಿಯು ಕರ್ನಾಟಕ ಶೈಕ್ಷಣಿಕ ಸಮುದಾಯವು, ಜನಸಮಾನ್ಯರು ಸಹಾಯ ಸಹಕಾರಗಳನ್ನು ನೀಡಬೇಕೆಂದು ವಿನಂತಿಸಿದೆ.

ರೈತ ಕೃಷಿ ಕೂಲಿಕಾರರ ಬೇಡಿಕೆಗಳ ಬಗ್ಗೆ ಹೋರಾಟಕ್ಕೆ ಕರೆ

ಕುಂದಾಪುರ: ಅಖಿಲ ಭಾರತ ಕಿಸಾನ್ ಸಭಾದ ಕುಂದಾಪುರ ತಾಲೂಕು ಘಟಕದ 11ನೇ ರೈತ ಸಮ್ಮೇಳನವು 24.9.95ರಂದು ಜಡ್ಕಲ್ ಗ್ರಾಮದ ಬೀಷಾಂಪುರ್ ನಲ್ಲಿ ನಡೆಯಿತು. ಸಮ್ಮೇಳನದಲ್ಲಿ 81 ಪ್ರತಿನಿಧಿಗಳು ಭಾಗವಹಿಸಿದ್ದರು. ಆರಂಭದಲ್ಲಿ ಟಿ.ಟಿ.ಕುರಿಯನ್ ರವರು ಧ್ವಜಾರೋಹಣ ನಡೆಸಿದರು. ರಾಜು ಪಡುಕೋಣೆಯವರು ಸ್ವಾಗತಿಸಿದರು. ಸಮ್ಮೇಳನದ ಅಧ್ಯಕ್ಷತೆಯನ್ನು ತಾಲೂಕು ರೈತ ಸಂಘದ ಅಧ್ಯಕ್ಷರಾದ ಗೋವಿಂದ ಶೆಟ್ಟಿಗಾರರು ವಹಿಸಿದ್ದರು.

ಪ್ರತಿನಿಧಿ ಸಮ್ಮೇಳನದ ಉದ್ಘಾಟನೆಯನ್ನು ರೈತ ಸಂಘದ ಜಿಲ್ಲಾ ಸಮಿತಿಯ ಉಪಾಧ್ಯಕ್ಷರಾದ ಜನಾರ್ಧನ ನಾಯಕ್ ರವರು ಮಾಡಿ ಮಾತನಾಡುತ್ತಾ ರೈತ-ಕೃಷಿ ಕೂಲಿಕಾರರ ಸಮಸ್ಯೆಗಳು ಇತ್ತೀಚಿಗೆ ಹೊಸ ಸಮಸ್ಯೆಗಳಾಗಿ ಪರಿವರ್ತನೆಯಾಗಿ ರೈತ-ಕೃಷಿ ಕೂಲಿಗಾರರು ತೀರಾ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಸರಕಾರವು ಅಕ್ರಮ ಭೂಮಿ ಸಕ್ರಮಗೊಳಿಸದಿದ್ದಲ್ಲಿ ಸರಕಾರದ ನೀತಿಯ ವಿರುದ್ಧ ಹೋರಾಟ ನಡೆಸಬೇಕಾದ ಅವಶ್ಯಕತೆಯ ಬಗ್ಗೆ ವಿವರಣೆ ನೀಡಿದರು.

ಪ್ರತಿನಿಧಿ ಸಮ್ಮೇಳನಕ್ಕೆ ಶುಭ ಕೋರಿ ಕುಂದಾಪುರ ಹಂಚಿನ ಕಾರ್ಮಿಕರ ಮುಖಂಡರಾದ ಸಿ.ನಾರಾಯಣರವರು ಹಾಗೂ ಬೀಡಿ ಕಾರ್ಮಿಕರ ಮುಖಂಡರಾದ ಮಹಾಬಲ ಒಡೇರಹೋಬಳಿಯವರು ಮಾತನಾಡಿದರು.

ಸಮ್ಮೇಳನಕ್ಕೆ ಮುಖ್ಯ ಅತಿಥಿಯಾಗಿ ಬಂದಿದ್ದ ಜಿಲ್ಲಾ ರೈತ ಸಂಘದ ಮುಖಂಡರಾದ ಬಿ.ವಿಷ್ಣುಮೂರ್ತಿಯವರು ಮಾತನಾಡುತ್ತಾ ಸರಕಾರದ ಹೊಸ ಆರ್ಥಿಕ ನೀತಿಯನ್ನು ಹಾಗೂ ಕೋಮುವಾದದ ವಿರುದ್ಧದ ಹೋರಾಟವನ್ನು ತೀವ್ರಗೊಳಿಸಬೇಕೆಂದು ಕರೆನೀಡಿದರು.

ಹೊಸ ಆರ್ಥಿಕ ನೀತಿಯನ್ನು ವಿರೋಧಿಸುವ, ವರಾಹಿ ಜಲವಿದ್ಯುತ್ ಮತ್ತು ನೀರಾವರಿ ಯೋಜನೆಯನ್ನು ತ್ವರಿತಗತಿಯಲ್ಲಿ ಜ್ಯಾರಿಗೊಳಿಸುವ, ಜಡ್ಕಲ್-ಮದ್ದೂರು ರಸ್ತೆಯನ್ನು ಸಂಪೂರ್ಣ ಡಾಂಬರೀಕರಣ ಮತ್ತು ವಿದ್ಯುತ್ಶಕ್ತಿ ಸರಬರಾಜು ಇತ್ಯಾದಿ ಮುಖ್ಯ ನಿರ್ಣಯಗಳನ್ನು ಅಂಗೀಕರಿಸಲಾಯಿತು.

ತಾಲೂಕು ಸಮಿತಿಗೆ ಪದಾಧಿಕಾರಿಗಳಾಗಿ 7 ಮಂದಿ ಹಾಗೂ ಸಮಿತಿಗೆ 35 ಮಂದಿಯನ್ನು ಆಯ್ಕೆ ಮಾಡಲಾಯಿತು. ಅಧ್ಯಕ್ಷರಾಗಿ ಗೋವಿಂದ ಶೆಟ್ಟಿಗಾರ, ಉಪಾಧ್ಯಕ್ಷರಾಗಿ ಟಿ.ನರಸಿಂಹ, ಬಿ.ಕೆ.ದೇವಾಡಿಗ ಹಾಗೂ ಕಾರ್ಯದರ್ಶಿಯಾಗಿ ದಾಸ ಭಂಡಾರಿಯವರನ್ನು ಮತ್ತು ಜತೆ ಕಾರ್ಯದರ್ಶಿಯಾಗಿ ರಾಜೀವ ಪಡುಕೋಣೆ, ಬಸವನಾಯ್ಕ ಹಾಗೂ ಕೋಶಾಧಿಕಾರಿಯಾಗಿ ಗೋಪಾಲ ಶೆಟ್ಟಿಗಾರರನ್ನು ಆಯ್ಕೆ ಮಾಡಲಾಯಿತು.

ಟೈಲ್ಸ್ ಕಾರ್ಮಿಕರಿಗೆ ಜಯ

ಭಟ್ಕಳ: ಮುರ್ಡೇಶ್ವರ ಟೈಲ್ಸ್ ಪ್ರೈ.(ಲಿ.) ಕಾರ್ಖಾನೆ ಮಾಲಿಕ ವರ್ಗ ಮತ್ತು ಕಾರ್ಮಿಕ ಸಂಘದ ನಡುವೆ ಮಾತುಕತೆ ನಡೆದು ಒಪ್ಪಂದ ಏರ್ಪಟ್ಟಿದೆ.

ಕಾರ್ಖಾನೆಯ ಆಡಳಿತ ಮಂಡಳಿ ಐದು ಜನ ಕಾರ್ಮಿಕರಿಗೆ ಕೆಲಸ ನಿರಾಕರಿಸಿದ್ದರಿಂದ ವಿವಾದವು ಉಂಟಾಗಿ 98 ದಿನಗಳ ಕಾಲ ಮುಷ್ಕರ ನಡೆದಿತ್ತು. 24.9.95ರಂದು ಮಾಲಿಕರಾದ ಸತೀಶ ಶೆಟ್ಟಿ, ಕಾರ್ಮಿಕ ನಾಯಕರಾದ ತಿಲಕ ಗೌಡ, ಸುರೇಶ ತಾಂಡೇಲ, ಸುಭಾಷ ಕೊಪ್ಪಿಕರ, ಮುನ್ವೇಲ ಡಿಕೋಸಾ ಮತ್ತಿತರೊಂದಿಗೆ ಮಾತುಕತೆ ನಡೆಸಿ ಸಂಘದ ಎಲ್ಲಾ ನ್ಯಾಯಯುತ ಬೇಡಿಕೆಗಳನ್ನು ಕೊಡಲು ಒಪ್ಪಿದ್ದಲ್ಲದೇ ಐದು ಜನ ಕಾರ್ಮಿಕರಿಗೆ ಕೆಲಸ ಕೊಡಲು ಒಪ್ಪಿರುತ್ತಾರೆ.

ಟೈಲ್ಸ್ ಕಾರ್ಮಿಕರ ಸಮ್ಮೇಳನ

ಭಟ್ಕಳ: ಬಸ್ತಿಮಕ್ಕಿ ಚಿತ್ರಾಪುರ ಟೈಲ್ಸ್‌ನ ಕಾರ್ಮಿಕರ ಘಟಕ ಸಮ್ಮೇಳನವು 24.9.95ರಂದು ಯಶಸ್ವಿಯಾಗಿ ನಡೆಯಿತು. ಸಮ್ಮೇಳನದಲ್ಲಿ ಸಹಕಾರ್ಯದರ್ಶಿ ನಾಗಪ್ಪ ದೇವಾಡಿಗ ವರದಿ ಮಂಡಿಸಿದರು. ಹದಿನಾರು ಜನರಿರುವ ಹೊಸ ಸಮಿತಿಯನ್ನು ಆಯ್ಕೆ ಮಾಡಿ ವೆಂಕಟೇಶ ದೇವಾಡಿಗ ಕಾರ್ಯದರ್ಶಿಯಾಗಿ, ನಾಗಪ್ಪ ದೇವಾಡಿಗ, ಮುನ್ವೇಲ ಡಿಕೋಸಾ ಸಹ ಕಾರ್ಯದರ್ಶಿಯಾಗಿ ಆಯ್ಕೆಯಾದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮುನ್ವೇಲ ಡಿಕೋಸಾ ವಹಿಸಿದ್ದರು. ಕಾರ್ಯಕ್ರಮದಲ್ಲಿ ಹಂಚು ಕಾರ್ಮಿಕರ ಸಂಘದ ಜಿಲ್ಲಾ ಸಮಿತಿಯ ಪದಾಧಿಕಾರಿಗಳಾದ ಸುರೇಶ ತಾಂಡೇಲ, ತಿಲಕ ಗೌಡ, ಸುಭಾಷ್ ಕೊಪ್ಪಿಕರ ಭಾಗವಹಿಸಿದ್ದರು.

4

ಭಾರತದ ವಾಣಿಜ್ಯ ಮತ್ತು ಕೈಗಾರಿಕಾ ಸಂಘಟನೆಗಳ ಒಕ್ಕೂಟದ (ಫೆಡರೇಷನ್ ಆಫ್ ಇಂಡಿಯನ್ ಚೇಂಬರ್ ಆಫ್ ಕಾಮರ್ಸ್ ಅಂಡ್
ಇಂಡಸ್ಟ್ರೀಸ್) ರಾಷ್ಟ್ರೀಯ ಸಮ್ಮೇಳನವನ್ನು ಉದ್ದೇಶಿಸಿ ಆಗಸ್ಟ್ 8, 1995 ರಂದು ಸಿಪಿಐ(ಎಂ)ನ ಪ್ರಧಾನ ಕಾರ್ಯದರ್ಶಿಗಳಾದ ಹರ್ಕಿಶನ್ ಸಿಂಗ್
ಸುರ್ಜಿತ್ ಅಭಿವೃದ್ಧಿಯ ಕುರಿತು ಎಲ್ಲಾ ಪಕ್ಷಗಳ ಧ್ಯೇಯೋದ್ದೇಶಗಳು ಘೋಷಣೆಗಳು ತೋರಿಕೆಗೆ ಒಂದೇ ರೀತಿಯಾಗಿವೆ ಎಂದು ಕಂಡುಬಂದರೂ,
ಅವುಗಳ ಆದ್ಯತೆಯನ್ನು ನಿರ್ಧರಿಸುವಲ್ಲಿ, ಅನುಷ್ಠಾನ-ಗೊಳಿಸುವಲ್ಲಿ ವಿಭಿನ್ನ ವರ್ಗ ಹಿತಾಸಕ್ತಿಗಳಿವೆ ಎಂದು ತಮ್ಮ ಉಪನ್ಯಾಸದಲ್ಲಿ ತಿಳಿಸಿದ್ದಾರೆ
ದುಡಿಯುವ ಜನರ ಹಿತಾಸಕ್ತಿಗಳಿಗೆ ಅನುಗುಣವಾಗಿ ಪರ್ಯಾಯ ಆರ್ಥಿಕ ನೀತಿಯನ್ನು ಪ್ರತಿಪಾದಿಸಿದ್ದಾರೆ. ಕೇಂದ್ರ ಸರ್ಕಾರವು ಸದ್ಯ
ಅನುಸರಿಸುತ್ತಿರುವ ಹೊಸ ಆರ್ಥಿಕ ನೀತಿಗೆ ಯಾವ ಪರ್ಯಾಯ ಆರ್ಥಿಕ ನೀತಿಯೂ ಇಲ್ಲ ಎಂಬ ವಾದಕ್ಕೆ ಸುರ್ಜಿತ್ ರವರ ಭಾಷಣ ಸವಾಲಾಗಿದೆ.
(ಸಂಗ್ರಹಾನುವಾದ -ಸಿ.ಆರ್. ಭಟ್)

ಪರ್ಯಾಯ ಪ್ರಜಾಸತ್ತಾತ್ಮಕ ಆರ್ಥಿಕ ಕಾರ್ಯಕ್ರಮ

-ಹರ್ಕಿಶನ್ ಸಿಂಗ್ ಸುರ್ಜಿತ್

ಪ್ರಸ್ತಾವನೆ:

ಎಲ್ಲಾ ರಾಜಕೀಯ ಪಕ್ಷಗಳು ಒಪ್ಪುವಂತಹ ಒಂದು ಸಾಮಾನ್ಯ ಆರ್ಥಿಕ ಕಾರ್ಯಕ್ರಮವನ್ನು ರೂಪಿಸುವುದು ಈ ಸಮ್ಮೇಳನದ ಉದ್ದೇಶವೆನ್ನಲಾಗಿದೆ. ನಮ್ಮ ಅಭಿಪ್ರಾಯದಲ್ಲಿ ಇದು ಅಸಾಧ್ಯ. ವಿವಿಧ ರಾಜಕೀಯ ಪಕ್ಷಗಳು ವಿವಿಧ ವರ್ಗ ಹಿತಾಸಕ್ತಿಗಳನ್ನು ಪ್ರತಿನಿಧಿಸುತ್ತವೆ. ಈ ಹಿತಾಸಕ್ತಿಗಳಲ್ಲಿ ಪರಸ್ಪರ ಘರ್ಷಣೆ ಇರುವುದರಿಂದ, ಸಾಮಾನ್ಯ ಆರ್ಥಿಕ ಕಾರ್ಯಕ್ರಮದ ಪ್ರಶ್ನೆಯೇ ಬರುವುದಿಲ್ಲ. ಕೆಲವು ನಿರ್ದಿಷ್ಟ ಸೂಕ್ಷ್ಮ ವಿಷಯಗಳ ಕುರಿತು ನಾವೆಲ್ಲರೂ ಒಪ್ಪಬಹುದೇ ಇಲ್ಲವೇ ಎಂಬುದು ಪ್ರಶ್ನೆ ಅಲ್ಲ. ನಾವೆಲ್ಲರೂ ಕೆಲವು ವಿಷಯಗಳ ಕುರಿತು ಸಹಮತಕ್ಕೆ ಬರಬಹುದಾದರೂ ನಮ್ಮೊಳಗೆ ರಾಜಿ ಮಾಡಿಕೊಳ್ಳಲಾಗದಂತಹ ವಿಭಿನ್ನ ದೃಷ್ಟಿಕೋನಗಳಿವೆ ಹಾಗೂ ಮಾರ್ಗಗಳಿವೆ ಎಂಬುದನ್ನು ಮರೆಯಲಾಗದು. ಹೀಗಿರುತ್ತಾ, ಒಂದು ವೇಳೆ ಸಹಮತದ ಕಾರ್ಯಕ್ರಮ ಇದ್ದರೆ ನಮ್ಮನ್ನು ಮತ್ತು ಇತರರನ್ನು ಮೋಸಗೊಳಿಸಿದಂತಾಗುವುದು. ನಿಜ, ಎಲ್ಲಾ ಪಕ್ಷಗಳೂ ಬಲಿಷ್ಠ ಮತ್ತು ಸಂಪತ್ ಭರಿತ ಭಾರತದ ನಿರ್ಮಾಣ, ಬಡತನ ನಿವಾರಣೆ ಮುಂತಾದ ಸಮಾನ ಧ್ಯೇಯೋದ್ದೇಶಗಳನ್ನು ತಾವು ಹೊಂದಿರುವುದಾಗಿ ಘೋಷಿಸುತ್ತೇವೆ. ಆದರೆ, ಈ ಧ್ಯೇಯೋದ್ದೇಶಗಳನ್ನು ಸಾಧಿಸುವ ವಿಧಾನಗಳಲ್ಲಿ ಅವುಗಳಲ್ಲಿ ತೀವ್ರ ಭಿನ್ನಾಭಿಪ್ರಾಯಗಳಿರುವುದರಿಂದ ಅವುಗಳ ಸಮಾನ ಧ್ಯೇಯೋದ್ದೇಶಗಳಿಗೆ ಹೆಚ್ಚಿನ ಮಹತ್ವ ಬರುವುದಿಲ್ಲ.

ಎರಡು ಮಾರ್ಗಗಳು

ನಮ್ಮ ದೇಶವನ್ನು ಅಭಿವೃದ್ಧಿಗೊಳಿಸುವುದು ಹೇಗೆ ಎಂಬ ಪ್ರಶ್ನೆಯ ಕುರಿತು ಈಗ ಸ್ವಲ್ಪವೂ ರಾಜಿ ಮಾಡಿಕೊಳ್ಳದಂತಹ ಸ್ಥೂಲವಾದ ಎರಡು ವಿಭಿನ್ನ ಮಾರ್ಗಗಳಿವೆ. ಒಂದೆಡೆ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಪ್ರತಿಪಾದಿಸುವ ಮಾರ್ಗ. ಅಭಿವೃದ್ಧಿಗೆ ಈ ಕೆಳಗಿನ ಕಾರ್ಯಕ್ರಮಗಳನ್ನು ಕೈಗೊಳ್ಳುವುದರಲ್ಲಿ ಈ ಮಾರ್ಗವು ನಂಬಿಕೆ ಇಟ್ಟಿದೆ.

ಆರ್ಥಿಕ ಅಸಮಾನತೆಯನ್ನು ಕಡಿಮೆಗೊಳಿಸುವುದು. ಉದಾಹರಣೆ, ಭೂಸುಧಾರಣೆಯಿಂದ ನಮ್ಮ ಕೃಷಿ ಕ್ಷೇತ್ರದಲ್ಲಿನ ಬೃಹತ್ ಪ್ರಮಾಣದ ಉತ್ಪಾದನಾ ಶಕ್ತಿಯನ್ನು ಬಿಡುಗಡೆ ಮಾಡಬಹುದು ಮತ್ತು ಆಂತರಿಕ ಮಾರುಕಟ್ಟೆಯ ಗಾತ್ರವನ್ನು ಹೆಚ್ಚಿಸಬಹುದು.

ಏರಿಕೆಯ ದರದಲ್ಲಿ ನೇರ ತೆರಿಗೆ ವಿಧಿಸುವ ಮೂಲಕ ಆದಾಯದಲ್ಲಿ ಅಸಮಾನತೆಗಳನ್ನು ನಿಯಂತ್ರಿಸುವುದು, ತೆರಿಗೆ ತಪ್ಪಿಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದು ಇತ್ಯಾದಿ ವಿಧಾನಗಳಿಂದ ಅಭಿವೃದ್ಧಿಗೆ ಬೇಕಾದ ಮೂಲಭೂತ ಅವಶ್ಯಕತೆಗಳನ್ನು ಒದಗಿಸಲು ಮತ್ತು ಸಮಾಜಕಲ್ಯಾಣ ಕಾರ್ಯಕ್ರಮಗಳನ್ನು ಕೈಗೊಳ್ಳಲು ಸಾರ್ವಜನಿಕ ವೆಚ್ಚಕ್ಕಾಗಿ ಬೇಕಾಗುವಷ್ಟು ಸಂಪನ್ಮೂಲ ಸಂಗ್ರಹಿಸಬಹುದು.

ಕೇಂದ್ರದಿಂದ ರಾಜ್ಯಗಳಿಗೆ ಮತ್ತು ರಾಜ್ಯಗಳಿಂದ ಕೆಳಮಟ್ಟದ ಚುನಾಯಿತ ಸಂಸ್ಥೆಗಳಿಗೆ (ಪಂಚಾಯತಗಳು ಮತ್ತು ನಗರಪಾಲಿಕೆಗಳು -ಅನು) ಸಂಪನ್ಮೂಲಗಳನ್ನು ಮತ್ತು ನಿರ್ಧಾರ ತೆಗೆದುಕೊಳ್ಳುವ ಅವಕಾಶಗಳನ್ನು (ಆಡಳಿತ ಮತ್ತು ಅಭಿವೃದ್ಧಿ ವಿಷಯಗಳಲ್ಲಿ -ಅನು) ಸಪ್ರಮಾಣದಲ್ಲಿ ವಿಕೇಂದ್ರಿಕರಿಸುವ ಮೂಲಕ ಪ್ರಸಕ್ತ ವ್ಯವಸ್ಥೆಯಲ್ಲಿ ಪರಿಣಾಮಕಾರಿಯಾಗಿ ಜವಾಬ್ದಾರಿ ನಿರ್ವಹಣೆ ಸಾಧ್ಯವಾಗುವುದು.

ಅಸಮಾನತೆಗಳನ್ನು ಆದಷ್ಟು ಕೆಳಮಟ್ಟದಲ್ಲಿಡುವುದರಿಂದ, ಪ್ರತಿಯೊಬ್ಬನೂ "ರಾಷ್ಟ್ರ ತನ್ನದು" ಎಂಬ ಭಾವನೆಯನ್ನು ತಾಳುವಂತಾಗುವುದು. ಸದ್ಯದ ದ್ವೇಷಪೂರ್ಣ ಜಗತ್ತಿನಲ್ಲಿ ಆರ್ಥಿಕ ಸಾರ್ವಭೌಮತೆಯನ್ನು ರಕ್ಷಿಸಲು ಇಂತಹ ರಾಷ್ಟ್ರೀಯ ಭಾವನೆಯು ಅತ್ಯಗತ್ಯವಾಗಿದೆ.

ಮೇಲಿನ ಮಾರ್ಗದ ವಿರುದ್ಧವಾಗಿ ಇನ್ನೊಂದು ಮಾರ್ಗದಲ್ಲಿ ನಮ್ಮ ಆರ್ಥಿಕ ಅಭಿವೃದ್ಧಿಗೆ "ಬಂಡವಾಳಶಾಹಿಗಳಿಗೆ" ಹೆಚ್ಚಿನ ಪ್ರೋತ್ಸಾಹಗಳು ಅಗತ್ಯವಿದೆ ಎಂದು ಪ್ರತಿಪಾದಿಸಲಾಗುತ್ತಿದೆ ಸಹಜವಾಗಿಯೇ ಇದರ ಅರ್ಥ:

ಈಗಾಗಲೇ ದೇಶದಲ್ಲಿ ಅತಿ ಸಣ್ಣ ಪ್ರಮಾಣದಲ್ಲಿ ಸಂಗ್ರಹವಾಗುತ್ತಿರುವ ನೇರ ತೆರಿಗೆಯಲ್ಲಿ ಇನ್ನಷ್ಟು ಕಡಿತ.

ಅಪ್ರತ್ಯಕ್ಷ ತೆರಿಗೆಯ ಭಾರ ಏರಿಕೆ, ಅದು ಹೆಚ್ಚಾಗಿ ಬಡವರ ಮೇಲೆಯೇ ಬೀಳುವುದು.

ಬಡವರ್ಗದ ಜನರಿಗಾಗಿಯೇ ಮೀಸಲಾಗಿರುವ ಸಬ್ಸಿಡಿಗಳಿಗೆ ಮತ್ತು ಕಲ್ಯಾಣ ಕಾರ್ಯಗಳಿಗೆ ಸಂಬಂಧಿಸಿದ ಸರ್ಕಾರ ವೆಚ್ಚದಲ್ಲಿ ಕಡಿತ.

ಬಂಡವಾಳ ಹೂಡುವಿಕೆಯಲ್ಲಿ 'ಸರ್ಕಾರದ ಪಾತ್ರದ ಹಿಂತೆಗೆತ', ಈ ಕೊರತೆಯನ್ನು ತುಂಬಲು ವಿದೇಶೀ ನೇರ ಬಂಡವಾಳದ ಮೇಲಿನ ಅವಲಂಬನೆ, ಪರಿಣಾಮಗಳು: ನಮ್ಮ ಸಾರ್ವಭೌಮತೆಯಲ್ಲಿ ರಾಜಿ, ನಿರೀಕ್ಷಿತ ಪ್ರಮಾಣದಲ್ಲಿ ವಿದೇಶೀ ಬಂಡವಾಳಬಾರದು. ಬಂದರೂ 'ಬಿಸಿ ಹಣ'ದ ರೂಪದಲ್ಲಿ ಬರಬಹುದು. ಇದು ಹಣದ ಮಾರುಕಟ್ಟೆಯ ಪರಿಳಿತವನ್ನು ಅವಲಂಬಿಸಿದ್ದು, ಆರ್ಥಿಕ ಅಭಿವೃದ್ಧಿಗೆ ಉಪಯೋಗವಾಗಲಾರದು. ಬದಲು ಆರ್ಥಿಕ ಅಸ್ಥಿರತೆಯನ್ನುಂಟು ಮಾಡುವುದು.

ಮೇಲ್ಕಾಣಿಸಿದ ಎರಡನೇ ಮಾರ್ಗವನ್ನೇ ಈಗ ಕೆಲಕಾಲದಿಂದ ಜಾಗತಿಕ ಬ್ಯಾಂಕ್ ಪ್ರತಿಪಾದಿಸುತ್ತಿರುವುದು ಮತ್ತು ಭಾರತದ ವ್ಯಾಪಾರ ಮತ್ತು ಕೈಗಾರಿಕಾ ಸಂಸ್ಥೆಗಳ ಒಕ್ಕೂಟವು ಈ ಸಮ್ಮೇಳನದಲ್ಲಿ ಚರ್ಚಿಸಲು ಮಂಡಿಸಿರುವ ಪ್ರಬಂಧದಲ್ಲಿ ಪ್ರಸ್ತಾಪಿಸಿರುವುದು. ಸಾಮಾನ್ಯ ಆರ್ಥಿಕ ಕಾರ್ಯಕ್ರಮವನ್ನು ರೂಪಿಸುವ ನೆಪದಲ್ಲಿ ಒಕ್ಕೂಟವು ತನ್ನ ಪ್ರಬಂಧದಲ್ಲಿ ನಿಜವಾಗಿಯೂ ಜಾಗತಿಕ ಬ್ಯಾಂಕ್ ಪ್ರತಿಪಾದಿಸುತ್ತಿರುವ ಕಾರ್ಯಕ್ರಮಕ್ಕೆ ನಮ್ಮೆಲ್ಲರ ಒಪ್ಪಿಗೆ ಪಡೆಯಲು ಬಯಸುತ್ತಿದೆ. ಈ ಪ್ರಬಂಧದ ಮೊದಲ ಪುಟದಲ್ಲಿಯೇ ನಮ್ಮ ಉತ್ತರದ ನೆರೆ ದೇಶಗಳನ್ನು ಚೀನ, ಟಿಬೇಟ್ ಮತ್ತು ನೇಪಾಳ ಎಂದು ಹೆಸರಿಸಿ ಒಕ್ಕೂಟವು ತನ್ನ ಪೂರ್ವಗ್ರಹವನ್ನು ಪ್ರಕಟಿಸಿದೆ. ಶೀತಲ ಯುದ್ಧ ಕಾಲದ ಪೂರ್ವಾಗ್ರಹಗಳ ಆಧಾರದಲ್ಲಿ ಸಾಮಾನ್ಯ ಕಾರ್ಯಕ್ರಮವನ್ನು ರೂಪಿಸಲು ಹವಣಿಸುತ್ತಿದೆ. (ಟಿಬೇಟ್ ಚೀನಾದ ಅವಿಭಾಜ್ಯ ಪ್ರದೇಶವಾಗಿದ್ದರೂ ಅಮೇರಿಕ ಮುಂತಾದ ಅಭಿವೃದ್ಧಿ ಹೊಂದಿದ ದೇಶಗಳು ಅವುಗಳ ಹಿತಾಸಕ್ತಿಗಳನ್ನು ಎತ್ತಿ ಹಿಡಿಯುತ್ತಿರುವ ಜಾಗತಿಕ ಬ್ಯಾಂಕ್ ಟಿಬೇಟನ್ನು ಇನ್ನೂ ಸ್ವತಂತ್ರ ದೇಶ ಎಂದು ಗುರುತಿಸುತ್ತಿರುವುದು ಇಲ್ಲಿ ನೆನಪಿಸಿಕೊಳ್ಳಬೇಕು -ಅನು)

ಬೇರೆ ವಿಧಾನಗಳ "ಸುಧಾರಣೆಗಳು"

ಈ ಎರಡು ಮಾರ್ಗಗಳ ಮಧ್ಯೆ ಇರುವ ವ್ಯತ್ಯಾಸದಲ್ಲಿ ಹುರುಳಿಲ್ಲ ಎಂದು ಜನರು ಅಭಿಪ್ರಾಯಪಡಬಹುದು. ಏನಿದ್ದರೂ ಎಲ್ಲಾ ರಾಜಕೀಯ ಪಕ್ಷಗಳೂ ಭೂಸುಧಾರಣೆ, ಸ್ವಾವಲಂಬನೆ, ಇತ್ಯಾದಿಗಳಿಗೆ ತಮ್ಮ ಸಹಮತ ವ್ಯಕ್ತಪಡಿಸುವುವು. ಹಾಗಾದರೆ ಅವುಗಳೊಳಗಿನ ವ್ಯತ್ಯಾಸಗಳ ಕುರಿತು ಮೇಲಿಂದ ಮೇಲೆ ಹೇಳುತ್ತಿರುವುದೇಕೆ? ನಿಜವಾದ ಪ್ರಶ್ನೆ ಇರುವುದು ಘೋಷಣೆಗಳಲ್ಲಿ ಅಲ್ಲ, ಅವುಗಳನ್ನು ಕಾರ್ಯಗತಗೊಳಿಸುವಲ್ಲಿ. ಭಾರತದಲ್ಲಿ ಎಲ್ಲೆಲ್ಲಿ ಗ್ರಾಮೀಣ ಬಡವರ ಸಾಮೂಹಿಕ ಆಂದೋಲನಗಳು ನಡೆದಿವೆಯೋ ಆ ರಾಜ್ಯಗಳಲ್ಲಿ ಮಾತ್ರ ಭೂ ಸುಧಾರಣೆಯನ್ನು ಗಮನಾರ್ಹವಾಗಿ ಜಾರಿಗೊಳಿಸಲಾಗಿದೆ. ಅಂತಹ ಆಂದೋಳನಗಳಲ್ಲಿ ಭೂ ಮಾಲಕರ ವಿರುದ್ಧ ಒಗ್ಗೂಡುವುದು ಅಗತ್ಯವಾಗಿರುವುದು. ಭೂ-ಮಾಲಕರ ವರ್ಗ ಹಿತಾಸಕ್ತಿಗಳ ವಿರುದ್ಧವಾಗಿರುವ ರಾಜಕೀಯ ಪಕ್ಷಗಳು ಮಾತ್ರ ಈ ದಿಶೆಯಲ್ಲಿ ಶ್ರಮಿಸಬಲ್ಲವು. ಭೂ ಸುಧಾರಣೆಯ ಅಗತ್ಯತೆಯ ಕುರಿತು ಕೃತಕ ಒಪ್ಪಂದದಿಂದ ಅವುಗಳನ್ನು ಜಾರಿಗೊಳಿಸುವ ವಿಷಯದಲ್ಲಿ ಪಕ್ಷಗಳೊಳಗಿನ ಮೂಲಭೂತವಾದ ಭಿನ್ನಾಭಿಪ್ರಾಯಗಳನ್ನು ಮುಚ್ಚಿಡುವಂತಿಲ್ಲ. ಮೇಲಾಗಿ ಎರಡು ವರ್ಗಗಳಿಗೆ ಸಂಬಂಧಿಸಿದಂತೆ ಪ್ರತಿಯೊಂದಕ್ಕೆ ಅವರದ್ದೇ ಆದ ತರ್ಕವಿರುತ್ತದೆ. ಜಾಗತಿಕ ಬ್ಯಾಂಕ್‌ನ ಮಾರ್ಗವನ್ನು ಅನುಮೋದಿಸುತ್ತಾ ಭೂ ಸುಧಾರಣೆಯನ್ನು ಜಾರಿಗೊಳಿಸುವುದು ಸಮಂಜಸವಾಗಲಾರದು. ಜಾಗತಿಕ ಬ್ಯಾಂಕ್ ಮಾದರಿ ಸುಧಾರಣೆಗಳನ್ನು ಪ್ರತಿಪಾದಿಸುವವರು ಇಲ್ಲಿಯ ತನಕ ಅಂಗೀಕರಿಸಿದ ಭೂ ಸುಧಾರಣೆ ಕಾನೂನುಗಳನ್ನು 'ಉದಾಹರಣೆಗೆ ಭೂಮಿತಿ ಕಾಯಿದೆಯನ್ನು ರದ್ದುಗೊಳಿಸುವ ಬೇಡಿಕೆಯನ್ನು ಮುಕ್ತವಾಗಿ ಮುಂದಿಡುತ್ತಿರುವುದು ಆಶ್ಚರ್ಯವಾಗಲಾರದು.

ವರ್ಷ	ಗ್ರಾಮೀಣ	ನಗರ	ಆಧಾರ
1990-91	36.55	32.43	ತೆಂಡೂಲಕರ್ ಮತ್ತು ಜೈನ
1991	42.06	32.02	ಇಕಾನಾಮಿಕ್ಸ್ ಟೈಮ್ಸ್
			ಮತ್ತು ಪೊಲಿಟಿಕಲ್ ವೀಕ್ಲಿ
1993	48.07	33.87	ಜೂನ್ 10, 1995

ನಿರರ್ಥಕ ಮಾರ್ಗ

ನಮ್ಮ ಸರ್ಕಾರ ಅನುಸರಿಸುತ್ತಿರುವಂತಹ ಜಾಗತಿಕ ಬ್ಯಾಂಕ್ ಮಾದರಿ 'ಸುಧಾರಣೆಗಳು' ಜಾರಿಗೊಂಡ ಜಗತ್ತಿನ ಯಾವ ದೇಶದಲ್ಲಿಯೂ ಬಡತನ ನಿವಾರಣೆಯಾಗುವುದಿರಲಿ ಅಭಿವೃದ್ಧಿಯ ನಿವ್ವಳ ದರ ಏರಿಕೆಯೂ ಸಾಧ್ಯವಾಗಲಿಲ್ಲ. ಕೆಲವು ಯಶಸ್ಸಿನ ಕತೆಗಳು ಎಂದು ಕರೆದುಕೊಳ್ಳುತ್ತಿದ್ದು ತೋರಿಸುತ್ತಿರುವ ದೇಶಗಳಲ್ಲಿಯೂ ಯಥಾರ್ಥವಾದ ಯಶಸ್ಸು ಸಾಧಿಸಲಿಲ್ಲ. ಅಲ್ಲಿ ಈ ಮಾದರಿಯ ಸುಧಾರಣೆಗಳಿಂದ ಪ್ರಾರಂಭದಲ್ಲಿ ಸಂಭವಿಸಿದ ಆರ್ಥಿಕ ಕುಸಿತದ ಕೆಳಮಟ್ಟದಿಂದ ಮುಂದೆ ಸಂಭವಿಸಿದ ಅಲ್ಪ ಸ್ವಲ್ಪ ಅಭಿವೃದ್ಧಿ ದರಗಳ ಹೆಚ್ಚಳವನ್ನು ಹೊಗಳಲಾಗುತ್ತಿದೆ ಅಷ್ಟೆ. ಇಂತಹ ಕೆಲವೇ ಉದಾಹರಣೆಗಳಲ್ಲಿಯೂ, ಸಾಧಿಸಿದ ಯಶಸ್ಸು ಎಷ್ಟು ಅಲ್ಪಕಾಲಿಕ ಎಂದು ಮೆಕ್ಸಿಕೋದ ಅನುಭವದಿಂದ ಸ್ಪಷ್ಟವಾಗುವುದು. ಇನ್ನೊಂದೆಡೆ ಹಿಂದಿನ ಸೋವಿಯೆತ್ ಒಕ್ಕೂಟ, ಪೂರ್ವ ಯುರೋಪ್, ಇಡೀ ಆಫ್ರಿಕಾ ಮತ್ತು ಬಹುಪಾಲು ಲ್ಯಾಟಿನ್ ಅಮೇರಿಕಾ ದೇಶಗಳು ಈ ಮಾದರಿಯ ಆರ್ಥಿಕ ಸುಧಾರಣೆಗಳನ್ನು ಅನುಸರಿಸುದರಿಂದಲೇ ಸಂಭವಿಸಿದ ವಿಪತ್ತುಗಳ ಅನುಭವಗಳು ನಮ್ಮ ಮುಂದೆ ಇವೆ. ಅವುಗಳ ಆರ್ಥಿಕ ಸಾರ್ವಭೌಮತೆಯು ನಶಿಸಿದೆ. ಅವುಗಳ ಆರ್ಥಿಕ ವ್ಯವಸ್ಥೆಗಳು ಗಣನೀಯವಾಗಿ ಹಿಂಜರಿತ ಅನುಭವಿಸಿವೆ. ಅವುಗಳ ಜನರು ಊಹನಾತೀತವಾದ ಕಷ್ಟಕಾರ್ಪಣ್ಯಗಳಿಂದ ಬಳಲಿದ್ದಾರೆ.

ಈ ಸುಧಾರಣೆಗಳಿಂದ ಅಲ್ಪಾವಧಿಯಲ್ಲಾದರೂ, ನಮ್ಮದೇ ಅನುಭವಗಳಿಂದ ವಿಪತ್ತುಕಾರಕ ಪರಿಣಾಮಗಳ ಸಾಧ್ಯತೆಗಳಿರುವುದು ಕಂಡು ಬರುತ್ತದೆ. ಒಕ್ಕೂಟದ ಪ್ರಬಂಧದಲ್ಲಿಯೇ ಒಪ್ಪಿಕೊಂಡಂತೆ, ಆರ್ಥಿಕ ಅಭಿವೃದ್ಧಿಗೆ ಬಂಡವಾಳ ಹೂಡುವಿಕೆಯ ಪ್ರಮಾಣ ಮುಖ್ಯಾಂಶವಾಗಿದ್ದು, ಅದುವೇ ಗಣನೀಯವಾಗಿ ಇಳಿಮುಖಗೊಂಡಿದೆ. ಕಾರಣಕಂಡು ಹಿಡಿಯಲು ದೂರ ಹೋಗಬೇಕಾಗಿಲ್ಲ. ಸುಧಾರಣೆಗಳಿಂದ ಬಂಡವಾಳ ಹೂಡುವಿಕೆಯ ಜವಾಬ್ದಾರಿಯನ್ನು ಸರಕಾರ ಕಳಚಿಕೊಂಡಿದೆ. ಈ ಕೊರತೆಯನ್ನು ತುಂಬಲು ಖಾಸಗೀ ಕ್ಷೇತ್ರ ಮುಂದೆ ಬರುತ್ತಿಲ್ಲ. ದೇಶೀಯ ಬಂಡವಾಳಶಾಹಿಗಳು ಬಂಡವಾಳ ಹೂಡಲು ಹಿಂಜರಿಯುತ್ತಿರುವಾಗ, ಭಾರೀ ಭರವಸೆ ಇಟ್ಟಿದ್ದ ವಿದೇಶೀ ನೇರ ಬಂಡವಾಳ ಹೂಡುವಿಕೆಯೂ ಸಾಕಷ್ಟು ಹರಿದು ಬರುತ್ತಿಲ್ಲ.

ಏಪ್ರಿಲ್ 91ರಿಂದ ಡಿಸೆಂಬರ್ 94ರವರೆಗೆ ಒಟ್ಟು ವಿದೇಶೀ ನೇರ ಬಂಡವಾಳ ಹೂಡುವಿಕೆಯು ಕೇವಲ ಡಾಲರ್ 1.8 ಬಿಲಿಯನ್ ಗಳಷ್ಟು (ಅಂದಾಜು 5400 ಕೋಟಿ) ಇದಲ್ಲದೆ ಬೇರೆ ಬಂದಿರುವುದೇನೆಂದರೆ ಅಲ್ಪಕಾಲಿಕ ಠೇವಣಿಗಳ ಮತ್ತು ಶೇರುಗಳಲ್ಲಿ ಬಾಂಡುಗಳಲ್ಲಿ ಅಧಿಕ ಬಡ್ಡಿ ಲಾಭಗಳಿಕೆಗಾಗಿ ಬೃಹತ್ ಪ್ರಮಾಣದಲ್ಲಿ 'ಬಿಸಿ ಹಣ' (ಸುಮಾರು ರೂ. 60,000 ಕೋಟಿ) ಈ ಹಣವನ್ನು ಉತ್ಪಾದನಾ ಬಂಡವಾಳವನ್ನಾಗಿ ಬಳಸಲು ಬರುವುದಿಲ್ಲ. ಇದರಿಂದ ಯಾವುದೇ ಸಮಯದಲ್ಲಿ ಮೆಕ್ಸಿಕೋ ಮಾದರಿಯ ದುಃಸ್ಥಿತಿಯು ನಮ್ಮ ಆರ್ಥಿಕತೆಗೆ ಬಂದೊದಗುವ ಅಪಾಯವಿದೆ. (1994 ರ ಕೊನೆಯಲ್ಲಿ ಮೆಕ್ಸಿಕೋದಲ್ಲಿ ಈ ರೀತಿಯ 'ಬಿಸಿಹಣ' ದೊಡ್ಡ ಪ್ರಮಾಣದಲ್ಲಿ ಕೆಲವೇ ದಿನಗಳಲ್ಲಿ ವಿದೇಶಗಳಿಗೆ ವಾಪಾಸು ಹರಿದು ಹೋಗಿ ಅದುವರೆಗೆ ಸಂಭವಿಸಿದಷ್ಟು ತೀವ್ರವಾದ ವಿದೇಶೀ ವಿನಿಮಯ ಬಿಕ್ಕಟ್ಟು ಉಂಟಾಗಿತ್ತು. ಅದನ್ನು ಹೋಗಲಾಡಿಸಲು ಅಮೇರಿಕಾ ಮೆಕ್ಸಿಕೋಕ್ಕೆ ಹೊಸದಾಗಿ ಇನ್ನೊಂದು ದೊಡ್ಡ ಸಾಲ ನೀಡಬೇಕಾಯಿತು) ಸ್ವದೇಶಿ ಮತ್ತು ವಿದೇಶೀ ಬಂಡವಾಳಶಾಹಿಗಳಿಗೆ ಇದುವರೆಗೆ ಕಡಿವಾಣ ಹಾಕಿದುದರಿಂದ ನಮ್ಮ ಆರ್ಥಿಕ ಅಭಿವೃದ್ಧಿಯು ಕುಂಠಿತವಾಗಿತ್ತು ಎಂಬ ಮೂಲಭೂತ ತಿಳುವಳಿಕೆಯ ನಿರರ್ಥಕತೆಯನ್ನೆ ಇವೆಲ್ಲವುಗಳೂ ತೋರಿಸುವುವು. ಅವುಗಳ ಮೇಲಿನ ಹೇಳಿಕೊಳ್ಳುವಂತಹ ಕಡಿವಾಣಗಳನ್ನು ತೆಗೆದು ಹಾಕಿ ನಂತರವೂ ಏನೂ ಪ್ರಯೋಜನವಾಗಲಿಲ್ಲ ಎಂದು ನಮ್ಮ ಅನುಭವ ತೋರಿಸಿದೆ. ಅದಕ್ಕೆ ತದ್ವಿರುದ್ಧವಾಗಿ ಅವುಗಳ ಮೇಲಿನ ಕಡಿವಾಣಗಳನ್ನು ಕಿತ್ತೊಗೆಯುವುದೆಂದರೆ, ಬಂಡವಾಳ ಹೂಡುವಿಕೆಯಲ್ಲಿ ಯಾವುದೇ ಪ್ರಯೋಜನಕಾರಿ ಪ್ರತಿಫಲವಿಲ್ಲದೆ ಉದ್ಯಮಗಳನ್ನು ಅತ್ಯಲ್ಪ ಬೆಲೆಗೆ ಬಹುರಾಷ್ಟ್ರೀಯ ಸಂಸ್ಥೆಗಳೂ ಸೇರಿದಂತೆ ಖಾಸಗಿ ಸಂಸ್ಥೆಗಳಿಗೆ ಹಸ್ತಾಂತರಿಸುವುದಾಗಿದೆ ಅಷ್ಟೆ. ಹೇಳಿಕೊಳ್ಳುವಂತಹ ಖಾಸಗೀಕರಣ ಕಾರ್ಯಕ್ರಮ ಎಂದರೆ ನಮ್ಮ ಆರ್ಥಿಕ ವ್ಯವಸ್ಥೆಯಲ್ಲಿ ಹಗರಣವಾಗಿ ಪರಿಣಮಿಸಿರುವುದನ್ನು, ಇತ್ತೀಚಿಗಿನ ಬೈಲದಿಲ್ಲಾ ಪ್ರಕರಣ ಮತ್ತು ವಿದ್ಯುತ್ ಉತ್ಪಾದನಾ ಕ್ಷೇತ್ರದ ಕುರಿತಾದ ವಿದ್ಯಮಾನಗಳು ಜಗಜಾಹಿರವಾಗುವ ಮೊದಲೇ, ಭಾರತದ ಶ್ರೇಷ್ಠ ಲೆಕ್ಕಪತ್ರ ತಪಾಸಣೆಗರು (ಸಿ.ಎ.ಜಿ.) ಗಮನಸೆಳೆದಿರುತ್ತಾರೆ. ನಾವು ನಿಜವಾದ ಖಾಸಗೀಕರಣದ ಬದಲು ಬಹುರಾಷ್ಟ್ರೀಯ ಸಂಸ್ಥೆಗಳ ವಶೀಕರಣದ ಕುರಿತೇ ಮಾತನಾಡುತ್ತಿರುವಾಗ, ವಶೀಕರಣದ ಶರತ್ತುಗಳು, ಲಂಚರುಷುವತ್ತುಗಳು ದೊಡ್ಡ ಹಗರಣಗಳಾಗಿ ಪರಿಣಮಿಸಿವೆ. ಎನ್ರೋನ್ ಪ್ರಕರಣವು ಟೆಂಡರ್ ಇಲ್ಲದಿರುವುದರಿಂದ ಮಾತ್ರವಲ್ಲದೆ, ವಿದ್ಯುತ್ ಉತ್ಪಾದನೆಯನ್ನು ಒಂದು ಮೆಗಾ ವಾಟಿಗೆ ರೂ. 4.49 ಕೋಟಿ ವೆಚ್ಚದಲ್ಲಿ ಮಾಡಲಾಗುವುದು. ಈ ವೆಚ್ಚವು ಸಾರ್ವಜನಿಕ ಕ್ಷೇತ್ರದ ಸಂಸ್ಥೆಯಾದ ಬಿ.ಹೆಚ್.ಇ.ಎಲ್.ನ ವಿದ್ಯುತ್ ಉತ್ಪಾದನಾ ವೆಚ್ಚಕ್ಕಿಂತ ತುಂಬಾ ಹೆಚ್ಚಾಗಿದೆ. ಈ ಸ್ವದೇಶೀ ಸಂಸ್ಥೆ ಸಾಕಷ್ಟು ಕೆಲಸವಿಲ್ಲದೆ ಕ್ಷಯಿಸುತ್ತಿದೆ.

ಪರ್ಯಾಯ ಪ್ರಜಾಸತ್ತಾತ್ಮಕ ಕಾರ್ಯಕ್ರಮ

ಸಂಕ್ಷಿಪ್ತವಾಗಿ ಹೇಳುವುದಾದರೆ, ಈ ಸುಧಾರಣೆಗಳ ಪರಿಣಾಮವಾಗಿ ಸಾರ್ವಜನಿಕ ಆಸ್ತಿಗಳ ವೆಚ್ಚದಿಂದ ಅತಿ ಶೀಘ್ರವಾಗಿ ಖಾಸಗೀ ಶ್ರೀಮಂತೀಕರಣವಾಗುವುದನ್ನು ನಾವು ಇಂದು ನೋಡುತ್ತಿದ್ದೇವೆ. ಒಮ್ಮೆ ಹಣಕಾಸು ಕ್ಷೇತ್ರದ ಸುಧಾರಣೆಗಳನ್ನು ಕೈಗೊಂಡನಂತರ ದೇಶದ ಆರ್ಥಿಕ ವ್ಯವಸ್ಥೆಯನ್ನು ವಿದೇಶೀ ಸಟ್ಟಾ ವ್ಯಾಪಾರಿಗಳಿಗೆ ಅನಿರ್ಬಂಧಿತವಾಗಿ ತೆರೆದಿಟ್ಟಂತಾಗುವುದು ಮತ್ತು ಲ್ಯಾಟೀನ್ ಅಮೇರಿಕ ಹಾಗೂ ಇತ್ತೀಚೆಗೆ ಮೆಕ್ಸಿಕೋದಲ್ಲಿ ಸಂಭವಿಸಿದಂತೆ ಖಾಸಗೀ ಶ್ರೀಮಂತೀಕರಣ ಮತ್ತು ಆರ್ಥಿಕ ವ್ಯವಸ್ಥೆಯ ಅಂತರ್ರಾಷ್ಟ್ರೀಕರಣ ಇನ್ನಷ್ಟು ತಮ್ಮ ವೇಗವನ್ನು ವೃದ್ಧಿಸಿಕೊಳ್ಳುವವು.

ಇದು ಹೀಗೆ ನಡೀತಾ ಇರುವಾಗ ಇತ್ತೀಚೆಗೆ ನಾಲ್ಕು ವರ್ಷಗಳ ಅವಧಿಯಲ್ಲಿ ಬಡತನದ ಪ್ರಮಾಣ ಹೆಚ್ಚಿರುವುದನ್ನು ನಾವು ಕಾಣುತ್ತೇವೆ.

ಗಗನಕ್ಕೇರುತ್ತಿರುವ ಹಣದುಬ್ಬರ, ಮುಖ್ಯವಾಗಿ ವಿಪುಲ ದಾಸ್ತಾನುಗಳಿದ್ದರೂ ಆಹಾರಧಾನ್ಯಗಳ ಬೆಲೆ ಏರಿಕೆ, ಸಾರ್ವಜನಿಕ ವಿತರಣಾ ವ್ಯವಸ್ಥೆಯ ಕುಸಿತ ಮತ್ತು ವಿವಿಧ ಸಾಮಾಜಿಕ ಖರ್ಚುಗಳಲ್ಲಿ ಕಡಿತ, ಇತ್ಯಾದಿಗಳೆಲ್ಲಾ ಈ ಸುಧಾರಣೆಗಳ ಪ್ರತಿಫಲಗಳೇ ಆಗಿದ್ದು, ಅವುಗಳ ಒಟ್ಟು ಪರಿಣಾಮದಿಂದ ಬಡತನದ ಪ್ರಮಾಣವು ಹೆಚ್ಚಾಗಿದೆ. ಬಡತನ ಪ್ರಮಾಣ ಹೆಚ್ಚುತ್ತಿರುವುದು ಬರಗಾಲಕ್ಕೆ ಸಂಬಂಧಿಸಿದ ಅಭಾವ ಪರಿಸ್ಥಿತಿಯಿಂದಲ್ಲ, ಬದಲು ಅಕ್ಷರಶಃ ಸಮೃದ್ಧಿಯ ಮಧ್ಯದಲ್ಲಿಯೇ ಬಡತನ ಪ್ರಮಾಣವೂ ಹೆಚ್ಚುತ್ತಿರುವುದು ಈಗಿನ ಧೋರಣೆಯ ನೇರ ಪ್ರತಿಫಲ ಎಂಬುದನ್ನು ಗಮನಿಸಬೇಕು.

ಭಾರತದ ಕೈಗಾರಿಕೆ ಮತ್ತು ಸ್ವದೇಶಿ ವಿಜ್ಞಾನ ಹಾಗೂ ತಂತ್ರಜ್ಞಾನದ ಅಭಿವೃದ್ಧಿಯ ಕುಂಠಿತಗೊಳ್ಳುವ ರೀತಿಯಲ್ಲಿ ವಿದೇಶೀ ಬಂಡವಾಳ ಮತ್ತು ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಮುಕ್ತ ದ್ವಾರ ನೀಡಲಾಗುತ್ತಿದೆ. ಸ್ವದೇಶೀ ಕೈಗಾರಿಕೆಗಳ ನ್ಯಾಯೋಜಿತ ಹಿತಾಸಕ್ತಿಗಳನ್ನು ರಕ್ಷಿಸಲು ಕಾಳಜಿ ವಹಿಸುತ್ತಿಲ್ಲ. ಆರ್ಥಿಕ ವ್ಯವಸ್ಥೆಯಲ್ಲಿ ಸ್ವದೇಶೀ ಉದ್ಯಮಗಳಿಗೆ ಸರ್ಕಾರ ರಕ್ಷಣೆ ಹಾಗೂ ಪ್ರೋತ್ಸಾಹ ನೀಡುವ ಮೂಲಕ ಪೂರ್ವ ಏಷ್ಯಾದ ದೇಶಗಳಲ್ಲಿ ಹೇಗೆ ಶೀಘ್ರ ಗತಿಯಲ್ಲಿ ಅಭಿವೃದ್ಧಿ ದಾಖಲೆ ಸಾಧ್ಯವಾಗಿದೆ ಎಂದು ಅನುಭವದಿಂದ ತೋರಿಬರುವುದು.

ಆರ್ಥಿಕ ವ್ಯವಸ್ಥೆಯನ್ನು ಸರಿದಾರಿಗೆ ತರಬೇಕಾದರೆ ನಮಗೊಂದು ಪರ್ಯಾಯ ಪ್ರಜಾಸತ್ತಾತ್ಮಕ ಕಾರ್ಯಕ್ರಮ ಬೇಕು. ಸಂಪತ್ತು ಮತ್ತು ಆದಾಯ ವಿತರಣೆಯಲ್ಲಿನ ಅಸಮಾನತೆಗಳನ್ನು ಕಡಿತಗೊಳಿಸಬೇಕು. ಸಾರ್ವಜನಿಕ ಕ್ಷೇತ್ರವನ್ನು ಪುನಃಶ್ಚೇತನಗೊಳಿಸಬೇಕು. ಅದು ಹೆಚ್ಚು ಜವಾಬ್ದಾರಿಕೆಯಿಂದ ಕಾರ್ಯನಿರ್ವಹಿಸುವಂತೆ ಮಾಡಬೇಕು. ನಮ್ಮ ದೇಶದಂತಹ ಆರ್ಥಿಕ ವ್ಯವಸ್ಥೆಯಲ್ಲಿ ಸಾರ್ವಜನಿಕ ಕ್ಷೇತ್ರವು ವಿದೇಶೀ ಪ್ರಭುತ್ವದ ವಿರುದ್ಧ ರಕ್ಷಣೆಗೆ ಅಗತ್ಯವಿದೆ. ಕಾರಣ, ಅದೊಂದೇ ಸಾಕಷ್ಟು ಪ್ರಮಾಣದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಬಹುದಾಗಿದೆ. ಅದು ಆಂತರಿಕ ಆರ್ಥಿಕ ವ್ಯವಸ್ಥೆಯಲ್ಲಿ ಯಾವುದೇ ತಂತ್ರಜ್ಞಾನವನ್ನು ಕರಗತ ಮಾಡಿಕೊಳ್ಳಬಹುದು ಮತ್ತು ಹೊಸ ತಂತ್ರಜ್ಞಾನವನ್ನು ಸೃಷ್ಟಿಸಬಹುದು. ಉದಾ. ರಸಗೊಬ್ಬರಗಳು, ಘನ ವಿದ್ಯುತ್ ಯಂತ್ರಗಳು, ಸಮುದ್ರದ ಆಳದಿಂದ ತೈಲ ಉತ್ಪಾದನೆ ಇತ್ಯಾದಿ ಬಂಡವಾಳ ಹೂಡಿಕೆಯ ಪ್ರಮಾಣವು ಆರ್ಥಿಕ ಅಭಿವೃದ್ಧಿಗೆ ಅತಿ ಪ್ರಮುಖ ಅಂಶವಾಗಿರುವುದರಿಂದ, ಅದನ್ನು ಬಡ ಆರ್ಥಿಕ ವ್ಯವಸ್ಥೆಯಲ್ಲಿ ಬಂಡವಾಳಶಾಹಿಗಳ ಮರ್ಜಿಗೆ ಬಿಟ್ಟುಕೊಡುವುದು ಸರಿಯಲ್ಲ. ಈ ಚೌಕಟ್ಟಿನಲ್ಲಿ ಆರ್ಥಿಕ ಅಭಿವೃದ್ಧಿಗೆ ಬಲಿಷ್ಠ ಸಾರ್ವಜನಿಕ ಸಂಸ್ಥೆ ಕ್ರಿಯಾಶೀಲ ಖಾಸಗೀ ಕ್ಷೇತ್ರ ಮತ್ತು ವಿಸ್ತರಿಸುತ್ತಿರುವ ಸಹಕಾರಿ ಕ್ಷೇತ್ರಗಳ ಅಗತ್ಯವಿದೆ.

ಭೂಮಾಲಕರ
ಪ್ರಯತ್ನಿಸುತ್ತಿ

ಆಕಾಶದಲ್ಲಿರುವ ಮೋಡ ದಿಗ
ಆಗಾಗ ಮಿಂಚು. ದೂರದ ಗುಡುಗಿಗೆ
ರವೆಂಬಂತೆ ಇಲ್ಲಿ ನೆಲದ ಮೇಲೆ ಪ
ಜಾತಿಗೆ ಸೇರಿದ ಭಾಗ ಬೆಳೆಗಾರರ
ಕಂಠದ ಘೋಷಣೆಗಳು- ಉತ್ತರ ಪ್ರದೇ
ವಾರಾಣಸಿಯಲ್ಲಿ ಭೂ ಹೋರಾಟದ
ಹಳೆ.

ವಿಭೂತಿ ನಾರಾಯಣ್ ಸಿಂಗ್ ವಾ
ಸಿಯ ಮಾಜಿ ಮಹಾರಾಜ, ಈಗ ರಾಮ
ರದ ರಾಮಲೀಲಾದ ಮಹಾಪೋಷಕ ಹಾ
ಬನಾರಸ್ ಹಿಂದೂ ವಿಶ್ವವಿದ್ಯಾಲಯದ
ಪತಿ. ಮುಂಬೈಯ ತಾಜ್ ಮಹಲ್ ಹೋ
ಲಿನ ಅರೆ ಮಾಲಿಕ ಎಂದೂ ಹೇಳಲಾ
ತ್ತಿದೆ. ಈತ ತಮ್ಮಿಂದ ಕಾನೂನುಬಾಹಿರ
ಇದುವರೆಗೆ ಕೇಳುತ್ತಿದ್ದ ಇನ್ನು
ಮುಂದೆ ಕೊಡೆವು ಎಂಬುದು
ವಾರಾಣಸಿಯ ಬಡ ಭಾಗ ಬೆಳೆ
ಗಾರರ ದೃಢ ನಿರ್ಧಾರ.

ಈತನ ಬಳಿ ಬಹಳ ಸಂಪ
ತ್ತಿದೆ. ಆದರೆ ತನ್ನದೆಂದು ಭಾಗ
ಬೆಳೆಯನ್ನು ಕಿತ್ತುಕೊಳ್ಳುವ ಜಮೀ
ನಿನ ಹಕ್ಕುಪತ್ರ ಆವನ ಬಳಿಯಿಲ್ಲ.
ಆದರೂ ತಮ್ಮ ಹೊಟ್ಟೆಪಾಡಿಗೆ
ಗದ್ದೆಗಳಲ್ಲಿನ ಇಲಿಗಳ ಬಿಲದಿಂದ
ಕಾಳು ಸಂಗ್ರಹಿಸಬೇಕಾದ ಬಡ
ಭಾಗ ಬೆಳೆಗಾರರಿಗೆ ಯಾವುದೇ
ಹಕ್ಕು ಸಿಗಬಾರದು ಎಂಬುದು
ಆತನ ಆಸೆಯಾಗಿತ್ತು. ಆದರೆ
ಅದೀಗ ಭೂತಕಾಲಕ್ಕೆ ಸೇರಿದ
ಮಾತು. ಈಗಂತೂ ಅಲ್ಲಿ ಹಸಿರು
ಗದ್ದೆಗಳಲ್ಲಿ ಹಾರಾಡುತ್ತಿರುವ
ಕೆಂಬಾವುಟಗಳ ನಡುವಿನಿಂದ ಈಗ ಬ
ನರ ಘೋಷಣೆಗಳು ಮುಗಿಲು ಮುಟ್ಟ

ಜೋ ಜಮೀನ್ ಜೋತೇ ಬೋಯ
ವೋ ಜಮೀನ್ ಕಾಮಾಲಿಕ್ ಹ
(ಯಾರು ಭೂಮಿಯನ್ನು ಉಳ
ವರೋ ಬಿತ್ತುವರೋ
ಅವರೇ ಭೂಮಿಯ ಒಡೆಯರು)
ಧನ್ ಔರ್ ಧರ್ತಿ ಬಟ್‌ಕೇ ರಹೇಗಿ
(ಹಣ ಮತ್ತು ಭೂಮಿ ಹಂಚಿಕೆಯ
ಗಲೇಬೇಕು)

ಸೆಪ್ಟೆಂಬರ್ 4 ರಂದು ಸತ್ಯಾಗ್ರಹ
ಭಿಸಿದ್ದಾರೆ. ಸಾಂಕೇತಿಕವಾಗಿ 2 ಎಕ್ರೆ ಜಮಿ
ನಲ್ಲಿ ಅವರೇ ಗಿಡ ನೆಟ್ಟಿದ್ದಾರೆ. ಈ ಭೂ
ಉಳುತ್ತಿದ್ದವರೂ ಸೇರಿದಂತೆ 3000ಕ್ಕೂ ಹೆ
ಮಂದಿ ಬಂಧನಕ್ಕೊಳಗಾಗಿದ್ದಾರೆ.

ಬದಲಾದ ವಾತಾವರಣ

ಹಿಂದೆ ನಾನಿಲ್ಲಿ ಬಂದಾಗ ಭಯದ ವಾ
ವರಣ ಕಾಣುತ್ತಿತ್ತು ಈಗ ಬದಲಾಗಿದೆ.
ಸಂಭ್ರಮದ ವಾತಾವರಣ ಕಾಣುತ್ತಿದೆ.
ಕೊಂಬು-ಕಹಳೆ, ಢೋಲುಗಳನ್ನು ಹಿಡಿ
ತಲೆಯೆತ್ತಿ ಹಾಡುತ್ತಾರೆ- ಕುಣಿಯುತ್ತಾ
ಹೋರಾಟ ಅವರಲ್ಲೊಂದು ಹೊಸ ಆ
ಶ್ವಾಸ ಮೂಡಿಸಿದೆ. ಮಹಾರಾಜ ತಮಗೇನ
ಮಹದುಪಕಾರ ಮಾಡುತ್ತಿದ್ದಾನೆ ಎಂಬ
ಭಾವ ಈಗಿಲ್ಲ. ಸ್ಥಳೀಯ ಅಧಿಕಾರಿಗಳು
ಮಹಾರಾಜನ ಬೆಂಬಲಕ್ಕೆ ನಿಂತರೂ ಭೂ
ಆತನದಲ್ಲ ಎಂದು ಅವರಿಗೀಗ ತಿಳಿದಿದೆ.
ಪ್ರಜ್ಞೆ ಅವರನ್ನು ಸಂಪೂರ್ಣ ಬದಲಿಸಿದೆ

ಐಕ್ಯರಂಗ 15/10/95

ಕಾನೂನಿನ ನೊಗದಡಿ ತರಲು ವಾರಣಾಸಿ ಭೂ ಹೋರಾಟ

-ಸುನೀಲ್ ಚೋಪ್ರಾ

ಜನಪಿಭಾಗಗಳ ಸೌಹಾರ್ದತೆ
ರ ಅವರು ಪಡೆದಿರುವ ಶಕ್ತಿಯೂ ಅಷ್ಟಿ
ಅವರಿಗೆ ಬೆಂಬಲವಾಗಿ ಆಗಸ್ಟ್ 29
ಸೆಪ್ಟೆಂಬರ್ 5 ರಂದು ಸಿಪಿಐ(ಎಂ)
ಸಮಿತಿ, ಸೆಪ್ಟೆಂಬರ್ 3 ಮತ್ತು 4
ಎ.ಐ.ಕೆ.ಎ, ಸೆಪ್ಟೆಂಬರ್ 7 ರಂದು
ಎಫ್.ಐ., ಡಿ.ವೈ.ಎಫ್.ಐ. ಮತ್ತು
ಡಿ.ಡಬ್ಲ್ಯು.ಎ. ಹಾಗೂ ಸೆಪ್ಟೆಂಬರ್ 8
ಸಿಐಟಿಯು ಧರಣೆ ನಡೆಸಿದವು. ಹತ್ತಿ
ನ್ಯಾನ್‌ಪುರ್ ಮತ್ತು ಚಂದ್ರಾಲಿಯಲ್ಲೂ
ರ್ದ ಮತಪ್ರದರ್ಶನಗಳು ನಡೆದವು.
ು ಎ.ಐ.ಎ.ಡಬ್ಲ್ಯು.ಯು. (ಅಖಿಲ
ಕೃಷಿ ಕೂಲಿಕಾರರ ಸಂಘ) ಘಟಕ
ಈ ಹೋರಾಟದ ಬೆನ್ನೆಲುಬು. ಇತ್ತೀ
ಯುನೈಟೆಡ್ ಬ್ಯಾಂಕ್ ಆಫ್ ಇಂಡಿ

ಸಿಯಲ್ಲಿ ಮಾಜಿ ಮಹಾರಾಜನೊ
ಕಾನೂನು ಬಾಹಿರ ಕೃತ್ಯಗಳಿಗೆ,
ಕ್ಕೆ ಸಡ್ಡು ಹೊಡೆದು ನಿಂತಿರುವ
ಭೂ ಹೋರಾಟದ ಬಗ್ಗೆ ಇಲ್ಲಿ
ರೆ ಅಖಿಲ ಭಾರತ ಕೃಷಿ ಕೂಲಿ
ಸಂಘದ ಜಂಟಿ ಕಾರ್ಯದರ್ಶಿ
ಸುನಿಲ್ ಚೋಪ್ರಾ.

ನೌಕರರು 3300 ರೂ. ಕೊಡುಗೆ
ಉತ್ತರ ಪ್ರದೇಶದಲ್ಲಿ ಭೂ ಹೋರಾಟ
ಬೆಂಬಲಿಸಬೇಕೆಂದು ಕರೆ ನೀಡಿದರು.
ಲ್ಲಿ ಸಂತಸ ತರುವ ವಿಷಯ ನಿಜ.
ಹೋರಾಟಗಾರರಲ್ಲಿ ನಿಜವಾದ ವಿಶ್ವಾಸ
ಸಿದ್ದು ಜುಲೈ 25 ರಂದು ಪೋಲೀಸ್
ವನ್ನು ಸಂಗಾತಿಗಳು ಎದುರಿಸಿದ ರೀತಿ
ದರಲ್ಲಿ ಸಂಶಯವಿಲ್ಲ. ಅಂದು
(ಎಂ) ರಾಜ್ಯ ಕಾರ್ಯದರ್ಶಿ ರಾಮ್
ರ್ ಯಾದವ್, ಎಐಎಡಬ್ಲ್ಯುಯುನ
ಕಾರ್ಯದರ್ಶಿ ವಿಜಯ ಬಹಾದುರ್
ಎಐಕೆಎಸ್ ಜಿಲ್ಲಾ ಕಾರ್ಯದರ್ಶಿ
ದಹೀಲ ಶಾಸ್ತ್ರಿ ಮತ್ತಿತರರು ಬಂಧನ
ಾದರು. ಕೆಲವರನ್ನು ಪೋಲೀಸರು
ವಾರ ಜೈಲಿನಲ್ಲಿಟ್ಟರು.
ಂದು ನಡೆದ ಸಾಮೂಹಿಕ ಸಭೆಯನ್ನು
ಲು ಪೋಲೀಸರಿಗಾಗದಿದ್ದುದು ಜನಗ
ಮ್ಮ ಗುರಿ ನ್ಯಾಯಯುತವಾದದ್ದು,
ಹೋರಾಟಕ್ಕೆ ಅರ್ಹವಾದದ್ದು ಎಂದು
ಯನ್ನು ಮೂಡಿಸಿತು. ಈ ಅವಧಿ
ಐ.ಪಿ.ಎಫ್. ಕೂಡಾ ತನ್ನದೇ
ಾಟ ರಂಗವನ್ನು ತೆರೆಯಲು ಪ್ರಯತ್ನಿ
ಆದರೆ ಅದಕ್ಕೆ ಕೇವಲ 250 ಮಂದಿ
(ಅದರಲ್ಲೂ ಬಹುಪಾಲು ಹೊರಗಿ
ಂದವರು) ಮಾತ್ರ ಸೇರಿಸಲು ಸಾಧ್ಯ
ತು. ತಮ್ಮ ಹೋರಾಟದ ಸಮಯ
ದೊಂದು ವಿಚ್ಛಿದ್ರಕಾರಿ ಪ್ರಯತ್ನ ಎಂದು
ಜನ ಆಕರ್ಷಿತರಾಗಲಿಲ್ಲ. ಸಿಪಿಐ(ಎಂ)
ನಲ್ಲಿ ಬೆಳೆ ಬಿತ್ತುವ ಹಾಗೂ ಸತ್ಯಾಗ್ರಹ
ಯಲ್ಲಿ 1500 ಜನ ಭಾಗವಹಿಸಿದಾಗ
ಸ್ಪಷ್ಟವಾಯಿತು.

ಜನಸಮೂಹಗಳನ್ನೊಳಗೊಂಡ ಹೋರಾಟ

ತಂಡ ತಂಡವಾಗಿ ಈ ಕೆಲಸವನ್ನು ಮುಗಿಸಿದ ಮೇಲೆ ಇಡೀ ಜನಸಂದಣಿ ಆ ಪ್ರದೇಶದಲ್ಲಿ ಎದ್ದು ಕಾಣುವ ಬೆಟ್ಟದ ಮೇಲೆ ಹೋಗಿ ಒಂದು ಸಭೆ ನಡೆಯಿತು. ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಹೀರಾಲಾಲ್ ಯಾದವ್, ಸಿಪಿಐ(ಎಂ) ಸ್ಥಳೀಯ ಕಾರ್ಯದರ್ಶಿ ಬಚ್ಚನ್ ಸಿಂಗ್, ಅಖಿಲ ಭಾರತ ಕೃಷಿ ಕೂಲಿಕಾರರ ಕಾರ್ಯದರ್ಶಿ ಪರಮಾನಂದ, ಡಿ.ವೈ.ಎಫ್.ಐ. ಜಿಲ್ಲಾ ಕಾರ್ಯದರ್ಶಿ ಪ್ರಭು ನಾರಾಯಣ್ ಸಭೆಯನ್ನುದ್ದೇಶಿಸಿ ಮಾತನಾಡಿದರು. ಈ ಭೂಹೋರಾಟ ಸಮಾಜವನ್ನು ಬದಲಿಸುವ ಹಾಗೂ ನಮ್ಮನ್ನು ಬದಲಿಸಿಕೊಳ್ಳುವ ಹೋರಾಟದ ಅಭಿನ್ನ ಅಂಗ ಎಂಬ ಅಂಶ ಮೇಲೆ ಅಲ್ಲಿ ಹೆಚ್ಚು ಒತ್ತು ನೀಡಲಾಯಿತು. ಎಲ್ಲಾ ರೀತಿಯ ಜಾತೀಯತೆಯಿಂದ ಮುಕ್ತವಾಗಿರಬೇಕು. ಜಾತೀಯತೆಗೆ ಸಮರಧೀರ ವಿರೋಧ ವ್ಯಕ್ತಪಡಿಸಬೇಕು, ಪ್ರಸ್ತುತ ಹೋರಾಟವನ್ನು ಜಯದತ್ತ ಒಯ್ಯಬೇಕು ಎಂದಾಗ ಭಾರೀ ಬೆಂಬಲ ವ್ಯಕ್ತಗೊಂಡಿತು. ಭೂ ಹೋರಾಟ ಪ್ರತಿಯೊಂದು ತಂತ್ರದಲ್ಲೂ ಜನಸಮೂಹವನ್ನು ತಮ್ಮೊಂದಿಗೆ ಒಯ್ಯಬೇಕಾದ ಅಗತ್ಯವನ್ನು ಇಲ್ಲಿಯ ಸ್ಥಳೀಯ ಮುಖಂಡತ್ವ ಅರಿತಿದೆ ಹಾಗೂ ವ್ಯವಸ್ಥಿತವಾಗಿ ಅದನ್ನು ಜ್ಯಾರಿಗೂ ತರುತ್ತಿದೆ.

ಸಭೆಯ ನಂತರ ಒಬ್ಬ ಪೋಲೀಸ್ ಅಧಿಕಾರಿ ಬಂದ; ನಮ್ಮನ್ನೆಲ್ಲೋಬಂಧಿಸಿ ಬಿಡುಗಡೆ ಮಾಡಲಾಗಿದೆ ಎಂದು ಘೋಷಿಸಿದ. ನೆರೆದಿದ್ದ ಜನ ಚಪ್ಪಾಳೆತಟ್ಟಿದರು. ಕ್ರಾಂತಿಕಾರಿ ಕವಿ ರಾಮ್ ಪ್ರಸಾದ್ ಬಸ್ಮಿಲ್‌ರ ಕವನದ "ದಮನಕೋರರ ಬಾಹುಗಳಲ್ಲಿ ಎಷ್ಟು ಬಲವಿದೆಯೆಂದು ನಾವು ಕಂಡಿದ್ದೇವಯ್ಯೋ' ಎಂಬರ್ಥದ ಸಾಲುಗಳ ನಿಜವಾದ ಅರ್ಥವನ್ನು ಅವರು ಅನುಭವದಿಂದ ಅರಿತಿದ್ದರು.

ಆದರೆ ನಮಗೆ ಗೊತ್ತು ಒಬ್ಬ ದೊಡ್ಡ ಭೂಮಾಲಕನ ವಿರುದ್ಧ ಹೋರಾಟ ಹಾಲು ಕುಡಿದಂತೆ ಅಲ್ಲ ಎಂದು. ಅದಕ್ಕೆ ಸಂಘಟನೆ ಬೇಕು ಅದಕ್ಕನುಗುಣವಾಗಿ ಉಚ್ಛ ಮಟ್ಟದ ರಾಜಕೀಯ ಪ್ರಜ್ಞೆ ಬೇಕು, ಜತೆಗೆ ಸಂಘಟಿತ ಜನಸಮೂಹಗಳು ಅದರಲ್ಲಿ ಭಾಗವಹಿಸಬೇಕು. ಆದ್ದರಿಂದಲೇ ಎ.ಐ.ಎ.ಡಬ್ಲ್ಯು.ಯು., ಎಐಕೆಎಸ್, ಎಐಡಿಡಬ್ಲ್ಯುಎ ಹಾಗೂ ಡಿವೈ.ಎಫ್.ಐ. ಸ್ಥಳೀಯ ಸಮಿತಿಗಳು ಹೋರಾಟದ ಕಾರ್ಯಕರ್ತರ ನಡುವೆ ಸಾಮೂಹಿಕ ಸದಸ್ಯರ ಕೆಲಸದಲ್ಲಿ ತೊಡಗಿದ್ದಾರೆ. ಈ ಕಾರ್ಯಕರ್ತರು ಭೂ ಮಾಲಕರು ಭಯೋತ್ಪಾದನೆ ಎದುರಿಸಲು ಗ್ರಾಮ ಮಟ್ಟಗಳಲ್ಲೂ ಸಂಘಟಿತರಾಗುತ್ತಿದ್ದಾರೆ. ಎಲ್ಲೆಲ್ಲಿ ಜನ ಭೂಮಾಲಕರನ್ನು ಕಾನೂನಿನ ನೂಗದಡಿ ತರಲು ದೃಢ ನಿರ್ಧಾರ ಮಾಡುತ್ತಾರೋ ಅಲ್ಲಿ ಅವರು ಯಶಸ್ಸು ಪಡೆಯುವುದು ಸಾಧ್ಯ ಎಂದು ವಾರಣಾಸಿ ಹೋರಾಟ ನಮಗೆ ತೋರಿಸಿದೆ. ಆದರೆ ಯಶಸ್ಸು ಎಷ್ಟರ ಮಟ್ಟಿಗೆ ಸಿಗಬಹುದು ಎಂಬುದನ್ನು ಸ್ಥಳೀಯ ಮುಖಂಡತ್ವದ ಪ್ರೌಢತೆಯನ್ನು ಅವಲಂಬಿಸಿರುತ್ತದೆ.

ಬಹುತೇಕ ಜನರಿಗೆ ಬಡತನದ ನೀತಿ

ಉದಾರೀಕರಣದ ಆರ್ಥಿಕ ನೀತಿ ಬಂದ ಮೇಲೆ ದೇಶದ ಜನರ ಆರ್ಥಿಕ ಸ್ಥಿತಿ ಸುಧಾರಿಸುತ್ತದೆ ಎಂಬುದೇ ಉದಾರೀಕರಣವಾದಿಗಳ ದಿನ ನಿತ್ಯದ ಹೇಳಿಕೆ. ಆದರೆ ಕಳೆದ ನಾಲ್ಕು ವರ್ಷಗಳಲ್ಲಿ ಆಗಿರುವುದೇನು?

ಭಾರತ ಕೃಷಿ ಪ್ರಧಾನ ದೇಶ. ದೇಶದ ಶೇ 60 ಕ್ಕೂ ಹೆಚ್ಚು ಜನ ಕೃಷಿಯ ಮೇಲೇ ಅವಲಂಬಿತರು. ಇದರಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರೇ ಹೆಚ್ಚಿನ ಸಂಖ್ಯೆ. ಯಾವುದೇ ನೀತಿ ಹೆಚ್ಚು ಜನರಿಗೆ ಲಾಭ ನೀಡಬೇಕಾದರೆ ಅದು ಈ ಜನರಿಗೆ ಅನುಕೂಲ ಮಾಡಿಕೊಡುವಂತಹದ್ದಿರಬೇಕು. ಹಾಗಾದರೆ ಉದಾರೀಕರಣದ ಆರ್ಥಿಕ ನೀತಿ ಬಂದ ಮೇಲೆ ಈ ಜನರಿಗೆ ಲಾಭವಾಗಿದೆಯೇ? ಇಲ್ಲಿ ದೇಶದ ಕೃಷಿಯ ಅಭಿವೃದ್ಧಿ, ಕೃಷಿ ಕ್ಷೇತ್ರದಲ್ಲಿನ ಉತ್ಪಾದಕಯೆಯ ಹೆಚ್ಚಳದಂತಹ ತೀರ ಗಹನವಾದ ಪ್ರಶ್ನೆಗಳೂ ಇದರೊಂದಿಗೇ ತಳಕು ಹಾಕಿಕೊಂಡಿವೆಯಾದ್ದರಿಂದ ಇದು ಒಟ್ಟಾರೆ ದೇಶದ ಅಭಿವೃದ್ಧಿಯ ಪ್ರಶ್ನೆಗೆ ಸಂಬಂಧ ಪಟ್ಟಂತಹದ್ದು.

ಇತ್ತೀಚಿನ ಒಂದು ಅಧ್ಯಯನದ ಪ್ರಕಾರ ಉದಾರೀಕರಣದಿಂದ ರೈತರಿಗೆ ಯಾವುದೇ ತರಹದ ಲಾಭವಾಗಿಲ್ಲ. ನಗರ ಮತ್ತು ಗ್ರಾಮೀಣ ಪ್ರದೇಶಗಳ ಜನರ ನಡುವಿನ ಆದಾಯ ವ್ಯತ್ಯಾಸ ಹೆಚ್ಚಿದೆ. ಉದಾರೀಕರಣದ ಅಂಗವಾಗಿ ಸರ್ಕಾರ ಕೃಷಿ ಉತ್ಪನ್ನಗಲಿಗೆ ಬೆಂಬಲ ಬೆಲೆಯನ್ನು ಹೆಚ್ಚಿಸಿದೆ. ಆದರೆ ಈ ಹೆಚ್ಚಳ ಉತ್ಪಾದನೆಯ ಲಾಗುವಾಡು9ಳ ಬೆಲೆ ಹೆಚ್ಚಳಕ್ಕೆ ಸಮನಾಗಿಲ್ಲ. ಆದ್ದರಿಂದ ಕೃಷಿಯ ಲಾಭದಾಯಕತೆ ಕಡಿಮೇಯಾಗಿದೆ. ಹೀಗಾದಾಗ ಅತ್ಯಂತ ದೊಡ್ಡ ದುಷ್ಪರಿಣಾಮವೆಂದರೆ ರೈತರಿಗೆ ಆಯಾ ಬೆಳೆ ಬೆಳಯುವಲ್ಲಿ ನಿರಾಸಕ್ತಿ ಉಂಟಾಗುವುದು ಮತ್ತು ಅನಿವಾರ್ಯವಾಗಿ ಅವರು ಬೇರೆ ಉದ್ಯೋಗಗಳನ್ನು ಅರಸಿಕೊಂಡು ಹೋಗುವದು.


ಇದರಿಂದ ಕೃಷಿಯಲ್ಲಿನ ಉತ್ಪಾದಕತೆ ಮತ್ತು ಒಟ್ಟು ಉತ್ಪಾದನೆ ಈ ಎರಡೂ ಕಡಿಮೆಯಾಗಿ ಬಿಡುತ್ತದೆ. ಒಂದೇ ವರ್ಷದಲ್ಲಿ ಈ ಪರಿಣಾಮ ಕಾಣದೇ ಹೋದರೂ ಕ್ರಮೇಣ ಬೆಳೆಯತ್ತ ಹೋಗುವ ಈ ದುಷ್ಪರಿಣಾಮ ದೇಶದ ಆರ್ಥಿಕವನ್ನೇ ಅಲ್ಲೋಲಕಲ್ಲೋಲಗೊಳಿಸುವುದು. ಇಲ್ಲೂ ಅತ್ಯಂತ ಹೆಚ್ಚಿನ ನೋವನ್ನೂ ಅನುಭವಿಸುವವರು ಕೃಷಿ ಕೂಲಿಕಾರರು, ಬಡರೈತರು ಸಣ್ಣ ಮತ್ತು ಅತಿ ಸಣ್ಣ ರೈತರು.

ಉದಾರೀಕರಣ ದೇಶದ ಬಹತೇಕ ಜನರಿಗೆ ಉದಾರವಾಗಿ ಬಡತನ ನೀಡುತ್ತದೆ ಎನ್ನೋಣವೆ?

ದೇಶ ತೈಲಮಾರುಕಟ್ಟೆ ಅನಿಯಂತ್ರೀಕರಣ

ಇದು ಕೇಂದ್ರ ಅರ್ಥ ಸಚಿವ ಡಾ.ಮನಮೋಹನ ಸಿಂಗರ ಇತ್ತೀಚಿನ ಕೊಡುಗೆ. ದೇಶೀ ತೈಲ ಮಾರುಕಟ್ಟೆಯನ್ನು ಮುಂದಿನ ಐದಾರು ತಿಂಘಳುಗಳಲ್ಲಿ ಅನಿಯಂತ್ರೀಕರಣ ಮಾಡುವುದಿಲ್ಲ ಎನ್ನುತ್ತ ನಂತರದ ದಿನಗಳಲ್ಲಿ ಹಂತಹಂತವಾಗಿ ಈ ವಲಯದ ಅನಿಯಂತ್ರೀಕರಣ ಮಾಡುತ್ತೇವೆ ಎಂದಿದ್ದಾರೆ

ಆಧುನಿಕ ಜಗತ್ತಿನಲ್ಲಿ ಬಹುಮುಖ್ಯ ಶಕ್ತಿ ಮೂಲವಾದ ತೈಲ ಪ್ರಾಮುಖ್ಯತೆ ಪಡೆದಿದೆ. ತೈಲವಿಲ್ಲದೇ ಜೀವನವೇ ನಡೆಯದು ಎಂಬಷ್ಟು ಮುಖ್ಯ ಅದು. ಈ ಕಾರಣದಿಂದಲೇ ಮುಂದುವರಿದ ದೇಶಗಳು ಈ ತೈಲ ವ್ಯವಹಾರದಲ್ಲಿ ದೊಡ್ಡ ಪ್ರಮಾಣದ ಆಸಕ್ತಿ ಹೊಂದಿದ್ದು ಜಗತ್ತಿನ ತೈಲ ವ್ಯವಹಾಕವನ್ನೇ ನಿಯಂತ್ರಿಸುತ್ತವೆ. ಈ ಕಾರಣದಿಂದಲೇ ಸಾರಮ್ರಾಜ್ಯಶಾಹಿ ದೇಶಗಲ ಹಿಡಿತದಿಂದ ತಪ್ಪಿಸಿಕೊಳ್ಳಲು ದೇಶೀ ತೈಲ ಸಾಮರ್ಥ್ಯವನ್ನು ಪೂರ್ಣವಾಗಿ ಬಳಸಿಕೊಂಡು ಸ್ವಾವಲಂಬನೆ ಸಾಧಿಸುವುದು ಬಹಳ ಮುಖ್ಯವಾದುದ್ದು.



ಉದಾರೀಕರಣ ಇದಕ್ಕೆ ತದ್ವಿರುದ್ಧವಾದುದನ್ನೇ ಮಾಡುತ್ತ ಬಂದಿದೆ. ದೇಶದ ಸಾರ್ವಜನಿಕ ವಲಯದ ತೈಲ ಕಂಪನಿಗಳನ್ನು ನಿರ್ಲಕ್ಷಿಸಿ ವಿದೇಶೀ ಕಂಪನಿಗಳಿಗೆ ಆದ್ಯತೆ ನೀಡಲಾಗುತ್ತಿದೆ. ಮುಖ್ಯವಾಗಿ ತೈಲ ಶೋದನೆಯ ಕ್ಷೇತ್ರದಲ್ಲಿ ಈ ದೇಶೀ ಕಂಪನಿಗಳು ಅಪಾರ ಸಾಮರ್ಥ್ಯ ತೋರಿರುನಾಲಲೂ ವಿದೇಶೀ ಬಹುರಾಷ್ಟ್ರೀಯ ಕಂಪನಿಗಳಿಗೇ ಈ ಕೆಲಸವನ್ನು ಒಪ್ಪಿಸಲಾಗಿದೆ.

ಈಗ ಈ ವಲಯವನ್ನೇ ಅನಿಯಂತ್ರೀಕರಿಸುವ ಕ್ರಮ ಡಾಲರಿನ್ ಎದುರು ಪೂರ್ಣಪರಿವರ್ತನೆಶೀಲವಾಗಿರುವ ರೂಪಾಯಿ ಆದುರುತ್ತೀರುವ ಈ ಸಂದರ್ಭದಲ್ಲಿ ಇಂತಹ ಅನಿಯಂತ್ರೀಕರಣ ದೇಶದ ಸ್ವಾವಲಂಬನೆಯನ್ನೇ ತೊಡೆದು ಹಾಕಬಹುದು. ದೇಶದ ಆರ್ಥಿಕವನ್ನು ಬಲಿಷ್ಟಗೊಳಿಸುವುದು ಒತ್ತಟ್ಟಿಗಿರಲ್ ಬದಲಿಗೆ ದೇಶದ ಆರ್ಥಿಕ ಬಹಳ ದುರ್ಬಲವಾಗುತ್ತದೆ ಉದಾರೀಕರಣ ಇದನ್ನೇ ಮಾಡುತ ಬಂದಿರುವುದು ಮುಂದೆ ಮಾಡುವುದೂ ಇದನ್ನೇ.

ಲಂಡನ್ನಿನಲ್ಲಿ ಸ್ವಯಂ ಹರಾಜು

ಭಾರತ ನಾಲ್ಕು ಸಾರ್ವಜನಿಕ ವಲಯದ ಕಂಪನಿಗಳು ಈ ಸ್ವಯಂ ರಜಾಜಿ ಮಾಡಿಕೊಳ್ಳುತ್ತಿರುವವರು. ಓಎನ್‌ಜಿಸಿ(ತೈಲ ಮತ್ತು ನೈಸರ್ಗಿಕ ಅನಿಲ ನಿಗಮ) ಎಂಟಿಎನ್ ಎಲ್(ಮಹಾನಗರ ಟೆಲಿಫೋನ್ ನಿಗಮ) ಸೇಲ್(ಭಾರತೀಯ ಉಕ್ಕು ಪ್ರಾದಿಕಾರ) ಸಿಸಿಐಎಲ್(ಕಂಟೇವರ್ ಕಾರ್ಪೊರೇಷನ್ ಆಫ್ ಇಂಡಿಯಾ) ವೇ ಆ ನಾಲ್ಕು ಕಂಪನಿಗಳು ಈ ಕಂಪನಿಗಳ ಮಾರಾಟ ಅಧಿಕಾರಿಗಳು ಬ್ರಿಟನ್ ಹಾಂಗ್ ಕಾಂಗಾ, ಮತ್ತು ಸಿಂಗಾಪೂರಗಳಿಗೆ ಹೋಗಿ ಮಾರಾಟ ಅಭಿವೃದ್ಧಿ ಮಾಡುತ್ತಿದ್ದಾರೆ.

ಅವರ ಉತ್ಪನ್ನಗಳನ್ನಲ್ಲ. ತಮ್ಮ ಕಂಪನಿಯ ಶೇರುಗಳನ್ನು ಕೊಂಡುಕೊಳ್ಳಿ ಎಂದು. ವಿದೇಶೀ ಸಾಂಸ್ಥಿಕ ಹೂಡಿಕೆದಾರರಿಗೆ ನೀಡುತ್ತಿರುವ ಈ ಆಹ್ವಾನ ತಮ್ಮ ಕಂಪನಿಯ ಮಾಲಿಕತ್ವವನ್ನೇ ಕೊಂಡುಕೊಳ್ಳಿ ಎಂದು. ಭಾರತ ದೇಶದ ಜನರ ಸ್ವಾಮ್ಯದ ಈ ಸಂಸ್ಥೆಗಲು ಹಿಂದೆಲ್ಲ ಅತ್ಯುತ್ತಮ ಸೇವೆಯನ್ನು ದೇಶಕ್ಕೆ ನೀಡಿವೆ. ಆದರೆ ಈಗ ಸರ್ಕಾರ ವಿದೇಶಿಯರಿಗೆ ಈ ಕಂಪನಿಗಳನ್ನು ಮಾರುವ ಹುನ್ನಾರದಲ್ಲಿ ತೊಡಗಿದೆ.

ಓಎನ್ ಜಿಸಿ ಯ 365 ಲಕ್ಷ ಶೇರುಗಳು, ಎಂಟಿಎನ್ ಎಲ್ ನ 300 ಲಕ್ಷ ಶೇರುಗಳು, ಸೇಲ್ ನ 20 ಕೋಟಿ ಶೇರುಗಳು ಮತ್ತು ಸಿಸಿಐಎಲ್ ನ 65 ಲಕ್ಷ ಶೇರುಗಳ ಮಾರಾಟಕ್ಕಿವೆ.

ಬಹುರಾಷ್ಟ್ರೀಯ ಕಂಪನಿಗಳಿಗೆ ಜನತಾದಳ ಸರ್ಕಾರದ ಕೊಡುಗೆ

ಕರ್ನಾಟಕದ ದೇವೇಗೌಡರ ನೇತೃತ್ವದ ಜನಾತದಳ ಸರ್ಕಾರ 'ಕರಡು ಕೃಷಿ ನೀತಿಯನ್ನು ತಯಾರಿಸಿ ಅನುಮೊದಿಸಿದೆ. ರಾಜ್ಯದ ಕೃಷಿಯನ್ನು ವಾಣಿಜ್ಯಕರಣ ಮಾಡಿ ತೋಟಗಾರಿಕೆ, ಮೀನುಗಾರಿಕೆ. ಪಶುಸಂಗೋಪನೆಗಳಲ್ಲೆಲ್ಲ ಖಾಸಗಿ ಬಂಡವಾಳ ಅಪಾರ ಪ್ರಮಾಣದಲಲ್ ಹರಿದು ಬರುವಂತೆ ಮಾಡಲು ಈ ಕೃಷಿ ನೀತಿ ಪ್ರಯತ್ನಿಸುತ್ತದೆ ಎಂಬುದು ರಾಜ್ಯ ಸರ್ಕಾರದ ವಾದ.

ಈ ಮಾತುಗಳನ್ನೂ ಕೇಳಿದರೇ ಇದು ದೇಶದ ಬಂಡವಾಳಿಗರಿಗೆ ಮತ್ತು ಬಹುರಾಷ್ಟ್ರೀಯ ಕಂಪನಿಗಳಿಗೆ ಅನುಕೂಲ ಮಾಡಿಕೊಡುವ ಕ್ರಮ ಎಂಬುದು ಸ್ಪಷ್ಟ. ರಾಷ್ಟ್ರೀಯ ಸಹಕಾರ ಅಭಿವೃದ್ದಿ ಮಂಡಳಿಯ ಅನುಮೋದನೆ ಪಡೆದು ಶೈತ್ರೀಕರಣ, ಘಟಕಗಳನ್ನು ಸ್ಥಾಪಿಲಲು 100 ಕೋಟಿ ರೂಪಾಯಿಗಳ ಯೋಜನೆ ಹಮ್ಮಿಕೊಳ್ಳಲಾಗಿದೆಯಂತೆ ಇದರ ಜೊತಗೆ ಕೃಷಿ ಉತ್ಪನ್ನಗಳ ರಫ್ತು ಹೆಚ್ಚಿಸುವ ಹಲವು ಯೋಜನೇಗಳೂ ಈ ನೀತಿಯಲ್ಲಿ ಆಡಕವಾಗಿದೆಯಂತೆ.

ರಾಜ್ಯದಲ್ಲಿ ಕೃಷಿಯ ಬೆಳವಣಿಗೆಯ 80 ರ ದಶಕದಲ್ಲಿ ಶೇ 4.4 ರಷ್ಟಿದ್ದದ್ದು ನಂತರದಲ್ಲಿ ತೀವ್ರವಾಗಿ ಕುಸಿದಿದೆ. ಈ ಸ್ಥಿತಿಯನ್ನು ಬದಲಿಸಬೇಕಾದ ಅವಶ್ಯಕತೆ ಇಂದು ಇದೆ. ಇದು ಈ ಕೃಷಿ ನೀತಿಯಿಂದಂತೂ ಸಾಧ್ಯವಿಲ್ಲ. ರಾಜ್ಯದ ರೈತರು ಸಣ್ಣ ಮತ್ತು ಅತಿ ಸಣ್ಣ ರೈತರು ಕೃಷಿಯಲ್ಲಿ ಲಾಭದಾಯಕವಾಗಿ ತೋಡಗಲು ಅನುಕೂಲಕರವಾದ ವಾತಾವರಣ ಸೃಷ್ಟಿಯಾಗಬೇಕು. ಆರಾರಧಾನ್ಯಗಳನ್ನು ಹೆಚ್ಚೆಚ್ಚು ಪ್ರಮಾಣದಲ್ಲಿ, ಬೆಳೆಯುವಂತಾಗಬೇಕು. ಆಹಾರ ದಾನದಲ್ಲಿ ಮಾತ್ರ ಸ್ವಾವವಂಭಿಗಳಾದ ಮೇಲೆ ರಫ್ತಿನ ಮೇಲೆ ಗಮನ ಕೇಂದ್ರಿಕರಿಸಬಹುದು. ಬದಲಿಗೆ ಈ ನೀತಿ ಬಂಡವಾಳಿಗರಿಗೆ ಕೃಷಿ ಭೂಮಿ ಕಬಳಿಕೆಯಲ್ಲಿ ಇರುವ ಅಡೆ ತಡೆಗಳನ್ನು ನಿವಾರಿಸಿ ಅನುಕೂಲ ಮಾಡಿಕೊಡುವ ಹುನ್ನಾರದಲ್ಲಿರುವಂತಿದೆ.



ವಿಶ್ವ

ಗುಜರಾತ್:
ಬಿಕ್ಕಟ್ಟಿನ ಅಂಚಿನಲ್ಲಿ ಬಿಜೆಪಿ ಸರಕಾರ

ಗುಜರಾತಿನ ಭಾರತೀಯ ಜನತಾಪಕ್ಷದ(ಬಿಜೆಪಿ) ಸರಕಾರ ಬಿಕ್ಕಟ್ಟಿಗೆ ಸಿಕ್ಕಿದೆ. ಪಕ್ಷದೊಳಗಿನ ಭಿನ್ನಮತೀಯ ಚಟುವಟಿಕೆ ಪರಾಕಾಷ್ಠೆಗೆ ಏರಿದೆ. ಬಿಜೆಪಿಯ ಸಂಸತ್ ಸದಸ್ಯ ಶಂಕರ್ ಸಿಂಗ್ ವಘೇಲಾ ಮುಖ್ಯಮಂತ್ರಿ ಕೇಶುಭಾಯಿ ಪಟೇಲ್‌ಗೆ ಸೆಡ್ಡು ಹೊಡೆದು ನಿಂತಿದ್ದಾರೆ.

ಗುಜರಾತ್ ವಿಧಾನಸಭೆಯ ಬಲ 182. ಈ ಪೈಕಿ ಆಳುವ ಪಕ್ಷದವರು 121. ಕಾಂಗ್ರೆಸ್‌ನವರು 45 ಹಾಗೂ 16 ಪಕ್ಷೇತರ ಸದಸ್ಯರಿದ್ದಾರೆ.

ಬಿಜೆಪಿಯ 121 ಶಾಸಕರ ಪೈಕಿ 54 ಸದಸ್ಯರ ಬೆಂಬಲ ತನಗಿದೆ ಎಂದು ಬಂಡಾಯದ ಬಾವುಟ ಹಾರಿಸಿರುವ ವಘೇಲಾ ಹೇಳಿದ್ದಾರೆ.

ಸುಮಾರು ಆರೇಳು ತಿಂಗಳ ಹಿಂದೆ ನಡೆದ ಚುನಾವಣೆಯಲ್ಲಿ ಬಿಜೆಪಿ ಮೂರನೇ ಎರಡು ಬಹುಮತ ಪಡೆದು ಅಧಿಕಾರಕ್ಕೆ ಬಂದಿತ್ತು.

ಸ್ವಜನಪಕ್ಷಪಾತವಿಲ್ಲದ ಹಾಗೂ ದಕ್ಷ ಸರಕಾರವನ್ನು ಕೊಡುವಲ್ಲಿ ದೇಶದಲ್ಲಿ ತನಗೆ ಪರ್ಯಾಯವೇ ಇಲ್ಲ ಎಂದು ಬಿಜೆಪಿ ಬಡಾಯಿಕೊಚ್ಚಿಕೊಳ್ಳುತ್ತಿದೆ. ರಾಷ್ಟ್ರೀಯ ಮಟ್ಟದಲ್ಲಿ ಕೂಡಾ ತಾನು ಇದೇ ರೀತಿಯ ಸರಕಾರವನ್ನು ಕೊಡುತ್ತೇನೆ ಎಂದು ಅದು ಹೇಳಿಕೊಳ್ಳುತ್ತಿದೆ.

ಆದರೆ ಇದು ಕೇವಲ ಬೊಗಳೆ ಎನ್ನುವುದು ಸ್ಪಷ್ಟ. ಹಿಂದೆ ಇದ್ದ ಹಾಗೂ ಈಗ ಬಿಜೆಪಿ ಆಡಳಿತದಲ್ಲಿರುವ ರಾಜ್ಯಗಳಲ್ಲಿ ಅದು ಹೇಳಿಕೊಳ್ಳುವುದಕ್ಕೆ ತದ್ವಿರುದ್ಧವಾದ ಆಡಳಿತವೇ ಜನರಿಗೆ ಸಿಗುತ್ತಿದೆ.

ಕೇಶುಭಾಯಿ ಪಟೇಲ್ ಸರಕಾರ ಅದಕ್ಷವಾಗಿದೆ ಹಾಗೂ ಸ್ವಜನಪಕ್ಷಪಾತದಿಂದ ಕೂಡಿದೆ ಎಂದು ಪಕ್ಷದ ನಾಯಕತ್ವದ ವಿರುದ್ಧ ಬಂಡಾಯದ ಬಾವುಟ ಹಾರಿಸಿರುವ ವಘೇಲಾ ಹೇಳಿದ್ದಾರೆ.

ಭಿನ್ನಮತೀಯ ಚಟುವಟಿಕೆ ನಡೆಸಿದ್ದ ವಘೇಲಾರನ್ನು ಪಕ್ಷ ವಿರೋಧಿ ಚಟುವಟಿಕೆಗಳ ಆರೋಪದ ಮೇಲೆ ಪಕ್ಷದಿಂದ ಆರು ವರ್ಷಗಳ ಅವಧಿಗೆ ಉಚ್ಚಾಟಿಸಲಾಗಿದೆ.

ಸ್ವಜನಪಕ್ಷಪಾತ ಹಾಗೂ ಅದಕ್ಷತೆಯ ವಿರುದ್ಧ ತನ್ನ ಹೋರಾಟ ಎಂದು ವಘೇಲಾ ಹೇಳಿಕೊಂಡರೂ ಇವರದು ಅಧಿಕಾರ ಲಾಲಸೆಯ ಕ್ರಮ ಎಂದು ವಿಶ್ಲೇಷಿಸುವವರೂ ಇದ್ದಾರೆ. ಏನೇ ಇರಲಿ, ಬಿಜೆಪಿ ಸರಕಾರದಲ್ಲಿ ಅತೃಪ್ತಿ ಹೊಗೆಯಾಡುತ್ತಿರುವುದಂತೂ ನಿಜ.

ಗುಜರಾತಿನಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆಗಳು ನಡೆದಾಗಲೇ ಈ ಅತೃಪ್ತಿ ಸ್ಫೋಟಗೊಂಡಿತ್ತು. ಅದು ಈಗ ಗಂಭೀರ ಸ್ವರೂಪವನ್ನು ತಳೆದಿದೆ.

ಬಲಪರೀಕ್ಷೆಗೆ ಅಧಿವೇಶನ: ಆಳುವ ಪಕ್ಷದಲ್ಲಿ ತೀವ್ರ ಭಿನ್ನಮತೀಯ ಚಟುವಟಿಕೆಗಳು ನಡೆಯುತ್ತಿದ್ದ ಹಿನ್ನೆಲೆಯಲ್ಲಿ ಅಕ್ಟೋಬರ್ ಏಳರ ಒಳಗೆ ವಿಧಾನಸಭೆಯಲ್ಲಿ ಬಹುಮತವನ್ನು ಸಾಬೀತುಪಡಿಸುವಂತೆ ಗುಜರಾತ್ ರಾಜ್ಯಪಾಲರು ಮುಖ್ಯಮಂತ್ರಿ ಪಟೇಲ್‌ಗೆ ಸೂಚಿಸಿದ್ದಾರೆ.

ಅಕ್ಟೋಬರ್ ಏಳರಂದು ಅಧಿವೇಶನ ನಡೆಯಲಿದೆ. ಬಲಾಬಲ ಪರೀಕ್ಷೆಯಲ್ಲಿ ಗೆಲ್ಲಲು ಎರಡೂ ಬಣದವರು ಪ್ರಯತ್ನಗಳನ್ನು ಚುರುಕುಗೊಳಿಸಿದ್ದಾರೆ.

ಶಿಸ್ತುಬದ್ಧ ಪಕ್ಷ ಎಂಬ ಹಣೆಪಟ್ಟಿ ಹೊಂದಿರುವ ಬಿಜೆಪಿ ಕೂಡಾ ಯಾವುದೇ ಬಂಡವಾಳಶಾಹಿ ಭೂಮಾಲಕ ಪಕ್ಷಗಳಿಗಿಂತ ಭಿನ್ನ ಅಲ್ಲ ಎಂಬುದಕ್ಕೆ ಅಲ್ಲಿನ ವಿದ್ಯಮಾನಗಳು ಸಾಕ್ಷಿಯಾಗಿವೆ. ಪರಸ್ಪರರ ಬೆಂಬಲವನ್ನು ಹೆಚ್ಚಿಸಿಕೊಳ್ಳಲು ವಿರೋಧಿ ಬಣಗಳ ಶಾಸಕರನ್ನು ಅಪಹರಿಸುವುದು, ಹಿಂಸಾಚಾರಕ್ಕೆ ಇಳಿಯುವುದು ಇತ್ಯಾದಿ ಎಲ್ಲವೂ ಅಲ್ಲಿ ನಡೆದಿದೆ.

ತಮ್ಮನ್ನು ಆರಿಸಿಕಳಿಸಿದ ಜನರ ಹಿತಕ್ಕಿಂತ ತಮ್ಮ ಸ್ವಹಿತಾಸಕ್ತಿಯೇ ಮೇಲು ಎಂಬುದನ್ನು 'ಸಾಧಿಸಿ ತೋರಿಸಲು'. ಮೇಲಾಟ ನಡೆಸುವುದು ಶ್ರೀಮಂತರ ಪಕ್ಷಗಳಲ್ಲಿ ಕಂಡು ಬರುವ ಒಂದು ಸಹಜ ಗುಣ. ಅದು ಗುಜರಾತಿನಲ್ಲಿಯೂ ಬಹಿರಂಗವಾಗಿದೆ.

'ಐಕ್ಯರಂಗ'ದ ಈ ಸಂಚಿಕೆ ಓದುಗರ ಕೈ ಸೇರುವ ಹೊತ್ತಿಗೆ ಗುಜರಾತಿನ ವಿದ್ಯಮಾನದ ಸ್ಪಷ್ಟ ಚಿತ್ರಣ ಸಿಗಲಿದೆ. ಬಲಪರೀಕ್ಷೆಯಲ್ಲಿ ಯಾರು ಗೆಲ್ಲುತ್ತಾರೆ ಯಾರು ಸೋಲುತ್ತಾರೆ ಎನ್ನುವುದು ಗೊತ್ತಾಗುತ್ತದೆ. ಅಲ್ಲಿ ಬಿಜೆಪಿ ಪಕ್ಷವಂತೂ ಹೋಳಾಗಿದೆ. ಇನ್ನು ಅದರ ಸರಕಾರ ಏನಾಗುತ್ತದೆ ಅನ್ನುವುದನ್ನು ಕಾದು ನೋಡೋಣ.

ಕ್ಯೂಬಾಕ್ಕೆ ಬೆಂಬಲಿಸಿ ಯಶಸ್ವಿ ಸಮ್ಮೇಳನ

ಸಾಮ್ರಾಜ್ಯಶಾಹಿ ದೈತ್ಯವಾದ ಅಮೇರಿಕದಿಂದ ಕೇವಲ 90 ಮೈಲಿ ದೂರದಲ್ಲಿರುವ ಪುಟ್ಟ ರಾಷ್ಟ್ರ ಕ್ಯೂಬಾ ಅಮೇರಿಕದಿಂದ ಎದುರಿಸುತ್ತಿರುವ ಅಪಾರ ಕಿರುಕುಳದ ವಿರುದ್ಧ ಜಗತ್ತಿನೆಲ್ಲೆಡೆ ಪ್ರತಿರೋಧ ವ್ಯಕ್ತವಾಗುತ್ತಲೇ ಇದೆ. ಪ್ರಪಂಚದ ಮೂಲೆ ಮೂಲೆಗಳಿಂದ ನೈತಿಕ ಬೆಂಬಲ ಮಾತ್ರವಲ್ಲದೆ ಭೌತಿಕವಾಗಿಯೂ ಬೆಂಬಲ ಅಪಾರ ರೀತಿಯಲ್ಲಿ ಹರಿದು ಬರುತ್ತಿದೆ.

ಕಳೆದ ವರ್ಷ ನವೆಂಬರ್‌ನಲ್ಲಿ ಕ್ಯೂಬಾ ರಾಜಧಾನಿ ಹವಾನಾದಲ್ಲಿ ಕ್ಯೂಬಾಕ್ಕೆ ಸೌಹಾರ್ದತೆ ಸೂಚಿಸುವ ಜಾಗತಿಕ ಸಮ್ಮೇಳನ ನಡೆದಿತ್ತು. ಅದರ ಕರೆಯ ಮೇರೆಗೆ ಕ್ಯೂಬಾಕ್ಕೆ ಸೌಹಾರ್ದತೆ ಸಾರುವ ಏಷ್ಯಾ ಪೆಸಿಫಿಕ್ ವಲಯದ ಸಮ್ಮೇಳನ ಇದೇ ಸೆಪ್ಟೆಂಬರ್ 22ರಿಂದ 24ರವರೆಗೆ ನಡೆಯಿತು. ಕಲ್ಕತ್ತದಲ್ಲಿ ಈ ಸಮ್ಮೇಳನ ವ್ಯವಸ್ಥೆಯಾಗಿತ್ತು. ಸಾಮ್ರಾಜ್ಯಶಾಹಿ ವಿರೋಧಿ ಮನೋಭಾವ ಇಲ್ಲಿ ಮಾರ್ದನಿಸಿತು.

12 ದೇಶಗಳ 102 ಸಂಘ ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ವ್ಯಕ್ತಿಗಳು - ಹೀಗೆ ಒಟ್ಟು 169 ಜನರು ಇದರಲ್ಲಿ ಪಾಲ್ಗೊಂಡಿದ್ದರು.

ನವೆಂಬರ್ 27ರಂದು ಕ್ಯೂಬಾಕ್ಕೆ ದಿಗ್ಬಂಧನ ವಿಧಿಸಲಾಗಿರುವ ವಿರುದ್ಧದ ದಿನವನ್ನಾಗಿ ಆಚರಿಸುವಂತೆ ರಾಜಕೀಯ ಪಕ್ಷಗಳು, ಟ್ರೇಡ್ ಯೂನಿಯನ್‌ಗಳು ಮತ್ತು ಇತರ ಸಾಮಾಜಿಕ ಸಂಘ ಸಂಸ್ಥೆಗಳಿಗೆ ಈ ಯಶಸ್ವಿ ಸಮ್ಮೇಳನ ಕರೆ ನೀಡಿತು.

ಕ್ಯೂಬಾ ಘೋಷಣೆ

ನೇತಾಜಿ ಒಳಾಂಗಣ ಕ್ರೀಡಾಂಗಣದಲ್ಲಿ ನೆರೆದ ಸಾವಿರಾರು ಜನರನ್ನುದ್ದೇಶಿಸಿ ಜನತೆಯೊಂದಿಗೆ ಮೈತ್ರಿಯ ಕ್ಯೂಬಾ ಸಂಸ್ಥೆಯ ಅಧ್ಯಕ್ಷ ಹಾಗೂ ಕ್ಯೂಬಾ ನಿಯೋಗದ ಮುಖ್ಯಸ್ಥ ಸೆರ್ಗಿಯೊ ಕೊರಿಯರಿ ಹರ್ನಾಂಡೆಜ್ ಮಾತನಾಡಿದರು.

'ನಾವೆಂದಿಗೂ ಬಂಡವಾಳಶಾಹಿ ವ್ಯವಸ್ಥೆಗೆ ಮರಳಲಾರೆವು' ಎಂದು ಅವರು ಮಾಡಿದ ಘೋಷಣೆಯನ್ನು ಪ್ರತಿನಿಧಿಗಳು ಪ್ರಚಂಡ ಕರತಾಡನದೊಂದಿಗೆ ಸ್ವಾಗತಿಸಿದರು.

ಸಮ್ಮೇಳನದ ಸಮಾರೋಪ ಸಮಾರಂಭದ ಅಂಗವಾಗಿ ನಜರುಲ್ ಮಂಚ್‌ನಲ್ಲಿ ನಡೆದ ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಷನ್ ಸಿಂಗ್ ಸುರ್ಜಿತ್ ವಹಿಸಿದ್ದರು. ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಜ್ಯೋತಿ ಬಸು, ವಿದೇಶ ವ್ಯವಹಾರ ಖಾತೆಯ ಸಹಾಯಕ ಸಚಿವ ಆರ್.ಎಲ್.ಭಾಟಿಯಾ ಮೊದಲಾದವರು ಮಾತನಾಡಿದರು.

ಸಮಾಜವಾದಿ ಪಕ್ಷ ಎಡರಂಗಕ್ಕೆ

ರಾಷ್ಟ್ರ ರಾಜಕಾರಣದಲ್ಲಿ ಮಹತ್ವದ್ದಾಗುವ ವಿದ್ಯಮಾನವೊಂದು ಘಟಿಸಿದೆ. ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿ ಮುಲಾಯಂಸಿಂಗ್ ಯಾದವ್ ನೇತೃತ್ವದ ಸಮಾಜವಾದಿ ಪಕ್ಷ(ಎಸ್.ಪಿ.) ರಾಷ್ಟ್ರಮಟ್ಟದಲ್ಲಿ ಎಡರಂಗವನ್ನು ಸೇರಲಿದೆ.

ಹಿರಿಯ ಸಮಾಜವಾದಿ ನಾಯಕ ಮುಲಾಯಂಸಿಂಗ್ ಯಾದವ್ ಅಕ್ಟೋಬರ್ ನಾಲ್ಕರಂದು ಲಖನೌದಲ್ಲಿ ಈ ವಿಷಯವನ್ನು ಪ್ರಕಟಿಸಿದರು. ಸಮಾಜವಾದಿ ಪಕ್ಷ ಎಡರಂಗಕ್ಕೆ ಸೇರ್ಪಡೆಯಾದ ವಿಷಯವನ್ನು ಎಡರಂಗದ ಮುಂದಿನ ಸಭೆಯಲ್ಲಿ ಔಪಚಾರಿಕವಾಗಿ ಪ್ರಕಟಿಸಲಾಗುತ್ತದೆ.

ಸಿಪಿಐ(ಎಂ) ನಾಯಕ ಜ್ಯೋತಿ ಬಸು ಅವರನ್ನು ಮುಂದಿನ ಪ್ರಧಾನ ಮಂತ್ರಿ ಎಂದು ಬೆಂಬಲಿಸಬೇಕೆಂದು ಮುಲಾಯಂ ಸಿಂಗ್ ಯಾದವ್ ಅಭಿಪ್ರಾಯಪಟ್ಟಿದ್ದಾರೆ.

ಪ.ಬಂಗಾಳದಲ್ಲಿ

ಸಮಾಜವಾದಿ ಪಕ್ಷ ಪಶ್ಚಿಮ ಬಂಗಾಳದಲ್ಲಿ ಈಗಾಗಲೇ ಎಡರಂಗದ ಅಂಗಪಕ್ಷವಾಗಿದೆ. ಆದರೆ ರಾಷ್ಟ್ರಮಟ್ಟದಲ್ಲಿ ಎಡರಂಗವನ್ನು ಸೇರಲು ಅದು ಇನ್ನೂ ಯೋಚಿಸುತ್ತಿತ್ತು. ಮುಲಾಯಂ ಸಿಂಗ್‌ರ ಪಕ್ಷ ರಾಷ್ಟ್ರೀಯ ರಂಗವನ್ನು ಸೇರುವ ಸಾಧ್ಯತೆ ಇತ್ತು. ಆದರೆ ಈ ವಿಚಾರದಲ್ಲಿ ಅದರ ಪ್ರಮುಖ ಅಂಗಪಕ್ಷವಾದ ಜನತಾದಳದಲ್ಲಿ ತೀವ್ರ ಭಿನ್ನಾಭಿಪ್ರಾಯ ಇದ್ದುದ್ದರಿಂದ ಸೇರ್ಪಡೆಗೆ ಅಡ್ಡಿಯಾಗಿತ್ತು.

ಜಾತ್ಯಾತೀತ ನಿಲುವನ್ನು ಹೊಂದಿರುವ ಸಮಾಜವಾದಿ ಪಕ್ಷ ಎಡರಂಗವನ್ನು ಸೇರಿರುವುದರಿಂದ ಪರಸ್ಪರ ಬಲ ಹೆಚ್ಚಿದೆ. ದೇಶದ ರಾಜಕೀಯದಲ್ಲಿ ಯಾವತ್ತೂ ನಿರ್ಣಾಯಕ ಪಾತ್ರವನ್ನು ವಹಿಸುತ್ತಾ ಬಂದಿರುವ ಉತ್ತರಪ್ರದೇಶದಲ್ಲಿ ಈ ಮೈತ್ರಿ ಗಾಢವಾದ ಪರಿಣಾಮ ಬೀರಲಿದೆ.

ಉತ್ತರ ಪ್ರದೇಶದಲ್ಲಿ ಸಮಾಜವಾದಿ ಪಕ್ಷಕ್ಕೆ ವ್ಯಾಪಕ ಪ್ರಭಾವವಿದೆ. ಅಲ್ಲಿ ಎಡಪಕ್ಷಗಳು, ಅದರಲ್ಲೂ ಮುಖ್ಯವಾಗಿ ಸಿಪಿಐ(ಎಂ) ಮತ್ತು ಸಿಪಿಐ ಕೂಡಾ ತನ್ನ ಚಟುವಟಿಕೆಯನ್ನು ವಿಸ್ತರಿಸಲು ಇದರಿಂದ ನೆರವಾಗಲಿದೆ.

ಗಣಪನಿಗೆ ಹಾಲು......

ಪುಟ 1 ರಿಂದ

ತಾವಳದ ಮುಖಂಡರೂ ಮನವರಿಕೆ ಮಾಡಿಕೊಳ್ಳುವುದು ಅತ್ಯಗತ್ಯ. ನೀರಾವರಿ ಯೋಜನೆಗಳು ಪೂರ್ಣಗೊಳ್ಳುವವರೆಗೆ, ಸ್ವಲ್ಪವಾದರೂ ವಿದ್ಯುತ್ ಉತ್ಪಾದನೆಯಾಗುವ ತನಕ ಅಗ್ಗದ ಜನತಾ ಬಟ್ಟೆ, ಮಧ್ಯಾಹ್ನದ ಊಟ ಮೊದಲಾದ ಯೋಜನೆಗಳನ್ನು ತಡೆಹಿಡಿಯಬೇಕು. ಅವುಗಳಿಗಾಗಿ ಖರ್ಚು ಮಾಡುವ ಕೋಟ್ಯಾಂತರ ಹಣವನ್ನು ನೀರಾವರಿ, ವಿದ್ಯುತ್ತಿಗಾಗಿ ಖರ್ಚು ಮಾಡಿದ್ದಾದರೆ ಜನರು ಅಂಥ ಕ್ರಮವನ್ನು ನಿಜವಾಗಿಯೂ ಸ್ವಾಗತ ಮಾಡಿಯಾರು.

ಪಶ್ಚಿಮ ಬಂಗಾಲದ ಸಿಪಿಐ(ಎಂ) ನೇತೃತ್ವದ ಎಡರಂಗ ಸರ್ಕಾರದ ಆಡಳಿತೆಯ ಅನುಭವಗಳನ್ನು ದೇವೇಗೌಡರ ಸರ್ಕಾರ ಪಡೆಯಬೇಕು. ಆ ಅನುಭವಗಳ ಆಧಾರದಲ್ಲಿ ತಮ್ಮ ಆಡಳಿತೆಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಅವುಗಳಲ್ಲಿ ಪ್ರಾಮುಖ್ಯವಾದ ಕೆಲವನ್ನಾದರೂ ಸಾಧಿಸಿಕೊಳ್ಳುವುದು ಅತ್ಯಗತ್ಯ. ಉದಾಹರಣೆ 5-6 ವರ್ಷಗಳ ಹಿಂದೆ ತೀವ್ರ ವಿದ್ಯುತ್ ಕೊರತೆಯಿಂದ ಬಳಲುತ್ತಿದ್ದ ಪಶ್ಚಿಮ ಬಂಗಾಳವನ್ನು ಇಂದು ನೆರೆ ರಾಜ್ಯಗಳಿಗೂ ವಿದ್ಯುತ್ ಒದಗಿಸುವ ಸರ್ಕಾರವನ್ನಾಗಿ ಪರಿವರ್ತಿಸಿದ ಜ್ಯೋತಿಬಸು ಸರ್ಕಾರದ ಪರಾಕ್ರಮವನ್ನು ಜೆ.ಹೆಚ್. ಪಟೇಲರು ಅಭ್ಯಾಸ ಮಾಡಲಿ. ಹಾಗೆಯೇ ಕೈಗಾರಿಕಾ ಕೇಂದ್ರದಲ್ಲಿ ವಿದ್ಯುತ್ ಉತ್ಪಾದನೆಯಲ್ಲಿ ವಿದೇಶೀ ಗುತ್ತೆದಾರಿ ಕಂಪೆನಿಗಳೊಂದಿಗೆ ಮಾಡಿಕೊಂಡ ಒಪ್ಪಂದದ ಕರಾರುಗಳನ್ನು ಅರ್ಥೈಸಿಕೊಳ್ಳಲಿ.

ಮತಗಳಿಕೆಗಾಗಿ ಮಾತ್ರ ಅಗ್ಗದ ಯೋಜನೆಗಳಿಗೆ ಕೈಹಾಕದೆ, ರಾಜ್ಯದ ಆದರ ಮೂಲಕ ಸಾರ್ವಜನಿಕರ ಆವಶ್ಯಕ ಕಾರ್ಯಕ್ರಮಗಳಿಗೆ ಆದ್ಯತೆ ನೀಡುವುದು ಅಗತ್ಯ. ಪ.ಬಂಗಾಲ ಎಡರಂಗ ಸರ್ಕಾರದ ಅನುಭವಗಳನ್ನು ಮೈಗೂಡಿಸಿಕೊಳ್ಳದ, ಕಾಂಗ್ರೆಸ್ ಸರಕಾರಗಳ ದಾರಿಯಲ್ಲಿಯೇ ಆಡಳಿತ ನಡೆಸುವ ರೀತಿಯನ್ನು ಕೈಬಿಡಬೇಕೆಂದೂ,ಆ ಮೂಲಕ ಕರ್ನಾಟಕ ರಾಜ್ಯದಲ್ಲಿ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್, ಬಿಜೆಪಿಗಳನ್ನು ಸೋಲಿಸಲು ಅನುಕೂಲಕರವಾದ ವಾತಾವರಣವನ್ನು ಉಂಟು ಮಾಡಬೇಕೆಂದು ದೇವೇಗೌಡರನ್ನು ಒತ್ತಾಯಿಸಲು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಅಪೇಕ್ಷಿಸುತ್ತದೆ.

ಗಣಿ ದುರಂತದಲ್ಲಿ 65 ಕಾರ್ಮಿಕರ ದುರ್ಮರಣ

ಧನಬಾದ್ ವಲಯದ ಗಸ್ಸಿತಾಂಡ ಕಲ್ಲಿದ್ದಲು ಗಣಿಯಲ್ಲಿ ಕೆಲ ದಿನಗಳ ಹಿಂದೆ ಸಂಭವಿಸಿದ ಭೀಕರ ದುರಂತದಲ್ಲಿ ಸುಮಾರು 65 ಕಾರ್ಮಿಕರು ಬಲಿಯಾದರು.

ಭಾರತೀಯ ಕೋಕಿಂಗ್ ಕೋಲ್ ಸಂಸ್ಥೆಗೆ (ಬಿಸಿಸಿಎಲ್) ಸೇರಿದ ಈ ಗಣಿಯಲ್ಲಿ ಕಾರ್ಮಿಕರು ಕಾರ್ಯನಿರತರಾಗಿದ್ದಾಗ ಗಣಿ ಸಮೀಪದ ಕತ್ರಿ ನದಿಯ ನೀರು ನುಗ್ಗಿದ್ದರಿಂದ ಹಲವಾರು ಜನರ ಪ್ರಾಣಹರಣವಾಯಿತು.

ಕೆಲವು ಕಾರ್ಮಿಕರು ಪಾರಾದರೂ ಸುಮಾರು 65 ಜನ ಕಾರ್ಮಿಕರು ಗಣಿಯಲ್ಲಿ ಸಿಕ್ಕಿಹಾಕಿಕೊಂಡಿದ್ದು ಅವರು ಬದುಕುಳಿದಿರುವ ಆಸೆ ಕಿಂಚಿತ್ತು ಇಲ್ಲ. ಗಣಿಗೆ ನುಗ್ಗಿರುವ ನೀರನ್ನು ಹೊರತೆಗೆಯದೆ ರಕ್ಷಣೆ ಹಾಗೂ ಪರಿಹಾರ ಕಾರ್ಯಗಳನ್ನು ಆರಂಭಿಸುವುದು ಸಾಧ್ಯವಿಲ್ಲ. ಗಣಿಗೆ ನೀರು ನುಗ್ಗಿ ವಾರಗಟ್ಟಲೆ ಅವಧಿ ಕಳೆದಿರುವುದರಿಂದ ಹೆಚ್ಚೆಂದರೆ ಶವಗಳನ್ನು(ಅದೂ ಕೊಳೆತ ಸ್ಥಿತಿಯಲ್ಲಿ) ಹೊರತೆಗೆಯಬಹುದಷ್ಟೆ.

ಸುರಕ್ಷತಾ ಕ್ರಮಗಳಲ್ಲಿನ ಲೋಪದಿಂದಾಗಿ ಈ ದುರಂತ ಸಂಭವಿಸಿದೆಯೆಂದು ವರದಿಗಳು ತಿಳಿಸಿವೆ.

ಬಿಹಾರ ಆದಿವಾಸಿ ಮಹಿಳೆಯರ ಸಮಾವೇಶ

ಸೆಪ್ಟಂಬರ್ 19,1995. ಬಿಹಾರದ ಆದಿವಾಸಿ ಮಹಿಳೆಯರಿಗೆ ಒಂದು ಮಹತ್ವದ ದಿನ. ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ(AIDWA) ಬಿಹಾರದ ರಾಜ್ಯ ಸಮಿತಿ ಆದಿವಾಸಿ ಮಹಿಳೆಯರ ಪ್ರಥಮ ಸಮಾವೇಶವನ್ನು ಸಂಘಟಿಸಿತ್ತು. ಸಮಾವೇಶ ನಡೆದಿತ್ತು ಧನಬಾದ್ ನಲ್ಲಿ.

ಮುಖ್ಯವಾಗಿ ಧನಬಾದ್ ಜಿಲ್ಲೆ ಮತ್ತು ಅಕ್ಕ ಪಕ್ಕದ ಪಕೂರ್ ಮತ್ತು ಗಡವಾ ಜಿಲ್ಲೆಗಳಿಂದ ಕೂಡ ಬಂದಿದ್ದ ಸುಮಾರು 520 ಆದಿವಾಸಿ ಮಹಿಳೆಯರು ಸಮಾವೇಶದಲ್ಲಿ ಪಾಲ್ಗೊಂಡಿದ್ದರು.

ಸೆಪ್ಟೆಂಬರ್ 20 ರಂದು ಅಸಂಘಟಿತ ಕ್ಷೇತ್ರದ ಮಹಿಳೆಯರ ಸಮ್ಮೇಳನ ನಡೆಯಿತು. ಮುಖ್ಯವಾಗಿ ಕಲ್ಲಿದ್ದಲು ತುಂಬುವ ಪ್ರದೇಶಗಳ ಕಾರ್ಮಿಕರು ಮತ್ತು ಸಿಂಧ್ರಿ ರಸಗೊಬ್ಬರ ಕಾರ್ಖಾನೆಯ ನೌಕರರು ಇದರಲ್ಲಿ ಭಾಗವಹಿಸಿದ್ದರು.

ಆದಿವಾಸಿ ಮಹಿಳೆಯರನ್ನು ಕಾಡುವ ಅನೇಕಾನೇಕ ಸಮಸ್ಯೆಗಳನ್ನು ಬಗೆಹರಿಸಿ ಅವರು ಗೌರವಾನ್ವಿತವಾಗಿ ಬಾಳುವಂತೆ ಮಾಡುವ ಸನ್ನಿವೇಶವನ್ನು ನಿರ್ಮಿಸಬೇಕೆಂದು ಸಮಾವೇಶ ಒತ್ತಾಯಿಸಿತು. ಈ ನಿಟ್ಟಿನಲ್ಲಿ ಹೋರಾಟ ನಡೆಸುವ ನಿರ್ಣಯವನ್ನು ಅದು ಕೈಗೊಂಡಿತು.

ಈ ಎರಡೂ ಸಮಾವೇಶಗಳಲ್ಲಿ AIDWA ಪ್ರಧಾನ ಕಾರ್ಯದರ್ಶಿ ಬೃಂದಾ ಕಾರಟ್ ಮತ್ತು ಸಂಸತ್ ಸದಸ್ಯೆ ಚಂದ್ರಕಲಾ ಪಾಂಡೆ ಪಾಲುಗೊಂಡು ಮಾರ್ಗದರ್ಶನ ನೀಡಿದರು.

ಜಪಾನೀಯರನ್ನು ತಲ್ಲಣಗೊಳಿಸಿದ ಅಮೇರಿಕನ್ ಸೈನಿಕರ ಕುಕೃತ್ಯ

ಜಪಾನ್ ಕೈಗಾರಿಕೆಯ ದೃಷ್ಟಿಯಿಂದ ಅತ್ಯಂತ ಮುಂದುವರಿದ ದೇಶವಾದರೂ ಅದು ತನ್ನ ನೆಲದ ಮೇಲೆ ವಿದೇಶೀ ಸೇನೆಗೆ ಅಂದರೆ ಅಮೇರಿಕನ್ ಸೇನೆಗೆ ನೆಲೆಕೊಡಬೇಕಾದ ಹಾಗೂ ಅದರ ಖರ್ಚಿನಲ್ಲಿ ಒಂದಂಶವನ್ನು ಹೊರಬೇಕಾದ ಪರಿಸ್ಥಿತಿ ಅಲ್ಲಿಯ ದೇಶಪ್ರೇಮಿಗಳನ್ನು ಸದಾ ಕುಟುಕುವ ಒಂದು ಸಂಗತಿ. ಇದು ಇತ್ತೀಚೆಗೆ ತಲ್ಲಣದ ಮಟ್ಟಕ್ಕೆ ಹೋಯಿತು. ಒರೆನಾವಾದಲ್ಲಿನ ಅಮೇರಿಕನ್ ನೆಲೆಯ ಮೂವರು ಸೈನಿಕರು ಒಬ್ಬ ಶಾಲಾ ಬಾಲಕಿಯ ಮೇಲೆ ಅತ್ಯಾಚಾರವೆಸಗಿದ ಘಟನೆಗೆ ಸಹಜವಾಗಿಯೇ ಸಾರ್ವಜನಿಕ ಪ್ರತಿಭಟನೆಗಳು ಬಂದಿವೆ. ಈ ಘಟನೆಯಿಂದ ಅಮೇರಿಕಾಕ್ಕೆ ಮಿಲಿಟರಿ ನೆಲೆ ನೀಡುವ ಹಾಗೂ ಅಮೇರಿಕನ್ನರು ತಮಗೆ ಸಂಶಯ ಬಂದ ಜಪಾನೀ ನಾಗರಿಕರನ್ನು ಜಪಾನೀ ಸರಕಾರ ವಿದ್ಯುಕ್ತವಾಗಿ ಕೇಸ್ ದಾಖಲು ಮಾಡಿಕೊಳ್ಳುವವರೆಗೆ ತಮ್ಮ ನೆಲೆಯಲ್ಲಿ ಬಂಧಿಸಿಡಲು ಅಧಿಕಾರ ನೀಡಿರುವುದನ್ನು ರದ್ದುಗೊಳಿಸಬೇಕೆಂದು ಒತ್ತಾಯ ಬರುತ್ತಿದೆ.

ಜಪಾನೀ ಜನಸಾಮಾನ್ಯರ ಒತ್ತಡದಿಂದ ಅಮೇರಿಕನ್ ಅಧಿಕಾರಿಗಳು ಅತ್ಯಾಚಾರವೆಸಗಿದ ಮೂರು ಸೈನಿಕರನ್ನು ಜಪಾನೀ ಸರಕಾರಕ್ಕೆ ಒಪ್ಪಿಸಬೇಕಾಯಿತು. ಆದರೆ ತಮಾಷೆಯೆಂದರೆ ತನ್ನ ರಾಜಕೀಯ ಜೀವನವಿಡೀ ಅಮೇರಿಕನ್ ನೆಲೆಗಳಿಗೆ ಅವಕಾಶ ನೀಡಿರುವ "ಜಪಾನೀ-ಅಮೇರಿಕಾ ಭದ್ರತಾ ಸಂಧಿ"ಯನ್ನು ವಿರೋಧಿಸುತ್ತಾ ಬಂದ ಆದರೆ ಈಗ ಜಪಾನಿ ಪ್ರಧಾನಿಯಾಗಿರುವ 'ಸಮಾಜವಾದಿ' ತೋಮಿಚಿ ಮುರಾಮಾಮಾ ಈ ಸಂಧಿಯನ್ನು ರದ್ದುಮಾಡುವುದಿಲ್ಲ, ಜಪಾನಿನಲ್ಲಿ ಅಮೇರಿಕಾದ ನೆಲೆಗಳು ಮುಂದುವರಿಯುತ್ತವೆ ಎಂದು ಜಪಾನೀ ಸಂಸತ್ತಿನಲ್ಲಿ ಘೋಷಿಸಿದ್ದಾರೆ. ಅಷ್ಟೇ ಅಲ್ಲ ಅಮೇರಿಕನ್ ನೆಲೆಗಳ ಖರ್ಚಿಗೆ ಜಪಾನ್ ಕೊಡಬೇಕಾದ ಹಣದಲ್ಲಿ 300 ಕೋಟಿ ಡಾಲರುಗಳ ಹೆಚ್ಚಳವನ್ನು ಘೋಷಿಸಿದ್ದಾರೆ.

ಒರೆನಾವಾ ಜನರ ಸಿಟ್ಟು ಇನ್ನೂ ತಣ್ಣಗಾಗಿಲ್ಲ. ತನ್ನ ರಾಜ್ಯದಲ್ಲಿ ಅಮೇರಿಕನ್ನರ ನೆಲೆಗೆ ಕೊಟ್ಟಿರುವ ಲೀಸನ್ನು ನವೀಕರಿಸುವಲ್ಲಿ ಜಪಾನಿನ ಕೇಂದ್ರ ಸರಕಾರದೊಂದಿಗೆ ಸಹಕರಿಸುವುದಿಲ್ಲ ಎಂದು ಒಕಿನಾವಾ ಗವರ್ನರ್ ಸಾರಿದ್ದಾರೆ. ಒರೆನಾವಾದ ರಾಜಧಾನಿ ನಾಹಾದ ಅತ್ಯುತ್ತಮ ಮೂರನೇ ಎರಡು ಭಾಗ ನೆಲದ ಮೇಲೆ ಅಮೇರಿಕನ್ ಸೇನೆ ಲೀಸ್ ಹೊಂದಿದೆಯಂತೆ.

ಬೇಕಾದ್ದೆಲ್ಲ ಸಿಕ್ಕಿಲ್ಲ, ಸಾಧ್ಯವಿದ್ದದ್ದೆಲ್ಲಾ ಪಡೆದಿದ್ದೇನೆ - ಅರಾಫತ್

ಬಹಳ ದಿನಗಳ ಜಗ್ಗಾಟದ ನಂತರ ಇಸ್ರೇಲಿನ ಪ್ರದಾನ ಮಂತ್ರಿ ರಬಿನ್ ಹಾಗೂ ಪಿ.ಎಲ್.ಓ. ಅಧ್ಯಕ್ಷ ಯಾಸೆರ್ ಅರಾಫತ್ ವಾಶಿಂಗ್ಟನ್‌ನಲ್ಲಿ ಮತ್ತೊಂದು ಒಪ್ಪಂದಕ್ಕೆ ಸಹಿ ಹಾಕಿದ್ದಾರೆ. ಇದರ ಪ್ರಕಾರ ಪ್ಯಾಲೆಸ್ಟೀನೀ ಸ್ವಯಂಮಾಡಳಿತವನ್ನು ಪಶ್ಚಿಮ ತಟಕ್ಕೆ ವಿಸ್ತರಿಸಲಾಗುವುದು ಎಂದು ಹೇಳಲಾಗಿದೆ. ಪಶ್ಚಿಮತಟದಲ್ಲಿರುವ ಪ್ಯಾಲೆಸ್ಟೇನಿಯನ್ನರು ಬಹುಸಂಖ್ಯೆಯಲ್ಲಿರುವ ಪ್ರದೇಶಗಳು ಹಾಗೂ 450 ಹಳ್ಳಿಗಳಿಂದ ಇಸ್ರೇಲ್ ಹಿಂತೆಗೆದುಕೊಂಡರೂ ಆ ಪ್ರದೇಶದಲ್ಲಿ ಸಾಮಾಜಿಕ ಮಹತ್ವದ ಜನವಸತಿ ಇಲ್ಲದ ಪ್ರದೇಶಗಳ ಹತೋಟಿ ಇಸ್ರೇಲಿಯರ ಕೈಯಲ್ಲೇ ಇರುತ್ತದೆ. ಅಲ್ಲದೆ ಇಸ್ರೇಲ್ ಕೈಯಲ್ಲಿ ಒಟ್ಟಾರೆಯಾಗಿ ರಕ್ಷಣೆ ಹಾಗೂ ಪಶ್ಚಿಮ ತಂಡ ಪ್ರದೇಶಗಳಲ್ಲಿ ಒಂದು ಲಕ್ಷ ಪ್ಯಾಲೆಸ್ಟೇನಿಯನ್ನರ ನಡುವೆ ಇರುವ ಕೇವಲ 450 ಯೆಹೂದಿ ವಲಸಿಗರ 'ರಕ್ಷಣೆ' ಗಾಗಿ ಇಸ್ರೇಲಿ ಪಡೆಗಳು ಉಳಿಯುತ್ತವೆ. ಈ ಒಪ್ಪಂದದಿಂದ ಪಶ್ಚಿಮ ತಟ ಪ್ರದೇಶದ ಶೇ. 70 ಅಲ್ಲಿಯ ಭದ್ರತೆಯ ಶೇ. 90 ಹಾಗೂ 2/3 ರಷ್ಟು ನೀರಿನ ಸಂಪನ್ಮೂಲದ ಮೇಲೆ ಇಸ್ರೇಲೀ ಒಡೆತನವಿರುತ್ತದೆ ಎಂದು ಹಮಸ್ ಗುಂಪು ಆಪಾದಿಸಿದೆ.

ಯಾಸೆರ್ ಅರಾಫತ್ ಕೂಡಾ "ನನಗೆ ಬೇಕಾದ್ದೆಲ್ಲವನ್ನು ಪಡೆಯಲಾಗಿಲ್ಲ. ಆದರೆ ಸಾಧ್ಯವಾದುದನ್ನೆಲ್ಲಾ ಪಡೆದಿದ್ದೇನೆ" ಎಂದಿದ್ದಾರೆ. "ಹಂತ ಹಂತವಾಗಿ ಮುಂದುವರಿಯುವ ಸ್ಥಿತಿಯನ್ನು ನಾನೇನೂ ಕೃತಜ್ಞತೆಯಿಂದ ಸ್ವೀಕರಿಸಿಲ್ಲ. ಹೊಸ ವಿಶ್ವ ವ್ಯವಸ್ಥೆಯಿಂದಾಗಿ ಇಂತಹ ಸ್ಥಿತಿ ಎದುರಿಸಲೇಬೇಕಾಯಿತು. ಆದರೆ ಒಂದು ಪ್ಯಾಲೆಸ್ಟೀನ್ ಪ್ರಭುತ್ವವನ್ನು ಸೃಷ್ಟಿಸುವ ಸ್ಪಷ್ಟ ಉದ್ದೇಶದಿಂದ ಮುಂದುವರಿಯುತ್ತಿದ್ದೇನೆ" ಎಂದು ಅವರು ಹೇಳಿದ್ದಾರೆ.

ಆದರೆ ಅವರು ಮತ್ತೆ-ಮತ್ತೆ ಕೈಕುಲುಕುತ್ತಿರುವ ಇಸ್ರೇಲಿ ಪ್ರಧಾನಿಯ ಅಭಿಪ್ರಾಯವೇ ಬೇರೆ. ಪ್ಯಾಲೆಸ್ಟೇನ್ ಪ್ರಭುತ್ವ ರಚನೆಯಾಗುವುದಿಲ್ಲ, ಹಾಗೆ ರಚನೆಯಾಗಬೇಕಾದರೆ ಇನ್ನೂ ಕನಿಷ್ಟ 25 ರಿಂದ 50 ವರ್ಷಗಳು ಬೇಕಾದೀತು ಎಂದಿದ್ದಾರೆ.

ಬೋಸ್ನಿಯಾದಲ್ಲಿ ಶಾಂತಿ ನೆಲೆಸೀತೇ?

ನೆಲೆಸೀತೆಂದು ಕೆಲವರು ಈಗ ಆಶಾವಾದ ವ್ಯಕ್ತಪಡಿಸುತ್ತಿದ್ದಾರೆ. ಪಾಶ್ಚಿಮಾತ್ಯ ರಾಜತಾಂತ್ರಿಕರು ಮತ್ತು ಇಸ್ಲಾಮಿಕ್ ಸಮ್ಮೇಳನ ಸಂಘಟನೆ (ಓ.ಐ.ಸಿ.)ಯ ಪ್ರತಿನಿಧಿಗಳು ಮಾತುಕತೆ ನಡೆಸುತ್ತಿದ್ದು ಸದ್ಯದಲ್ಲೇ ಒಂದು ಶಾಂತಿ ಸಮ್ಮೇಳನ ನಡೆಯಬಹುದೆಂದು ನಿರೀಕ್ಷಿಸುತ್ತಿದ್ದಾರೆ. ಒಂದೆಡೆ ಸರ್ಬ್ ಪಡೆಗಳು ಹಿಂದೆಗೆಯುತ್ತಿವೆ ಎಂಬ ಬಗ್ಗೆ, ಇನ್ನೊಂದೆಡೆ ನಾಟೋ ಹಾಗೂ ವಿಶ್ವ ಸಂಸ್ಥೆ ಸರ್ಬಿಯನ್ನರ ಮೇಲೆ ವಿಮಾನ ದಾಳಿಯನ್ನು ನಿಲ್ಲಿಸಿದ್ದಾರೆಂಬ ಬಗ್ಗೆ ಸುದ್ದಿಗಳು ಬರುತ್ತಿವೆ. ಈ ನಡುವೆ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳು ಬೋಸ್ನಿಯಾದಲ್ಲಿ ತನ್ನ ಶಾಂತಿ ಪ್ರಯತ್ನದಲ್ಲಿ ಗೆಲುವಾಗಲಿ, ಸೋಲಾಗಲಿ ಇನ್ನು ಮುಂದೆ ವಿಶ್ವಸಂಸ್ಥೆಯ ಪಡೆಗಳು ಅಲ್ಲಿರಲು ಸಾಧ್ಯವಾಗಲಿಕ್ಕಿಲ್ಲ. ಆ ಕೆಲಸವನ್ನು ಬಹುರಾಷ್ಟ್ರೀಯ ಪಡೆಗಳು ಅಂದರೆ ನಾಟೋದವರು ಮಾಡಲಿ ಎಂಬ ಇಂಗಿತವನ್ನು ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿಯಲ್ಲಿ ವ್ಯಕ್ತಪಡಿಸಿದ್ದಾರೆ. ವಿಶ್ವದ ಪ್ರಧಾನ ದೇಶಗಳೆಂದು ಹೇಳಿಕೊಳ್ಳುವ ಪಾಶ್ಚಿಮಾತ್ಯ ದೇಶಗಳ ಅನಾಸಕ್ತಿಯಿಂದ ವಿಶ್ವಸಂಸ್ಥೆ ಬೋಸ್ನಿಯಾದಲ್ಲಿ ಏನೂ ಮಾಡಲಾಗದಾಗಿದೆ ಎಂದು ಅವರು ಈ ಹಿಂದೆಯೇ ಹೇಳಿದ್ದರು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ನಮ್ಮ ಪರಮಾಣು ಪರೀಕ್ಷಣೆ ಆತ್ಮರಕ್ಷಣೆಗಷ್ಟೆ -ಚೀಣೀ ಪ್ರಧಾನಿ

ಇತ್ತೀಚೆಗೆ ಎರಡು ಪರಮಾಣು ಪರೀಕ್ಷಣೆಗಳು ಜಗತ್ತಿನಲ್ಲಿ ಗಮನಸೆಳೆದವು. ಒಂದು ಚೀಣಾದ್ದು, ಇನ್ನೊಂದು ಫ್ರಾನ್ಸಿನದ್ದು. ಆದರೆ ಫ್ರಾನ್ಸಿನದ್ದಕ್ಕೆ ಹೆಚ್ಚಿನ ಪ್ರತಿಭಟನೆ ಬಂತು ಏಕೆ? ಎಂದು ಕೆಲವು ಪಾಶ್ಚಿಮಾತ್ಯರು ಪ್ರಶ್ನಿಸಿದ್ದಾರೆ. ಜಪಾನ್ ಕೂಡಾ ಚೀಣಾದ ಪರೀಕ್ಷಣೆಗೆ ಬಹಳ ವಿರೋಧ ವ್ಯಕ್ತಪಡಿಸಿತು.

ಆದರೆ ಇದು ಅನಗತ್ಯವಾಗಿತ್ತು ಎಂದು ಚೀಣೀ ಪ್ರಧಾನಮಂತ್ರಿ ಲಿ ಪೆಂಗ್ ಹೇಳಿದ್ದಾರೆ. ಚೀಣಾದ ಪರೀಕ್ಷಣೆ ಚೀಣಾದ ಪ್ರದೇಶದಲ್ಲೇ ನಡೆದರೆ ಫ್ರಾನ್ಸ್‌ನ ಪರೀಕ್ಷಣೆ ತನ್ನ ನೆಲದಿಂದ ಸಾವಿರಾರು ಮೈಲಿಗಳ ದೂರದಲ್ಲಿ ನಡೆಯಿತು ಎಂಬ ಪ್ರಮುಖ ವ್ಯತ್ಯಾಸವನ್ನು ಬಹಳ ಮಂದಿ ಗಮನಿಸಿದ್ದಾರೆ. ಆದರೆ ಇನ್ನೊಂದು ಅಂಶವನ್ನು ಬಹಳಷ್ಟು ಮಂದಿ ಗಮನಿಸಿಲ್ಲ- ಅದೆಂದರೆ ಚೀಣಾ ಪರಮಾಣು ಪ್ರಸರಣ ನಿಷೇಧಕ್ಕೆ ಬದ್ಧವಾಗಿದೆ. ತಾನು ಮೊದಲಿಗೆ ಪರಮಾಣು ಅಸ್ತ್ರ ಪ್ರಯೋಗಿಸುವುದಿಲ್ಲ, ಅಲ್ಲದೆ ಪರಮಾಣು ಅಸ್ತ್ರಗಳಿಲ್ಲದ ದೇಶಗಳ ವಿರುದ್ಧ ಪ್ರಯೋಗಿಸುವುದಿಲ್ಲ ಎಂದು ಸ್ಪಷ್ಟವಾಗಿ ಸಾರಿದೆ ಎಂದು ಚೀಣೀ ಪ್ರಧಾನಿ ನೆನಪಿಸಿದ್ದಾರೆ. ಕೇವಲ ಆತ್ಮರಕ್ಷಣೆಗಾಗಿ ಕೆಲವೇ ಪರಮಾಣು ಶಸ್ತ್ರಗಳನ್ನು ಚೀಣಾ ತಯಾರಿಸುತ್ತದೆ. 1996ರಲ್ಲಿ ಒಂದು ಸಮಗ್ರ ಪರಮಾಣು ಪರೀಕ್ಷಣಾ ನಿಷೇಧ ಒಪ್ಪಂದ ಏರ್ಪಡಿಸುವ ಮಾತುಕತೆಗಳಿಗೆ ಚೀಣಾ ಸಕಾರಾತ್ಮಕವಾಗಿ ತೊಡಗಿದೆ, ಆ ಒಪ್ಪಂದ ಆದ ಕೂಡಲೇ ಪರೀಕ್ಷಣೆಗಳನ್ನು ನಿಲ್ಲಿಸುವುದಾಗಿ ಲಿ ಪೆಂಗ್ ಹೇಳಿದ್ದಾರೆ. ಪರಮಾಣು ಶಸ್ತ್ರಕ್ಕೆ ಮೊದಲು ಬಲಿಯಾದ ಜಪಾನೀಯರ ಆತಂಕ ಚೀಣೀಯರಿಗೆ ಅರ್ಥವಾಗುತ್ತದೆ. ಆದರೆ ಚೀಣೀಯರ ಆತಂಕವನ್ನು ಜಪಾನೀಯರು ಗೌರವಿಸಬೇಕು ಎಂದು ಅವರು ಹೇಳಿದ್ದಾರೆ.

ಈಗ ರೋಗಗಳ ಜಾಗತೀಕರಣ!

ಕಾಯಿಲೆ, ಪೋಷಕ ಆಹಾರದ ಅಭಾವದಿಂದ ನರಳುತ್ತಿರುವ ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಈಗ ಪಾಶ್ಚಿಮಾತ್ಯ ಮಾದರಿಯ ಆರೋಗ್ಯ ಸಮಸ್ಯೆಗಳನ್ನು ಎದುರಿಸಬೇಕಾಗಿ ಬಂದಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ(WHO) ಹೇಳಿದೆ. ಬಡತನದಿಂದ ಹೊಮ್ಮುವ ಆರೋಗ್ಯ ಸಮಸ್ಯೆಗಳಿಗೇ ಇನ್ನೂ ಪರಿಹಾರ ಪಡೆಯಲಾಗದ ದೇಶಗಳಲ್ಲಿ ಈಗ ಹಿಂಸಾಚಾರ, ಆತ್ಮಹತ್ಯೆ, ತಂಬಾಕು ಸೇವನೆ, ಹದಿಹರೆಯದ ಗರ್ಭ ಇತ್ಯಾದಿಗಳು ಈ ಪಟ್ಟಿಗೆ ಸೇರಿವೆ. ಅಮೇರಿಕಾದಲ್ಲಿ 10-24ರ ವಯೋಮಿತಿಯ ಸಾವುಗಳಲ್ಲಿ ಶೇ. 14 ಹಿಂಸಾಚಾರದಿಂದ, ಶೇ. 12 ಆತ್ಮಹತ್ಯೆಯಿಂದ, ಅರ್ಧದಷ್ಟು ಮಾದಕ ಪೇಯಗಳ ಸೇವನೆಯಿಂದ ಈಗ ಆ ಪ್ರವೃತ್ತಿ ಇಡೀ ಜಗತ್ತಿಗೆ ಹರಡುತ್ತಿದೆ ಎಂದು WHO ತಜ್ಞರೊಬ್ಬರು ಆತಂಕ ವ್ಯಕ್ತಪಡಿಸಿದ್ದಾರೆ.

ಕಾರ್ಮಿಕರ ಪಕ್ಷವೆಂದು ಹೇಳಿಕೊಳ್ಳುವ ಬ್ರಿಟನ್ನಿನ ಲೇಬರ್ ಪಕ್ಷದ ಮುಖಂಡ ಟೋನಿ ಬ್ಲೇರ್ ಕಾರ್ಮಿಕರ ಒತ್ತಾಯಗಳಿಗೆ ತನ್ನ ಪಕ್ಷ ಬದ್ಧವಾಗಬೇಕಿಲ್ಲ ಎಂದು ಹೇಳಿರುವುದಕ್ಕೆ ಭಾರೀ ಪ್ರತಿಭಟನೆ ವ್ಯಕ್ತಗೊಂಡಿದೆ. ಲಂಡನ್ನಿನಲ್ಲಿ ನಡೆದ ಒಂದು ಮತಪ್ರದರ್ಶನದಲ್ಲಿ ಒಂದು 'ರಾಷ್ಟ್ರೀಯ ಕನಿಷ್ಠ ವೇತನ' ರೂಪಿಸಲು ಲೇಬರ್ ಪಕ್ಷ ಬದ್ಧವಾಗಬೇಕು ಎಂದು ಒತ್ತಾಯಿಸುತ್ತಿರುವ ಕಾರ್ಮಿಕರು "ಬ್ಲೇರ್, ಎಂಡ್ ಪವರ್ಟಿ ಪೇ, ಮೇಕ್ ದ ರಿಚ್ ಪೇ" (ದರಿದ್ರ ಕೂಲಿ ಬೇಡ, ಶ್ರೀಮಂತರು ತೆರುವಂತೆ ಮಾಡು) "ಲೋ ಪೇ, ನೋ ವೇ" (ಕಮ್ಮಿ ಕೂಲಿ ಒಂದು ದಾರಿಯಲ್ಲ) ಎಂಬ ಘೋಷಣೆಗಳು ಅಲ್ಲಿ ಕೇಳಬಂದವು.



ಅಮೇರಿಕದೊಳಗೊಂದು ಇಣುಕು

'ಕರಿ ಅಮೇರಿಕವನ್ನು ಬಿಳಿ ಅಮೇರಿಕದಿಂದ ಪ್ರತ್ಯೇಕಗೊಳಿಸುವುದು ನಮ್ಮ ಅಂತಿಮ ಗುರಿ'

"ಬಿಳಿಯರ ಅಮೇರಿಕಾ ಪತನದತ್ತ ಸಾಗಿದೆ. ಅವಸಾನಗೊಳ್ಳುತ್ತಿರುವ ಬಿಳಿ ಅಮೇರಿಕಾದ ಮೇಲಿನ ಅವಲಂಬನೆಯಿಂದ ಕರಿಯರ ಅಮೇರಿಕಾ ತನ್ನನ್ನು ಬಿಡಿಸಿಕೊಂಡು ಪ್ರತ್ಯೇಕವಾಗಬೇಕು......

"ಮೆಂಡೆಲ್‌ನ ಜೀವ ವಿಜ್ಞಾನದ ನಿಯಮದ ಪ್ರಕಾರ ಕರಿಕಣ್ಣಿನ ಕರಿತೊಗಲಿನ ಜನ ಜಗತ್ತಿನ ಮೊದಲ ಜನಾಂಗ. ಈ ನೀಲಿಗಣ್ಣಿನ ಹೊಂಬಣ್ಣದ ಕೂದಲಿನ ಬಿಳಿದೆವ್ವಗಳು ಜಗತ್ತು ಕಂಡ ಕೊನೆಯ ಜನಾಂಗ. ಕರಿಯರನ್ನು ದೇವರೇ ಸೃಷ್ಟಿಸಿದರೆ, ಬಿಳಿಯರು ಮಿಶ್ರತಳಿ......"

ಈ ನೀಲಿ ಗಣ್ಣಿನವರನ್ನು ನಂಬಬಾರದು. ಹಾವುಗಳು, ಬೆಕ್ಕುಗಳು ಮತ್ತು ಈ ಬಿಳಿಯರಿಗೆ ಮಾತ್ರ ನೀಲಿಗಣ್ಣು ಇರುವುದು......ಯೇಸುಕ್ರಿಸ್ತ ಹಾಗೂ ಪ್ರವಾದಿ ಮಹಮ್ಮದ್ ಇಬ್ಬರೂ ಈ ಬಿಳಿಜನರನ್ನು ದೆವ್ವಗಳು ಎಂದು ಕರೆದಿದ್ದರು. ಬೈಬಲ್ ಹಾಗೂ ಕುರಾನ್‌ಗಳಲ್ಲಿ....."

ಜನಾಂಗದ್ವೇಷದಿಂದ ಕೂಡಿರುವ ಅತಿವಾದಿಗಳ ಮಾತುಗಳಂತೆ ಕಾಣುವ ಈ ಮಾತುಗಳು 'ಇಸ್ಲಾಮಿಕ್ ದೇಶ' ಎಂಬ ಕರಿಯ ಗುಂಪಿನ ಡೆಲ್ಲಸ್ ನಗರದ ನಾಯಕ ಜೆಫರಿ ಮಹಮ್ಮದ್‌ನವು. 28 ವರ್ಷದ ಈ ನಾಯಕ ಇತ್ತೀಚೆಗೆ ಡೆಲ್ಲಸ್‌ನಲ್ಲಿ ನಡೆದ ಘಟನೆಯಿಂದ ಭಾರೀ ಪ್ರಸಿದ್ಧನಾದ. ಡೆಲ್ಲಸ್ ನಗರದ ಶಾಪಿಂಗ್ ಕಾಂಪ್ಲೆಕ್ಸ್‌ನಲ್ಲಿ ಕ್ಯಾಶ್ ರಿಜಿಸ್ಟರ್ ದೋಚಿಕೊಂಡು ಹೋಗುತ್ತಿದ್ದ ನಾಲ್ಕು ಕರಿಯ ಹುಡುಗರನ್ನು 'ಇಸ್ಲಾಮಿಕ್ ಫಲ'ದ (ಇದು ಇಸ್ಲಾಮಿಕ್ ದೇಶದ 'ಬರಿಗಾಲ ಸೈನಿಕ ಸಂಘಟನೆ) ಕಾರ್ಯಕರ್ತರು ಹಿಡಿದು ಚೆನ್ನಾಗಿ ಥಳಿಸಿದರು. ಕ್ಯಾಶ್ ರಿಜಿಸ್ಟರ್ ಬಿಡಿಸಿ ಅದರ ಮಾಲಿಕರಿಗೆ ವಾಪಸು ಮಾಡಿದರು. ಕರಿಯರು ಶುದ್ಧ, ಸಾತ್ವಿಕ, ನೈತಿಕ ಬದುಕು ನಡೆಸಬೇಕು. ಈ ಬಿಳಿಯರ ಥಳಕು-ಬಳುಕಿನ ಬದುಕಿಗೆ, ಅವರ ಜೀವನ ಶೈಲಿಯ ಪ್ರಭಾವಕ್ಕೆ ಒಳಗಾಗಬಾರದು. ಇದನ್ನು ಕರಿಯರಿಗೆ ಕಲಿಸಲು ಛಡಿಯೇಟು ಅಗತ್ಯವಿದ್ದರೆ ಅದನ್ನು ನಾವು ಹಿಡಿಯುತ್ತೇವೆ. ಶಾಪ್ಪಿಂಗ್ ಕಾಂಪ್ಲೆಕ್ಸ್‌ನ ಘಟನೆಯಲ್ಲಿ ನಾವು ಮಾಡಿದ್ದು ಇದನ್ನೇ ಎನ್ನುತ್ತಾನೆ ಜೆಫರಿ ಮಹಮ್ಮದ್.

ಈ ಘಟನೆಗೆ ಆಶ್ಚರ್ಯಕರ ಪ್ರತಿಕ್ರಿಯೆ ಬಂತು. ಬಿಳಿಯರು ಕರಿಯರೆನ್ನದೆ 'ಇಸ್ಲಾಮಿಕ್ ದೇಶ'ವನ್ನು ಎಲ್ಲರೂ ಹಾಡಿಹೊಗಳಿದರು. ಅಪರಾಧ, ನೈತಿಕ ಅಧಃಪತನದಿಂದ ಎಲ್ಲರೂ ಬೇಸತ್ತಿದ್ದಾರೆ. ಅದನ್ನು ಮಟ್ಟ ಹಾಕಲು ಈ ಸಂಘಟನೆ ಏನು ಮಾಡಲೂ ತಯಾರು. ಸಾಮಾಜಿಕ ಜವಾಬ್ದಾರಿ ಹೊರಲು ಯಾವುದೇ ಸಂಘಟನೆ ತಯಾರಿಲ್ಲದಿರುವಾಗ 'ಇಸ್ಲಾಮಿಕ್ ದೇಶ' ಮುಂದೆ ಬಂದದ್ದರಿಂದ ಜನರಿಗೆ ಸಂತೋಷವಾಗಿದೆ ಎಂದು ಕೆಲವು ಅಂಕಣಕಾರರ ವಿವರಣೆ.

'ಇಸ್ಲಾಮಿಕ್ ದೇಶ'ದ ಈ ಕಾರ್ಯಾಚರಣೆ ಎಷ್ಟು ಜನಪ್ರಿಯವಾಯಿತೆಂದರೆ ಪೋಲೀಸರು 'ಇಸ್ಲಾಮಿಕ್ ಫಲ'ದ ಕಾರ್ಯಕರ್ತರನ್ನು ಬಿಡುಗಡೆ ಮಾಡಬೇಕಾಯಿತು.

'ಇಸ್ಲಾಮಿಕ್ ದೇಶ' ಬಿಳಿಯರ ವಿರುದ್ಧ ಜನಾಂಗ ದ್ವೇಷ ಸಾರುವ ತಿಕ್ಕಲು ಧಾರ್ಮಿಕ ಸಂಘಟನೆಯಂತೆ ಕಂಡರೂ ಅದರ ಜನಪ್ರಿಯತೆಯ ಹಿಂದಿನ ಕಾರಣ ಬೇರೆ ಎನ್ನಿಸುತ್ತದೆ. ಅದು ಹೆಚ್ಚು ಕಡಿಮೆ ಎಲ್ಲಾ ಪ್ರಮುಖ ನಗರಗಳಲ್ಲಿ 'ಮಸೀದಿ'ಗಳನ್ನು ನಡೆಸುತ್ತದೆ. ಅದರ 'ಮಸೀದಿ'ಯ ಮುಖ್ಯಸ್ಥ ಪೂರ್ಣಾವಧಿ ಕಾರ್ಯಕರ್ತ. ಅದರ ಸದಸ್ಯರು ಸಂಘಟಿತ ರೀತಿಯಲ್ಲಿ ಕೆಲಸ ಮಾಡುತ್ತಾರೆ. ಅದರ ಪತ್ರಿಕೆ 'ಅಂತಿಮ ಕರೆ' (Final Call) ಡೆಲ್ಲಸ್ ಘಟನೆಯ ನಂತರ ಈ ನಗರವೊಂದರಲ್ಲೇ 25 ಸಾವಿರ ಪ್ರತಿ ಮಾರಾಟವಾಗುತ್ತಿದೆಯಂತೆ. ಈ ಸಂಘಟನೆಯ ಸದಸ್ಯರಿಗೆ ಕುಡಿಯುವುದು, ಸಿಗರೇಟು ಸೇದುವುದು, ಮದುವೆಯಿಲ್ಲದೆ ಗಂಡು-ಹೆಣ್ಣಿನ ದೈಹಿಕ ಸಂಬಂಧ ನಿಷಿದ್ಧ.

ಜೆಫರಿ ಮಹಮ್ಮದ್ ಸಂದರ್ಶನದಲ್ಲಿ ಹೇಳಿದ ಇತರ ಕೆಲವು ಅಂಶಗಳು ಈ ಕರಿಯರ ಸಂಘಟನೆಯ ಜನಪ್ರಿಯತೆಯ ಹಿಂದಿನ ಕಾರಣವನ್ನು ಸ್ಪಷ್ಟಪಡಿಸುತ್ತದೆ. ಹಿಂದಿನ ಪ್ರತ್ಯೇಕ ಸ್ಕೂಲ್‌ಗಳನ್ನು ತೆಗೆದು ಮಿಶ್ರ ಸ್ಕೂಲ್‌ಗಳನ್ನು ಆರಂಭಿಸಿ ಕರಿಯರಿಗೆ ಕೀಳರಿಮೆ ಮತ್ತು ನೈತಿಕ ಅಧಃಪತನ ತಂದಿತು. ಕರಿಯರಿಗೆ ಪ್ರತ್ಯೇಕ ಸ್ಕೂಲ್ ಇರಬೇಕು. ಅಲ್ಲಿ ಬೇರೆ ಸ್ಕೂಲ್‌ಗಳಂತೆ ಎಲ್ಲಾ ಸವಲತ್ತುಗಳು ಇರಬೇಕು ಎಂದು ಆತ ಅಭಿಪ್ರಾಯಪಟ್ಟ. ಅಮೇರಿಕದ ಎರಡೂವರೆ ಕೋಟಿ ಕರಿಯರು ಬೇರೆ ಒಂದು ದೇಶ. ಹಂತಹಂತವಾಗಿ ಅವರು ತಮಗೆ ಬೇಕಾದ ಅವಶ್ಯಕ ವಸ್ತುಗಳನ್ನು ತಾವೇ ಉತ್ಪಾದಿಸುವುದಕ್ಕೆ ಗಮನ ನೀಡಬೇಕು. ಸ್ವಯಂಪೂರ್ಣವಾಗಬೇಕು. ಇದರತ್ತ 'ಇಸ್ಲಾಮಿಕ್ ದೇಶ' ಕೆಲಸ ಮಾಡುತ್ತದೆ ಅಂದ.

ಎಲ್ಲಾ ಜನಾಂಗದವರನ್ನು ಒಗ್ಗೂಡಿಸದೆ ಜನಾಂಗ ಪ್ರತ್ಯೇಕತೆ, ಧಾರ್ಮಿಕ ಆಧಾರದ ಮೇಲೆ ಅಮೇರಿಕನ್ ಸಾಮ್ರಾಜ್ಯಶಾಹಿಗೆ ಸವಾಲೆಸೆಯುವುದು ತಿಕ್ಕಲುತನ ಎನ್ನುವುದಕ್ಕೆ ಏನೂ ಸಂಶಯವಿಲ್ಲ. ಆದರೆ 60ರ ದಶಕದ ಕರಿಯರು ಸಮಾನ ಹಕ್ಕುಗಳಿಗೆ ನಡೆಸಿದ ಹೋರಾಟ(ಬ್ಲಾಕ್ ಪ್ಯಾಂಥರ್ಸ್, ಮಾರ್ಟಿನ್ ಲೂಥರ್ ಕಿಂಗ್‌ರ ನಾಯಕತ್ವದಲ್ಲಿ) ನಂತರ ಅಮೇರಿಕನ್ ಆಳುವ ವರ್ಗಗಳು ಕೈಗೊಂಡ ಕಣ್ಣೊರೆಸುವ ಕ್ರಮಗಳು, ಅದರ ಪರಿಣಾಮ ಕಳೆದುಕೊಂಡಂತೆ ಕಾಣುತ್ತದೆ. ಕರಿಯರ ಒಂದು ವಿಭಾಗವನ್ನು 'ವ್ಯವಸ್ಥೆ' ಜತೆ ಶಾಮೀಲಾಗುವಂತೆ, ಹೆಚ್ಚಿನ ಕರಿಯರು, ಕ್ಷಣ ಉದ್ಯೋಗಗಳಲ್ಲಿ ಮೀಸಲಾತಿ ಮುಂತಾದ ಕಣ್ಣೊರೆಸುವ ಕಾರ್ಯಕ್ರಮ ಕೈಗೊಂಡಿತ್ತು. ಆದರ ಬಣ್ಣ ಈಗ ಬಯಲಾಗುತ್ತಿದೆ. ಅದು ಮೋಸದ ಕಾರ್ಯಕ್ರಮ ಎಂದು ಎಲ್ಲರಿಗೂ ಗೊತ್ತಿದೆ. ಬಿಳಿಯ-ಕರಿಯ ಭೇದ ಕಣ್ಣಿಗೆ ರಾಚುವಂತೆ ಇದೆ. ರೇಗನ್ ನಂತರದ ಸರಕಾರಗಳೆಲ್ಲಾ ಕಡಿಮೆ ವರಮಾನ ಉಳ್ಳವರಿಗೆ(ಇದರಲ್ಲಿ ಕರಿಯರದು ದೊಡ್ಡ ಪಾಲು) ದೊರಕುತ್ತಿದ್ದ ಬೇರೆ ಬೇರೆ ಕಲ್ಯಾಣ ಸವಲತ್ತುಗಳನ್ನು ಕಡಿತಗೊಳಿಸಿದ್ದಾರೆ. ಸೋವಿಯತ್ ಒಕ್ಕೂಟದ ಪತನದ ನಂತರ ಈ ಆಕ್ರಮಣ ತೀವ್ರವಾಗಿದೆ. ಹಲವು ಬಲಪಂಥೀಯರು ಕರಿಯರಿಗೆ ಮೀಸಲಾತಿಯನ್ನು ಪ್ರಶ್ನಿಸಲಾರಂಭಿಸಿದ್ದಾರೆ. ಇತ್ತೀಚೆಗೆ ಒಂದು ವಿಶ್ವವಿದ್ಯಾನಿಲಯ ಎಲ್ಲಾ ಮೀಸಲಾತಿಗಳನ್ನು ರದ್ದು ಮಾಡಿತು. ನಿರುದ್ಯೋಗ, ಬಡತನ, ಮಾದಕ ದ್ರವ್ಯಗಳ ಹೆಚ್ಚಳ, ಅಪರಾಧಕ್ಕೆ ಕುಮ್ಮಕ್ಕು ಎಲ್ಲಾ ಕರಿಯರ ಮೇಲೆ ಪರಿಣಾಮ ಬೀರುತ್ತದೆ. ಕರಿಯರ ಆಕ್ರೋಶ, ಪ್ರತಿಭಟನೆ ಸಂಘಟಿತ ರಾಜಕೀಯ ರೂಪದ ಅಭಾವದಿಂದ ಧಾರ್ಮಿಕ, ಜನಾಂಗ ದ್ವೇಷದ ತಿಕ್ಕಲು ರೂಪ ಪಡೆಯುತ್ತಿದೆ ಎನ್ನಿಸುತ್ತದೆ.

-ಶರತ್ಚಂದ್ರ

ಹಾಂಗ್ ಕಾಂಗ್ ಚುನಾವಣೆ: ಮತದಾನ ಕೇವಲ ಶೇ. 36

1997 ರಲ್ಲಿ ಮತ್ತೆ ಚೀಣಾದ ಭಾಗವಾಗಬೇಕಾದ ಹಾಂಗ್‌ಕಾಂಗ್‌ನಲ್ಲಿ ಇತ್ತೀಚೆಗೆ ನಡೆದ ಚುನಾವಣೆಗಳು ಹಾಂಗ್‌ಕಾಂಗ್ ಬಗ್ಗೆ ಬ್ರಿಟಿಷ್ ಮತ್ತು ಚೀಣಾ ಸರಕಾರಗಳ ನಡುವೆ ಆದ ಒಪ್ಪಂದಕ್ಕೆ ಅನುಗುಣವಾಗದದ್ದಲ್ಲ, ಆದ್ದರಿಂದ ಈ ಚುನಾವಣೆಗಳಲ್ಲಿ ಈಗಿನ ಬಂಡವಾಳ ಕಾರ್ಯಾಗಾರ ಜೂನ್ 30, 1997ರವರೆಗೆ ಮಾತ್ರ ಎಂದು ಚೀಣಾ ಸರಕಾರ ಮತ್ತೊಮ್ಮೆ ದೃಢಪಡಿಸಿದೆ. ತನ್ನ ನೂರು ವರ್ಷಗಳ ವಸಾಹತುಶಾಹೀ ಆಳ್ವಿಕೆಯಲ್ಲಿ ಹಾಂಗ್ ಕಾಂಗ್ ಜನರ ಪ್ರಜಾಪ್ರಭುತ್ವದ ಬಗ್ಗೆ ಎಂದೂ ಯೋಚಿಸದ ಬ್ರಿಟನ್ನಿನ ಅಧಿಕಾರಿಗಳಿಗೆ ನಾಲ್ಕು ವರ್ಷಗಳ ಹಿಂದೆಯಷ್ಟೆ ಅದರ ನೆನಪಾಗಿರುವುದು ಕೇವಲ ಆಕಸ್ಮಿಕವಲ್ಲ.

ಹಾಂಗ್‌ಕಾಂಗ್ ಚುನಾವಣೆಗಳಲ್ಲಿ ಜನ ಚೀಣಾದ ಬಗ್ಗೆ ವಿರೋಧ ವ್ಯಕ್ತಪಡಿಸಿದ್ದಾರೆ ಎಂದು ನಮ್ಮ ಸುದ್ದಿ ಮಾಧ್ಯಮಗಳಲ್ಲಿ ಭಾರೀ ಪ್ರಚಾರ ನಡೆದಿದೆ. ಆದರೆ ಅಲ್ಲಿ ಮತದಾನ ನಡೆದದ್ದು ಕೇವಲ 35.79ಶೇ. ಎಂದು ಮಾತ್ರ ಅವು ಹೇಳಿಲ್ಲ. ವಾಸ್ತವವಾಗಿ ನಾಲ್ಕು ವರ್ಷಗಳ ಹಿಂದೆ ನಡೆದ ಮೊದಲ ಚುನಾವಣೆಗಳಿಗಿಂತ ಈ ಬಾರಿ ಮತದಾನ ಶೇ. 3.36ರಷ್ಟು ಕಡಿಮೆಯಾಗಿದೆ.

ಹಾಂಗ್‌ಕಾಂಗ್ ಹಿಂದೆ ಚೀಣಾದ ಭಾಗವಾಗಿದ್ದು 1897ರಲ್ಲಿ ಬ್ರಿಟಿಷ್ ವಸಾಹತುಶಾಹಿಗಳು ಅದನ್ನು 100 ವರ್ಷಗಳ ಲೀಸಿಗೆ ಪಡೆದಿದ್ದರು. ಚೀಣಾ ಮತ್ತು ಬ್ರಿಟನ್ ಸರಕಾರಗಳ ನಡುವೆ ಆದ ಒಪ್ಪಂದದ ಪ್ರಕಾರ 1997ರಲ್ಲಿ ಲೀಸ್ ಮುಗಿಯುವ ವೇಳೆಗೆ ಹಾಂಗ್ ಕಾಂಗ್ "ಒಂದು ದೇಶ- ಎರಡು ವ್ಯವಸ್ಥೆ"ಯ ನೀತಿಯಡಿ ತಾಯ್ನಾಡಿಗೆ ಮತ್ತೆ ಸೇರುತ್ತದೆ.

KRNM/BGS-405 MAG (2) PRB DECR 319-78/79
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ.ರಾಮಚಂದ್ರರಾವ್. ಸಂಪಾದಕರು: ಪಿ.ರಾಮಚಂದ್ರರಾವ್. ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27.
ಫೋನ್ ನಂ. 2236462

ಕೇರಳ: ಎಡ ಜನತಂತ್ರ ರಂಗದ ವಿಜಯ ದುಂದುಭಿ

ಕೇರಳದಲ್ಲಿ ಎಡ ಪ್ರಜಾಸತ್ತಾತ್ಮಕ ರಂಗ ಅಲ್ಲಿನ ಪಂಚಾಯಿತಿ ಹಾಗೂ ನಗರಪಾಲಿಕೆ ಚುನಾವಣೆಗಳಲ್ಲಿ ಭಾರೀ ವಿಜಯವನ್ನು ಸಾಧಿಸಿದೆ. ಸೆಪ್ಟೆಂಬರ್ 23 ಮತ್ತು 25ರಂದು ಚುನಾವಣೆ ನಡೆದಿತ್ತು.

ಸುಮಾರು ಎರಡು ಕೋಟಿ ಜನರಿಗೆ ಈ ಚುನಾವಣೆಗಳಲ್ಲಿ ಮತ ಚಲಾಯಿಸುವ ಹಕ್ಕು ಇತ್ತು. ನಾನಾ ಪಕ್ಷಗಳ ಹಾಗೂ ಯಾವುದೇ ಪಕ್ಷಕ್ಕೆ ಸೇರದ 58000ಕ್ಕೂ ಹೆಚ್ಚು ಅಭ್ಯರ್ಥಿಗಳು ಸ್ಪರ್ಧೆಯ ಕಣದಲ್ಲಿದ್ದರು.

ಕಾಂಗ್ರೆಸ್(ಐ) 9644, ಬಿಜೆಪಿ 7542, ಸಿಪಿಐ(ಎಂ) 6566, ಮುಸ್ಲಿಂ ಲೀಗ್ ,2121 ಹಾಗೂ ಸಿಪಿಐ 1894 ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದವು.

ಬಿಜೆಪಿಯ ಸ್ಪರ್ಧಿಗಳ ಸಂಖ್ಯೆಯನ್ನು ನೋಡಿದರೆ ಆಶ್ಚರ್ಯವಾಗಬೇಕಲ್ಲವೆ? ಅದು ಸಿಪಿಐ(ಎಂ) ನಿಲ್ಲಿಸಿದ್ದಕ್ಕಿಂತ ಹೆಚ್ಚಿನ ಅಭ್ಯರ್ಥಿಗಳನ್ನು ಕಣಕ್ಕಿಳಿಸಿತ್ತು. ಆದರೆ ಇದಕ್ಕೆ ತಾನು ದೊಡ್ಡ ಪಕ್ಷ ಎಂದು ತೋರಿಸಿಕೊಳ್ಳುವ ಮತ್ತೇರಿತ್ತೇ ಹೊರತು ಕೇರಳದಲ್ಲಿ ನಿಜವಾಗಿಯೂ ಅದು ಅಷ್ಟೊಂದು ದೊಡ್ಡ ಪಕ್ಷವೇ ಅಲ್ಲ. ಫಲಿತಾಂಶವು ಅದನ್ನು ಸ್ಪಷ್ಟಪಡಿಸಿದೆ.

ವಿಜಯ ಪತಾಕೆ:

990 ಗ್ರಾಮ ಪಂಚಾಯಿತಿಗಳ ಪೈಕಿ 630 ರಲ್ಲಿ ಎಲ್‌ಡಿಎಫ್ ವಿಜಯ ಪತಾಕೆಯನ್ನು ಹಾರಿಸಿದೆ. 152 ಬ್ಲಾಕ್ ಪಂಚಾಯಿತಿಗಳ ಪೈಕಿ 90 ರಲ್ಲಿ, 14 ಜಿಲ್ಲಾ ಪಂಚಾಯಿತಿಗಳ ಪೈಕಿ 10 ರಲ್ಲಿ, 53 ಪುರಸಭೆಗಳ ಪೈಕಿ 34 ರಲ್ಲ ಮತ್ತು ಮೂರು ನಗರ ಪಾಲಿಕೆಗಳ ಪೈಕಿ ಎರಡರಲ್ಲಿ ಸಿಪಿಐ(ಎಂ) ನೇತೃತ್ವದ ಎಲ್ ಡಿ ಎಫ್ ಬಹುಮತ ಸಾಧಿಸಿದೆ.

ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಕಾಂಗ್ರೆಸ್(ಐ) ನೇತೃತ್ವದ ಸಂಯುಕ್ತ ಪ್ರಜಾಸತ್ತಾತ್ಮಕ ರಂಗ(ಯುಡಿಎಫ್) 342 ಗ್ರಾಮ ಪಂಚಾಯಿತಿ, 45 ಬ್ಲಾಕ್ ಪಂಚಾಯಿತಿಗಳು, ಮೂರು ಜಿಲ್ಲಾ ಪಂಚಾಯಿತಿ ಹಾಗೂ 18 ಪುರಸಭೆಗಳ ಮೇಲೆ ನಿಯಂತ್ರಣ ಸಾಧಿಸಿದೆ.

ಬಿಜೆಪಿ ಮೂರು ಗ್ರಾಮ ಪಂಚಾಯಿತಿಗಳಲ್ಲಿ ಮಾತ್ರ ಜಯಗಳಿಸಿ ತೃಪ್ತಿಪಟ್ಟಿದೆ. ಕಾಸರಗೋಡು ಜಿಲ್ಲಾ ಪಂಚಾಯಿತಿಯಲ್ಲಿ ಅದು ಏಕೈಕ ದೊಡ್ಡ ಪಕ್ಷವಾಗಿ ಹೊರಹೊಮ್ಮಿರುವುದು ಆ ಪಕ್ಷದ 'ಸಮಾಧಾನದ' ವಿಷಯವಾಗಿದೆ.

115 ಗ್ರಾಮ ಪಂಚಾಯಿತಿಗಳು, 16 ಬ್ಲಾಕ್ ಪಂಚಾಯಿತಿಗಳು, ಏಳು ಪುರಸಭೆಗಳು ಮತ್ತು ಕಾಸರಗೋಡು ಜಿಲ್ಲಾ ಪಂಚಾಯಿತಿ ಮತ್ತು ತಿರುವನಂತಪುರ ನಗರಪಾಲಿಕೆಯಲ್ಲಿ ಯಾವುದೇ ಪಕ್ಷಕ್ಕೆ ಬಹುಮತ ಸಿಕ್ಕಿಲ್ಲ. ಇಲ್ಲಿ ಪಕ್ಷೇತರ ಸದಸ್ಯರು ನಿರ್ಣಾಯಕ ಪಾತ್ರ ವಹಿಸುವ ನಿರೀಕ್ಷೆಯಿದೆ.

ನಿರೀಕ್ಷೆ ತಲೆಕೆಳಗು

ತೀರಾ ಈಚೆಗಷ್ಟೆ ಆಳುವ ಯುಡಿಎಫ್ ನಲ್ಲಿ ಭಿನ್ನಾಭಿಪ್ರಾಯ ತೀವ್ರವಾಗಿ ಕರುಣಾಕರನ್ ಮುಖ್ಯಮಂತ್ರಿ ಸ್ಥಾನವನ್ನು ತ್ಯಜಿಸಬೇಕಾಗಿತ್ತು. ಅವರ ಸ್ಥಾನಕ್ಕೆ ಎ.ಕೆ.ಆಂಟನಿ ಬಂದಿದ್ದರು. ನಾಯಕತ್ವದಲ್ಲಿ ಬದಲಾವಣೆ ಆಗಿದ್ದರಿಂದ ಕಾಂಗ್ರೆ ಹಾಗೂ ಇಡಿಯಾಗಿ ಆಳುವ ರಂಗಕ್ಕೆ ಹೊಸ ಚೇತನ ಬಂದಿದ್ದು ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಭರ್ಜರಿ ವಿಜಯ ಸಾಧಿಸುವ ನಿರೀಕ್ಷೆಯನ್ನು ವ್ಯಕ್ತಪಡಿಸಲಾಗಿತ್ತು.

ಆದರೆ ಕೇವಲ ವ್ಯಕ್ತಿ ಬದಲಾವಣೆ ಕೇರಳದ ಜನರ ಮೇಲೆ ಯಾವುದೇ ಪರಿಣಾಮ ಬೀರಿಲ್ಲ ಎಂಬುದು ಚುನಾವಣೆ ಫಲಿತಾಂಶಗಳಿಂದ ಸ್ಪಷ್ಟವಾಗಿದೆ. ಸರ್ಕಾರದ ನೀತಿಗಳು ಹಾಗೆಯೇ ಮುಂದುವರಿದಿದ್ದರಿಂದ ಜನರು ಅದಕ್ಕೆ ತಕ್ಕ ಪಾಠ ಕಲಿಸಿದ್ದಾರೆ.

ಸ್ಥಳೀಯ ವಿಷಯಗಳು ಮಾತ್ರವಲ್ಲದೆ ರಾಜ್ಯ ಹಾಗೂ ರಾಷ್ಟ್ರ ರಾಜಕಾರಣದ ವಿಷಯಗಳ ಆಧಾರದಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಹಣಾ ಹಣಿ ನಡೆದಿತ್ತು.

ಕಾಂಗ್ರೆ ಮತ್ತು ಜಾತಿ ಹಾಗೂ ಕೋಮುಶಕ್ತಿಗಳ ವಿರುದ್ಧ ತನ್ನ ಹೋರಾಟ ಎಂದು ಎಲ್ ಡಿ ಎಫ್ ಚುನಾವಣೆ ಪ್ರಣಾಳಿಕೆ ಸ್ಪಷ್ಟಪಡಿಸಿತ್ತು. ಪುರಸಭೆಗಳು, ನಗರಪಾಲಿಕೆಗಳು ಮಾತ್ರವಲ್ಲದೆ ಗ್ರಾಮ, ಬ್ಲಾಕ್ ಹಾಗೂ ಜಿಲ್ಲಾ ಪಂಚಾಯಿತಿಗಳಲ್ಲೂ ಅಭಿವೃದ್ಧಿಯನ್ನು ಸಾಧಿಸಲು ಆಳುವ ಹಾಗೂ ಪ್ರತಿ ಪಕ್ಷಗಳು ಒಗ್ಗೂಡಿ ಕೆಲಸ ಮಾಡಬೇಕೆಂದು ಎಲ್ ಡಿ ಎಫ್ ಕರೆ ಕೊಟ್ಟಿತ್ತು.

ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚು ಆರ್ಥಿಕ ಹಾಗೂ ಕೇಂದ್ರ ಮತ್ತು ರಾಜ್ಯ ಸರಕಾರಗಳಿಂದ ಅಧಿಕ ಹಣಕಾಸಿನ ಮತ್ತು ಸಿಬ್ಬಂದಿ ನೆರವನ್ನು ಪಡೆಯಲು ಹೋರಾಟ ನಡೆಸಲು ತಾನು ಬದ್ಧ ಎಂದೂ ಎಡ ಪ್ರಜಾಸತ್ತಾತ್ಮಕ ರಂಗ ಘೋಷಿಸಿತ್ತು.

ಎಲ್‌ಡಿಎಫ್ ನಿರ್ದಿಷ್ಟ ವಿಷಯದ ಮೇಲೆ ಹೋರಾಟ ನಡೆಸಿದ್ದರೆ ಯುಡಿಎಫ್ ಕಮ್ಯುನಿಸ್ಟ್ ವಿರೋಧಿ ಧೋರಣೆಯೊಂದನ್ನೇ ಮುಖ್ಯವಾಗಿ ತನ್ನ'ಅಸ್ತ್ರ'ವನ್ನಾಗಿಸಿಕೊಂಡಿತ್ತು. ಅಲ್ಲದೆ ಗಮನವನ್ನು ಬೇರೆಡೆ ಸೆಳೆಯುವ ಹಲವು ತಂತ್ರಗಳನ್ನು ಅನುಸರಿಸಿತ್ತು.

ಇವ್ಯಾವುವೂ ಅದರ ಸಹಾಯಕ್ಕೆ ಬರಲಿಲ್ಲ. ಅದು ಸೋಲುಂಡಿತು. ಜನಪರ ಧೋರಣೆಗಳೊಂದಿಗೆ ಸದಾ ಹೋರಾಟ ನಡೆಸುತ್ತಿರುವ ಸಿಪಿಐ(ಎಂ) ನೇತೃತ್ವದ ರಂಗ ಜಯಶಾಲಿಯಾಯಿತು.

ಕೈಗೆಟುಕದ ದ್ರಾಕ್ಷಿ ಹುಳಿ....

'ಕೈಗೆಟುಕದ ದ್ರಾಕ್ಷಿ ಹುಳಿ...' ಎಂಬ ನರಿಯ ಕತೆ ನಿಮಗೆಲ್ಲ ಗೊತ್ತೇ ಇದೆ. ಅಥವಾ "ಕೈಲಾಗದವ ಮೈಪರಚಿಕೊಂಡ" ಎಂಬ ಮಾತು ಕೂಡ ಗೊತ್ತೇ ಇದೆ. ಕೇರಳದಲ್ಲಿ ಯುಡಿಎಫ್ 'ರಂಗ' ನೋಡಿದರೆ ಈ ಮಾತು-ಕತೆ ನೆನಪಾಯಿತು.

'ಚುನಾವಣೆಗಳಲ್ಲಿ ಎಲ್ ಡಿ ಎಫ್ ಗೆಲ್ಲಲು ಅದು ಬಿಜೆಪಿ ಮತ್ತು ಇಂಡಿಯನ್ ನ್ಯಾಷನಲ್ ಲೀಗ್(ಐಎನ್ ಎಲ್) ನೊಂದಿಗೆ ಮಾಡಿಕೊಂಡ 'ಅಪವಿತ್ರ ಮೈತ್ರಿಯೇ' ಕಾರಣ. ಯುಡಿಎಫ್ ನ'ಉನ್ನತ ಮಟ್ಟದ' ಸಮಿತಿ ಈ ತೀರ್ಪನ್ನು ನೀಡಿದೆ.

ಕೋಮುವಾದಿ ಹಾಗೂ ಜಾತಿವಾದಿ ಶಕ್ತಿಗಳ ವಿರುದ್ಧ ಎಲ್ ಡಿ ಎಫ್ ನ ರಾಜಿ ರಹಿತ ಹೋರಟ ತಿಳಿದಿರುವ ಯಾರಿಗಾದರೂ ಯುಡಿಎಫ್ ನ ಈ ವಿಶ್ಲೇಷಣೆ ಎಷ್ಟೊಂದು ಹಾಸ್ಯಾಸ್ಪದ ಹಾಗೂ ಆಧಾರ ರಹಿತ ಎನ್ನುವುದು ತಿಳಿಯುತ್ತದೆ.

ಜಿಲ್ಲೆ	ಒಟ್ಟು ಕ್ಷೇತ್ರಗಳು	ಎಲ್‌ಡಿಎಫ್	ಯುಡಿಎಫ್	ಸ್ವತಂತ್ರ ಅಭ್ಯರ್ಥಿಗಳು
ತಿರುವನಂತಪುರ	25	19	5	1
ಕೊಲ್ಲಮ್	25	19	2	4
ಪಟ್ಟಣಂತಿಟ್ಟಾ	15	2	13	0
ಅಳಪ್ಪುಳ	21	12	9	0
ಕೊಟ್ಟಾಯಂ	21	11	10	0
ಇಡುಕ್ಕಿ	15	8	6	1
ಎರ್ನಾಕುಳಂ	24	16	8	0
ತ್ರಿಸೂರ್	25	18	7	0
ಪಾಲಕ್ಕಾಡ್	25	18	7	0
ಮಲಪ್ಪುರಂ	25	3	22	0
ಕೋಳಿಕ್ಕೋಡ್	25	15	9	1
ವೈನಾಡು	15	6	9	0
ಕಣ್ಣಾನೂರು	22	14	8	0
ಕಾಸರಗೋಡು	15	7	5	2(ಬಿಜೆಪಿ)+1

ಭಾರತದ ರಕ್ಷಣಾ ಹಿತಾಸಕ್ತಿಗಳಿಗೆ ಕೇಡುಂಟು ಮಾಡಲು 'ರಾವ್ ಸರಕಾರ ಬಿಡಬಾರದು'

-ಪೊಲಿಟ್ ಬ್ಯೂರೋ

ವರ್ಷದ ಆರಂಭದಲ್ಲಿ ನರಸಿಂಹ ರಾವ್ ಸರಕಾರ ಮಾಡಿಕೊಂಡ ಭಾರತ-ಅಮೇರಿಕಾ ಮಿಲಿಟರಿ ಸಹಕಾರದ ಒಪ್ಪಂದವನ್ನು ರದ್ದುಗೊಳಿಸಬೇಕು ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಒತ್ತಾಯಿಸಿದೆ. ಈಗ ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರ ಪೂರೈಕೆ ಮತ್ತೆ ಆರಂಭಿಸುವ ಅಮೇರಿಕಾದ ನಿರ್ಣಯ ನರಸಿಂಹರಾವ್ ಸರಕಾರ ಅಮೇರಿಕದೊಂದಿಗೆ ಮಿಲಿಟರಿ ಸಹಕಾರಕ್ಕೆ ಇಳಿದುದರ ಹಿಂದಿರುವ ದಡ್ಡತನವನ್ನು ಬಯಲಿಗೆಳೆದಿದೆ ಎಂದು ಪಿ.ಬಿ. ಬಲವಾಗಿ ಖಂಡಿಸಿದೆ. ಅಮೇರಿಕನ್ ಸೆನೆಟ್ ಪ್ರೆಸ್ಲರ್ ತಿದ್ದುಪಡಿಯಿಂದ ವಿನಾಯ್ತಿ ನೀಡಿ ಪಾಕಿಸ್ತಾನಕ್ಕೆ 370 ಮಿಲಿಯ ಡಾಲರುಗಳ ಶಸ್ತ್ರಾಸ್ತ್ರ ಕೊಡಲು ನಿರ್ಧರಿಸಿದೆ. ಇದಕ್ಕೆ ಕ್ಲಿಂಟನ್ ಆಡಳಿತದ ಸಕ್ರಿಯ ಬೆಂಬಲವೂ ಇದೆ. ಇದರಿಂದ ಈ ಉಪಖಂಡದಲ್ಲಿ ಇನ್ನೊಂದು ಸುತ್ತಿನ ಶಸ್ತ್ರಾಸ್ತ್ರ ಪೈಪೋಟಿ ನಡೆಯಲಿದೆ. ದಕ್ಷಿಣ ಏಷ್ಯಾದಲ್ಲಿ ಶಾಂತಿಗೆ ಭಂಗ ತರಲಿದೆ ಇದೊಂದು ಅಮೇರಿಕಾ ಸಂಯುಕ್ತ ಸಂಸ್ಥಾನದ ಅಪಾಯಕಾರಿ ಹೆಜ್ಜೆ ಎಂದು ಸಿಪಿಐ(ಎಂ) ಬಲವಾಗಿ ಖಂಡಿಸಿದೆ.

ಭಾರತ ಮತ್ತು ಪಾಕಿಸ್ತಾನ ಎರಡನ್ನೂ ತನ್ನ ಜಾಗತಿಕ ಸಮರ ತಂತ್ರದ ಕಕ್ಷೆಯೊಳಗೆ ಸೆಳೆದು, ಎರಡೂ ದೇಶಗಳನ್ನು ಮಿಲಿಟರಿ ಸಂಬಂಧಗಳ ಮೂಲಕ ತನ್ನ ನೊಗಕ್ಕೆ ಕಟ್ಟಿ ದಕ್ಷಿಣ ಏಷ್ಯಾದಲ್ಲಿ ಯಜಮಾನಿಕೆ ನಡೆಸುವುದು ಸದಾ ಅಮೇರಿಕಾದ ತಂತ್ರ. ಅಂತಹ ಒಂದು ಯೋಜನೆ ಭಾರತದ ಸಾರ್ವಭೌಮತೆ ಹಾಗೂ ರಾಷ್ಟ್ರೀಯ ಹಿತಾಸಕ್ತಿಗಳನ್ನು ಗಂಭೀರ ಅಪಾಯಕ್ಕೀಡುಮಾಡುತ್ತದೆ. ಪಾಕಿಸ್ತಾನಕ್ಕೆ ಅಮೇರಿಕಾದ ಆಳವಾದ ಬದ್ಧತೆ ತಿಳಿದಿದ್ದರೂ ಕಾಂಗ್ರೆಸ್(ಐ) ಸರಕಾರ ಅಮೇರಿಕಾದೊಂದಿಗೆ ಈ ಅಪಾಯಕಾರಿ ಸಂಬಂಧಕ್ಕೆ ಮುಂದಾಯಿತು. ಒಂದು ವಾರದ ಹಿಂದೆಯಷ್ಟೇ ಭಾರತ ಸರಕಾರ ತನ್ನ ರಕ್ಷಣಾ ಕಾರ್ಯದರ್ಶಿಯನ್ನು ಮಿಲಿಟರಿ ವಿಷಯಗಳ ಮೇಲೆ ಸಿವಿಲಿಯನ್ ನೀತಿಗಳನ್ನು ರೂಪಿಸುವ ಬಗ್ಗೆ ಉಚ್ಚಮಟ್ಟದ ಮಾತುಕತೆಗಳಿಗೆ ವಾಶಿಂಗ್‌ಟನ್‌ಗೆ ಕಳಿಸಿತ್ತು. ಭಾರತದೊಂದಿಗೆ ತನ್ನ ಸಂಬಂಧಗಳೇನೇ ಇದ್ದರೂ ಪಾಕಿಸ್ತಾನದೊಂದಿಗೆ ತನ್ನ ಮಿಲಿಟರಿ ಸಂಬಂಧಗಳಿಗೆ ಅದರಿಂದ ತೊಂದರೆಯಾಗದಂತೆ ನೋಡಿಕೊಳ್ಳುವುದಾಗಿ ಅಮೇರಿಕನ್ ಆಡಳಿತ ಸ್ಪಷ್ಟಪಡಿಸಿದ ಮೇಲೂ ನರಸಿಂಹರಾವ್ ಸರಕಾರ ಹೀಗೆ ಮಾಡಿದೆ.

ಆದ್ದರಿಂದ ಭಾರತ-ಅಮೇರಿಕಾ ಮಿಲಿಟರಿ ಒಪ್ಪಂದವನ್ನು ರದ್ದುಮಾಡಬೇಕು ಎಂದು ಒತ್ತಾಯಿಸುವ ಭಾರತದ ಭದ್ರತಾ ಹಿತಾಸಕ್ತಿಗಳಿಗೆ ಹೀಗೆ ಕೇಡುಂಟುಮಾಡಲು ಅದಕ್ಕೆ ಅವಕಾಶ ಕೊಡಲು ಸಾಧ್ಯವಿಲ್ಲ ಎಂಬುದನ್ನು ರಾವ್ ಸರಕಾರ ಅರಿಯಬೇಕು ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಹೇಳಿದೆ.

ಪೊಲಿಟ್ ಬ್ಯೂರೋ ಹೇಳಿಕೆಗಳು

1. ಚುನಾವಣಾ ಸಮಯದ ಬಗ್ಗೆ: ಸಿಪಿಐ(ಎಂ) ಮುಂದಿನ ಸಾರ್ವತ್ರಿಕ ಚುನಾವಣೆ 1996ರ ಫೆಬ್ರವರಿ 20ರಿಂದ ಮಾರ್ಚ್ ಮೊದಲ ಭಾಗದ ಸಮಯದಲ್ಲಿ ಆಗಬೇಕೆಂದು ಬಯಸುತ್ತದೆ. ಲೋಕಸಭೆ ಮತ್ತು ವಿಧಾನಸಭೆಗಳಿಗೆ(ಎಲ್ಲೆಲ್ಲಿ ಆಗಬೇಕೋ ಅಲ್ಲಿ) ಏಕಕಾಲಕ್ಕೆ ಆಗಬೇಕು ಮತ್ತು ದೇಶದಾದ್ಯಂತ ಮತದಾನ ಎರಡು ಅಥವಾ ಮೂರು ದಿನಗಳಲ್ಲಿ ಆಗಬೇಕು ಮತ್ತು ಈ ದಿನಗಳ ನಡುವಿನ ಅಂತರ ಬಹಳವಿಲ್ಲದೆ ಒಂದು ವಾರದ ಅವಧಿಯಲ್ಲಿ ಪೂರ್ಣಗೊಳ್ಳುವಂತಾಗಬೇಕು.

2. ಫೋಟೋ ಗುರುತಿನ ಚೀಟಿ: ಫೋಟೋ ಗುರುತಿನ ಚೀಟಿ ನೀಡುವ ಕಾರ್ಯ ಮುಂದುವರೆಯಬೇಕೆಂದು ಸಿಪಿಐ(ಎಂ) ಬಯಸುತ್ತದೆ. ಏಕೆಂದರೆ ಇದರಿಂದ ಚುನಾವಣೆಯಲ್ಲಿ ನಡೆದ ಕೆಲ ಬಗೆಯ ಅಕ್ರಮಗಳು ಇಲ್ಲವಾಗುತ್ತವೆ. ಆದರೆ ಫೋಟೋ ಗುರುತಿನ ಚೀಟಿ ನೀಡುವ ಪ್ರಕ್ರಿಯೆ ಎಲ್ಲಾ ರಾಜ್ಯಗಳಲ್ಲೂ ಒಂದೇ ವೇಗದಲ್ಲಿ ಆಗುತ್ತಿಲ್ಲ. ಆದ್ದರಿಂದ ಫೋಟೋ ಗುರುತಿನ ಚೀಟಿ ನೀಡಿಲ್ಲವೆಂಬ ಕಾರಣಕ್ಕೆ ಅವರ ಮತದಾನದ ಹಕ್ಕನ್ನು ಕಸಿದುಕೊಳ್ಳುವುದು ಸರಿಯಲ್ಲ. ಮತದಾರರ ಪಟ್ಟಿಯಲ್ಲಿ ಹೆಸರಿರುವ ಎಲ್ಲಾ ಮತದಾರರಿಗೂ ಮತದಾನ ಮಾಡಲು ಅವಕಾಶ ನೀಡಬೇಕು.

3. ಚುನಾವಣಾ ಆಯೋಗ ಧಾರ್ಮಿಕ ಮತ್ತು ಮತೀಯ ಆಧಾರದ ಮೇಲೆ ಮತ ಯಾಚಿಸುವುದರ ಮೇಲೆ ನಿರ್ಬಂಧ ವಿಧಿಸಬೇಕು. ಚುನಾವಣಾ ವೆಚ್ಚವನ್ನು ತಡೆಯುವಲ್ಲಿ ತೋರಿದ ಆಸಕ್ತಿ ಮತ್ತು ಚುರುಕುತನವನ್ನು ಚುನಾವಣಾ ಆಯೋಗ ಧರ್ಮದ ದುರುಪಯೋಗದ ವಿಷಯದಲ್ಲೂ ತೋರಬೇಕು.

4. ಚುನಾವಣೆಗಳಲ್ಲಿ ಅಕ್ರಮ ಹಣದ ಬಳಕೆಯಾಗುವುದನ್ನು ತಡೆಗಟ್ಟುವಲ್ಲಿ ಚುನಾವಣಾ ಆಯೋಗ ತೆಗೆದುಕೊಂಡ ಕ್ರಮಗಳನ್ನು ಸಿಪಿಐ(ಎಂ) ಪ್ರಶಂಸಿಸಿತು. ಮುಂದಿನ ಲೋಕಸಭಾ ಚುನಾವಣೆಗಳಲ್ಲೂ ಇದನ್ನು ಮುಂದುವರಿಸಬೇಕೆಂದು ಅದು ಆಯೋಗವನ್ನು ಕೋರಿದೆ.

5. ಈಗ ಸಂಸತ್ತಿನಲ್ಲಿ ಇರುವ ಜನತೆಯ ಪ್ರಾತಿನಿಧ್ಯ(ತಿದ್ದುಪಡಿ) ಮಸೂದೆ ಮುಂದಿನ ಚಳಿಗಾಲ ಅಧಿವೇಶನದಲ್ಲಿ ಪಾಸಾಗಬೇಕೆಂದು ಸಿಪಿಐ(ಎಂ)ನ ಇಚ್ಛೆ. ಇದರಿಂದ ಮಾದರಿ ನಡಾವಳಿಯನ್ನು ಕಾನೂನು ರಿತ್ಯಾ ಜಾರಿಗೊಳಿಸುವುದು ಸಾಧ್ಯವಾಗುತ್ತದೆ.

1991ರ ನಂತರ ಮೊದಲ ಬಾರಿಗೆ ಚುನಾವಣಾ ಆಯೋಗ ರಾಜಕೀಯ ಪಕ್ಷಗಳ ಸಭೆಯನ್ನು ಈಗ ಕರೆದಿದೆ ಎಂಬುದನ್ನು ಗಮನಿಸುತ್ತಾ ಈ ಪರಸ್ಪರಿಕ ಸಮಾಲೋಚನೆಯನ್ನು ನಿರಂತರವಾಗಿ ನಡೆಸಬೇಕೆಂದು ಸಿಪಿಐ(ಎಂ) ಬಯಸಿತು.

ಜಮ್ಮು ಕಾಶ್ಮೀರದ ಬಗ್ಗೆ ಸಿಪಿಐ(ಎಂ) ಅಲ್ಲಿ ಚುನಾವಣೆ ನಡೆಯಬೇಕೆಂದು ಬಯಸುತ್ತದೆ. ಆದರೆ ಅದಕ್ಕೆ ಕೂಡಲೇ ರಾಜಕೀಯ ಪ್ರಕ್ರಿಯೆಯನ್ನು ಪ್ರಾರಂಭಿಸಿ ಪರಿಸ್ಥಿತಿಯನ್ನು ಜನರ ಭಾಗವಹಿಸುವಿಕೆಗೆ ತಕ್ಕಂತೆ ಪಕ್ವಗೊಳಿಸಬೇಕು.

ಕಲ್ಲಿದ್ದಲು ಗಣಿ ದುರಂತದ ಬಗ್ಗೆ

ಬಿಹಾರ್‌ನ ಧನ್‌ಬಾದ್ ಹತ್ತಿರದ ಭಾರತ್ ಕುಕಿಂಗ್ ಕೋಲ್ ಲಿಮಿಟೆಡ್ ನ ಸ್ವಾಮ್ಯದ ನಾಲ್ಕು ಗಣಿಗಳಲ್ಲಿ ದೊಡ್ಡ ಸಂಖ್ಯೆ ಕಾರ್ಮಿಕರು ಸತ್ತಿರುವುದಕ್ಕೆ ಸಿಪಿಐ(ಎಂ) ಪೊಲಿಟ್ ಬ್ಯೂರೋ ಅತೀವ ಶೋಕ ವ್ಯಕ್ತಪಡಿಸಿದೆ. ಬಿ.ಸಿ.ಸಿ.ಎಲ್.ನ ಮ್ಯಾನೇಜ್‌ಮೆಂಟ್ ನಿರ್ಲಕ್ಷ್ಯದಿಂದಾಗಿ ಈ ದುರಂತ ಸಂಭವಿಸಿದೆ. ಗಣಿಗಳೊಳಗೆ ಕೆಲಸ ಮಾಡುತ್ತಿದ್ದ ಕಾರ್ಮಿಕರಿಗೆ ನೀರಿನ ಮಟ್ಟ ಏರುತ್ತಿರುವುದರ ಬಗ್ಗೆ ಎಚ್ಚರಿಕೆ ನೀಡುವಲ್ಲಿ ದು ವಿಫಲವಾಗಿದೆ. ಕಾರ್ಮಿಕರನ್ನು ಅಲ್ಲಿಂದ ಪಾರು ಮಾಡುವಲ್ಲಿ ಅದು ವಿಫಲವಾಗಿದೆ. ಇದು ಮ್ಯಾನೇಜ್‌ಮೆಂಟ್ ಹಾಗೂ ಗಣಿ ಸುರಕ್ಷತೆಯ ಡೈರೆಕ್ಟರ್ ಜನರಲ್ ರ ಕಛೇರಿಯ ಕ್ರಿಮಿನಲ್ ಬೇಜವಾಬ್ದಾರಿತನದಿಂದ ಉಂಟಾಗಿದೆ.

ಕೇಂದ್ರ ಸರಕಾರ ಈ ದುರಂತಕ್ಕೆ ಜವಾಬ್ದಾರರಾದವರಿಗೆ ಕಠಿಣ ಶಿಕ್ಷೆ ನೀಡಬೇಕು ಮತ್ತು ಈ ದುರಂತದಲ್ಲಿ ನೊಂದವರಿಗೆ ಸೂಕ್ತ ಪರಿಹಾರ ನೀಡಬೇಕೆಂದು ಸಿಪಿಐ(ಎಂ) ಒತ್ತಾಯಿಸುತ್ತದೆ.

ಎನ್ರೋನ್‌ನೊಂದಿಗೆ ಮರುಮಾತುಕತೆ ಬೇಡ

-ಸಿಪಿಐ(ಎಂ) ಪೊಲಿಟ್ ಬ್ಯೂರೋ

ಎನ್ರೋನ್‌ನೊಂದಿಗೆ ಧಬೋಲ್ ವಿದ್ಯುತ್ ಯೋಜನೆಯ ಬಗ್ಗೆ ಮರುಮಾತುಕತೆ ನಡೆಸಲು ತನ್ನ ಸರಕಾರ ಸಿದ್ಧವಿದೆಯೆಂದು ಮಹಾರಾಷ್ಟ್ರ ಮುಖ್ಯಮಂತ್ರಿಯವರ ಸೂಚನೆಗೆ ಸಿಪಿಐ(ಎಂ) ಪೊಲಿಟ್ ಬ್ಯೂರೋ ತನ್ನ ಬಲವಾದ ವಿರೋಧವನ್ನು ವ್ಯಕ್ತಪಡಿಸಿದೆ. ಒಂದು ರಾಜ್ಯ ಮಂತ್ರಿಮಂಡಲದ ಉಪ ಸಮಿತಿ ಈ ಯೋಜನೆಯ ಶರತ್ತುಗಳ ಸಮಗ್ರ ಅಧ್ಯಯನ ನಡೆಸಿದ ನಂತರ ಶಿವಸೇನಾ-ಬಿಜೆಪಿ ಸರಕಾರ ರಾಜ್ಯದ ಹಿತಾಸಕ್ತಿಗಳಿಗೆ ವಿರುದ್ಧವಾದುದರಿಂದ, ರಾಜ್ಯದ ಖಜಾನೆಗೆ ಹೊರೆಯೆನಿಸಿದ್ದರಿಂದ ವ್ಯವಹಾರವನ್ನು ರದ್ದು ಮಾಡಲಾಗಿತ್ತು.

ಧಬೋಲ್ ಯೋಜನೆಯನ್ನು ರಚಿಸಬೇಕಾದರೆ ಅದು ಬಹಿರಂಗ ಟೆಂಡರ್‌ಗಳ ಮೂಲಕ ಹೊಸದಾಗಿ ಸ್ಪರ್ಧಾತ್ಮಕ ಬಿಡ್ಡಿಂಗ್ ನಡೆಸಿದ ಮೇಲೆಯೇ ಆಗಬೇಕು. ಕೇವಲ ಎನ್ರೋನ್‌ನೊಂದಿಗೆ ಮಾತ್ರ ಮರುಮಾತುಕತೆ ನಡೆಸುವುದೆಂದರೆ ಒಂದೋ ಶಿವಸೇನಾ-ಬಿಜೆಪಿ ಸರಕಾರ ಈ ವ್ಯವಹಾರವನ್ನು ರದ್ದು ಮಾಡುವಾಗ ಗಂಭೀರತೆಯಿಂದ ವರ್ತಿಸಿಲ್ಲ ಎಂದಾಗುತ್ತದೆ. ಇಲ್ಲವೇ ಈ ಅಮೇರಿಕನ್ ಕಂಪೆನಿಯ ಒತ್ತಡಕ್ಕೆ ಬಲಿಯಾಗಿರಬೇಕು ಎಂದು ಪೊಲಿಟ್ ಬ್ಯೂರೋ ಅಭಿಪ್ರಾಯಪಟ್ಟಿದೆ.

ಎನ್ರೋನ್ ಯೋಜನೆಯ ರದ್ದತಿ ಬಿಜೆಪಿ ಚುನಾವಣಾ ಪ್ರಚಾರ ಕಾಲದಲ್ಲಿ ಜನತೆಗೆ ನೀಡಿದ ವಚನ. ಈ ವಿಷಯದಲ್ಲಿ ಜನ ನೀಡಿದ ಆದೇಶದಿಂದ ಹಿಂದೆ ಸರಿಯಬಾರದು ಎಂದು ಪೊಲಿಟ್ ಬ್ಯೂರೋ ಒತ್ತಾಯಿಸಿದೆ.